ಕನ್ನಡನುಡಿ

ಸಂಪುಟ ೧೫ ಜುಲೈ ಸಂಚಿಕೆ ೭

ವಾರ್ಷಿಕ ಚಂದಾ : ಅಂಚೆ ವೆಚ್ಚ ಸೇರಿ ರೂ. ೩

ಸಂಪಾದಕರು :
ಎಂ. ಆರ್. ಶ್ರೀನಿವಾಸಮೂರ್ತಿಗಳು

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೫೨

ವಿಷಯಸೂಚಿಕೆ

ಮೈಸೂರು ವಿದ್ಯಾಖಾತೆಯವರಿಂದ ಟಿ. ಬಿ. ಶಿ. 15/50-51 (ತಾ॥ 24-11-50) ನಿರೂಪದ ಪ್ರಕಾರ 'ಕನ್ನಡ ನುಡಿ' ಯನ್ನು ಸಂಸ್ಥಾನದ ಎಲ್ಲಾ ಹೈಸ್ಕೂಲು, ಮಿಡಲ್ ಸ್ಕೂಲು ಮತ್ತು ಟ್ರೈಯಿನಿಂಗ್ ಸಂಸ್ಥೆಗಳ ಪುಸ್ತಕ ಭಂಡಾರಗಳಿಗೆ ತರಿಸಿಕೊಳ್ಳಬಹುದೆಂದು ಮಂಜೂರಾಗಿದೆ. ರೂರಲ್ ಡೆವಲಪ್‌ಮೆಂಟ್ ಕಮಿಷನರ್ ಅವರ ನಂ.ಆರ್.ಡಿ.ಆರ್. 7, ಸಿ.2915/50-51 ನೆಯ ಪ್ರಕಾರ "ಕನ್ನಡ ನುಡಿ" ಸಂಸ್ಥಾನದ ಎಲ್ಲಾ ಗ್ರಾಮಪಂಚಾಯಿತಿಗಳಿಗೂ ತರಿಸಿಕೊಳ್ಳಬಹುದೆಂದು ಮಂಜೂರಾಗಿದೆ.

ಕನ್ನಡನುಡಿ



ಸಂಪುಟ ೧೫ | ಜುಲೈ ೧೯೫೨ | ಸಂಚಿಕೆ ೭

ಪ್ರಾರ್ಥನೆ

ಶ್ರೀಮಹಿಮಾಸ್ಪದಂ ಭುಜಗಚಕ್ರಧರಂ ದ್ವಿಜರಾಜಭೂಷಣಂ
ಕಾಮದನರ್ಜುನೋದ್ಧರುಚಿ ಗೋಪಮನೋಹರಮೂರ್ತಿ ಭಾಸ್ವದ
ಬ್ಜಾಮಳನೇತ್ರನಾದಿಪುರುಷಂ ಪರಮೇಶ್ವರನೊಲ್ದು ದೇವಚೂ-
ಡಾಮಣಿ ಸಂತತಂ ಹರಿಹರಂ ಪರಿರಕ್ಷಿಸುತಿರ್ಕೆ ಧಾತ್ರಿಯಂ

ಹರಿಯಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
ಹರನಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
ನರರಾಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಶೋಭಾ
ಕರಮಪ್ಪಂತೊಂದೆ ರೂಪಂ ತಳೆದ ಹರಿಹರಂ ಕೂರ್ತು ರಕ್ಷಿಕ್ಕೆ ನಮ್ಮಂ

ಶ್ರೀರಾಮಾವಲ್ಲಭಂ ಸದ್ಗುಣಗಣನಿಲಯಂ ಸರ್ವಗಂ ಸರ್ವಲೋಕಾ
ಧಾರಂ ಭಕ್ತಪ್ರಿಯಂ ಶಾಶ್ವತನಖಿಳಜಗದ್ವಂದ್ಯನಾನಂದರೂಪಂ
ಕ್ಷೀರಾಂಭೋರಾಶಿಸಂಸ್ಥಂ ಭವದುರಿತಹರಂ ಮುಕ್ತಿದಂ ಭಕ್ತಿಗಮ್ಯಂ
ಕಾರುಣ್ಯಾಂಭೋಧಿ ನಾರಾಯಣನೆಮಗಮಳಾನಂದಮಂ ಮಾಳ್ಕನಂತಂ

ಸುಭಾಷಿತಗಳು

ಕಾಲಚಕ್ರಂ ಪೊರಳೆ, ಮುಚ್ಚಿದುದು ಬೆಳಕಕ್ಕುಂ, ಇರ್ದುದಿಲ್ಲಕುಂ ;
ಆಗದು ಇದೆನಲ್ಲಿಪ್ಪುದೊಂದಿಲ್ಲ— ಘೋರ ಪ್ರತಿಜ್ಞೆಯುಂ, ಛಲಮುಂ,
ತಾಮೆ ತಾಮೋಡುಗುಂ!

❊

ಒಂದು ಪಗಲೆತ್ತುವುದು, ಒಂದು ಪಗಲುರುಳಿಪುದು
ಮಾನುಷಮನೆಲ್ಲಮನ್ ಮಿತಿಯುಱಿದು ನೆಗೞ್ದರ್ಗೆ
ದೇವರ್ಕಳೊಸೆದಪರ್—ಮುಱಿದಪರ್ ಮಿಕ್ಕರನ್

❊

ಕೆಳೆಯಂಗೆ ಸೋಲ್ವುದೆ ಜಯಂ ; ಕ್ಷಮೆಯೆ ತಾನ್ ಜಯಂ ;
ಕ್ರೋಧಮನ್ ತುೞಿದಿಟ್ಟು. ಬಲ್ಪಿಡಿದು ಧರ್ಮಮನ್
ಬಗೆಯೊಡನೆ ಪೋರಾಡುವುದೆ ಜಯಂ

ಶ್ರೀ ಅಶ್ವತ್ಥಾಮನ್

ಕಾಷ್ಠಾದಗ್ನಿರ್ಜಾಯತೇ ಮಥ್ಯಮಾನಾತ್
ಭೂಮಿಸ್ತೋಯಂ ಖನ್ಯಮಾನಾ ದದಾತಿ ।
ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಂ
ಮಾರ್ಗಾರಬ್ಧಾಃ ಸರ್ವಯತ್ನಾಃ ಫಲನ್ತಿ ॥

ಭಾಸ : ಪ್ರತಿಜ್ಞಾಯೌಗನ್ಧರಾಯಣ

ಕಡೆಕಡೆಯೆ ಮರಗೊರಡ, ಬೆಂಕಿ ತಾನುದಿಸುವುದು
ಅಗೆಯಗೆಯೆ ನೆಲನನದು ನೀರೊಗೆದು ಚಿಮ್ಮುವುದು.
ಉತ್ಸಾಹವಂತಂಗಸಾಧ್ಯವೆಂಬುದದಿಲ್ಲ.
ಸರಿದಾರಿಯಲಿ ಮಾಳ್ಪ ಯತ್ನ ಫಲಿಸುವುವೆಲ್ಲ.

ಅನುವಾದಕ : ಎಲ್. ಗುಂಡಪ್ಪ

ಕರ್ನಾಟಕದ ಪುನರುಜ್ಜೀವನ

(ಸಾಹಿತ್ಯ ಕ್ಷೇತ್ರದಲ್ಲಿ)

ಶ್ರೀ ಸ. ಸ. ಮಾಳವಾಡ

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಮ್ಮ ಸಾಹಿತ್ಯದ ಪುನರುಜ್ಜೀವನದ ಮೂರು ಮೆಟ್ಟಲುಗಳನ್ನು ನಾವು ಕಾಣುತ್ತೇವೆ. ೧೨ನೆಯ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ಕ್ರಾಂತಿಯು ಸಾಹಿತ್ಯದಲ್ಲಿ ಅದ್ಭುತ ಕಾಂತಿಯನ್ನು ಬೀರಿತು. ಅದು ಕನ್ನಡ ಸಾಹಿತ್ಯದ ಮೊದಲನೆಯ ಪುನರುಜ್ಜೀವನ. ವಿಜಯನಗರ ಸಾಮ್ರಾಜ್ಯದ ಶಕ್ತಿಯು ನಮ್ಮ ಸಾಹಿತ್ಯ ವಿಕಾಸಕ್ಕೆ ಒದವಿಸಿದ ಪ್ರಚೋದನೆಯು ಪುನರುಜ್ಜೀವನದ ಎರಡನೆಯ ಮೆಟ್ಟಲಾಗಿದೆ. ಚಿಕದೇವರಾಯನ ಕಾಲದ ಸಾಹಿತ್ಯ ಪೋಷಣೆಯಲ್ಲಿ ನಾವು ಮೂರನೆಯ ಘಟ್ಟವನ್ನು ಕಾಣುತ್ತೇವೆ. ಆಧುನಿಕ ಕಾಲದ ನಾಲ್ಕನೇ ಹಂತವನ್ನು ಗುರಿತಿಸುವ ಪ್ರಯತ್ನ ಈ ಉಪನ್ಯಾಸದಲ್ಲಿದೆ.

ಮೈಸೂರಿನ ಮುಮ್ಮಡಿ ಕೃಷ್ಣರಾಜರ ಸ್ವತಂತ್ರ ಆಳಿಕೆಯ ಅವಧಿಯಲ್ಲಿ ೧೮೨೩ರಲ್ಲಿ ಕೆಂಪುನಾರಾಯಣನು ಮುದ್ರಾಮಂಜೂಷವನ್ನು ರಚಿಸಿದಾಗಲೇ ಹೊಸಗನ್ನಡದ ಛಾಯೆ ಹೊರಹೊಮ್ಮಿತು. ಹೊಸಯುಗದ ಸಾಹಿತ್ಯದ ರಚನೆಗೆ ಪೂರ್ವಭಾವಿಯಾಗಿ, ಮುಮ್ಮಡಿ ಕೃಷ್ಣರಾಜರ ಆಳಿಕೆಯಲ್ಲಿ ವಿಪುಲವಾಗಿ ಗ್ರಂಥರಚನೆಯ ಕಾರ್ಯ ನಡೆಯಿತು ಸ್ವತಃ ಕೃಷ್ಣರಾಜರ ಹೆಸರಿನಲ್ಲಿ ಐವತ್ತು ಗ್ರಂಥಗಳಿವೆ. ಅವರ ಆಸ್ಥಾನದ ವಿದ್ವದ್ಗೋಷ್ಠಿಯ ನೆರವಿನಿಂದ ಅನೇಕ ಕೃತಿಗಳು ಆಗ ಹೊರಹೊಮ್ಮಿದವು. ಅರಸುಮನೆತನದ ಅಳಿಯ ಲಿಂಗರಾಜರೇ ೪೭ ಗ್ರಂಥಗಳನ್ನು ಬರೆದರು. ಅವರ ಸಂಪರ್ಕದಲ್ಲಿ ಬೆಳೆದ ಸಾಧಾರಣ ತರಗತಿಯ ಸೇವಕರಲ್ಲಿಯೂ ಕಾವ್ಯಶಕ್ತಿ ಕುದುರಿತ್ತೆಂದು ಹೇಳಲಾಗುತ್ತಿದೆ. ಕೃಷ್ಣರಾಜರ ಆಶ್ರಿತ ನಂಜುಂಡನೆಂಬ ಕವಿ ಹದಿಮೂರು ಗ್ರಂಥಗಳನ್ನು ರಚಿಸಿದ್ದಾನೆ. ಈಗಾಗಲೇ ಅನೇಕ ಯಕ್ಷಗಾನ ಕೃತಿಗಳು ರಚಿತವಾಗಿದ್ದುವು. ೧೮೩೮ಕ್ಕೆ ಮೊದಲನೇ ಕೃಷ್ಣಮಾಚಾರ್ಯರು ಹೊಸಗನ್ನಡ ನುಡಿಗನ್ನಡಿಯನ್ನು ಬರೆದಿರುವದರಿಂದ ಈ ಮೊದಲೇ ಹೊಸಗನ್ನಡವು ಉದಯವಾಗಿತ್ತೆಂದು ತಿಳಿಯಬಹುದು.

ಆಂಗ್ಲವಿದ್ಯಾಪ್ರಭಾವದಿಂದ ತಲೆದೋರಿದ ನವೀನ ಶಿಕ್ಷಣಕ್ರಮ, ಕ್ರೈಸ್ತಮತದ ಮಿಶನರಿಗಳ ವಿದ್ಯಾಪ್ರೇಮ, ಅವರ ಪ್ರಚಾರ ಸಾಹಸ, ಕನ್ನಡ ಮುದ್ರಣಾಲಯಗಳ ಸ್ಥಾಪನೆ, ಇವೆಲ್ಲವೂ ಸಾಹಿತ್ಯ ಕ್ಷೇತ್ರದಲ್ಲಿಯ ಪುನರುಜ್ಜೀವನಕ್ಕೆ ಪುಷ್ಟಿಯನ್ನಿತ್ತವು. ಅರಮನೆ ಗುರುಮನೆಗಳನ್ನುಳಿದು ಜನಮನದಲ್ಲಿ ತಲೆದೋರಿದ ನವೀನ ಸಂಘಟನಾಶಕ್ತಿಯು ಹೊಸ ಚೈತನ್ಯವನ್ನು ತಂದಿತು. ಈ ಹಿನ್ನೆಲೆಯ ವಿವರಣೆಯಲ್ಲಿಯೇ ನಾವು ಪುನರುಜ್ಜೀವನದ ಹಾದಿಯನ್ನು ಗುರುತಿಸುತ್ತೇವೆ.

ಆಂಗ್ಲವಿದ್ಯಾಪ್ರಭಾವವು ಮೊದಲಿಗೆ ಫಲಪ್ರದವಾದುದು ಮದರಾಸು ಭಾಗದ ಕರ್ನಾಟಕದಲ್ಲಿ. ಅಲ್ಲಿ ಕ್ರೈಸ್ತ ಮಿಶನರಿಗಳು ಕನ್ನಡದ ಅಭ್ಯಾಸಕ್ಕೆ ಕೈ ಹಾಕಿ ಉಪಯುಕ್ತವಾದ ಸೇವೆ ಸಲ್ಲಿಸಿದರು. ೧೮೪೨ರ ಹೊತ್ತಿಗೆ ಅವರು ಶಿಲಾಯಂತ್ರದ ನೆರವಿನಿಂದ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಹತ್ತಿದರು. ಕನ್ನಡದಲ್ಲಿ ಮುದ್ರಣಗೊಂಡ ಮಿಶನರಿಗಳ ಪ್ರಕಟನಗಳೇ ಮೊದಲಿನವಾಗಿವೆ. ಹೊಸಗನ್ನಡ ಭಾಷೆಯಲ್ಲಿ ಬಾಯಬಲ್ ಗ್ರಂಥ ೧೮೨೭ರ ಸುಮಾರಿಗೆ ಅನುವಾದ ಹೊಂದಿತು. ರೆವರೆಂಡ್ ರೀವ್ ಹಾಗು ಕಿಟಲ್ ಕನ್ನಡದ ಅಭ್ಯಾಸಕ್ಕೆ ಪ್ರಯೋಜನಕಾರಿಯಾದ ಕಾಣಿಕೆಯನ್ನಿತ್ತಿದ್ದಾರೆ. ದೇಶೀಯ ಪಂಡಿತರ ಪಾಂಡಿತ್ಯದ ಪ್ರಯೋಜನವನ್ನು ಪಡೆದು ಅದನ್ನು ಸಂಘಟಿಸಿ—ಅವರಿಗೆ ಹೊಸ ಅವಕಾಶ ಕಲ್ಪಿಸಿಕೊಟ್ಟರು. ಕನ್ನಡ ಪದಗಳ ವಿಷಯದಲ್ಲಿ ಡಾ॥ ಕಿಟಲ್‌ರ ಹಿರಿಯ ಶಬ್ದಕೋಶ ಇಂದಿಗೂ ಅಧಿಕೃತ ಗ್ರಂಥವಾಗಿ ಉಳಿದಿದೆ. ರೀವ್ ಅವರು ತಮ್ಮ ಇಂಗ್ಲಿಷ ಕನ್ನಡ ಶಬ್ದಕೋಶವನ್ನು ಸಿದ್ಧಗೊಳಿಸಿ ೧೮೨೪ರಲ್ಲಿ ಮದರಾಸದ ಆಗಿನ ಗವರ್ನರ್‌ರಾದ ಸರ್ ಥಾಮಸ್ ಮನ್ರೋ ಅವರಿಗೆ ಅರ್ಪಿಸಿದ್ದು ಕನ್ನಡ ವ್ಯಾಸಂಗ ರಂಗದ ಒಂದು ಮಹತ್ವದ ಘಟನೆಯಾಗಿದೆ. ಕ್ರೈಸ್ತ ಮಿಶನರಿಗಳು ಬಗೆಬಗೆಯಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ. ಡಾ। ಫ್ಲೀಟ್ ಹಾಗು ಬಿ. ಎಲ್. ರಾಯಿಸರು ಮುಂಬಯಿ ಹಾಗು ಮೈಸೂರು ಕರ್ನಾಟಕ

ಭಾಗಗಳ ಶಿಲಾಶಾಸನಗಳ ಪ್ರಕಟನೆಯ ಮೂಲಕ ಕರ್ನಾಟಕದ ಪ್ರಾಚೀನ ಇತಿಹಾಸ ಸಂಸ್ಕೃತಿಗಳ ಅಭ್ಯಾಸಕ್ಕೆ ಹಾದಿ ಮಾಡಿಕೊಟ್ಟರು. ಪ್ರಾಚೀನ ವೈಭವವು ಕನ್ನಡಿಗರ ಕಣ್ಮುಂದೆ ಬಂದು ಅವರಲ್ಲಿ ಹೊಸದೃಷ್ಟಿ, ಅಭಿಮಾನಗಳು ಜಾಗೃತವಾದವು. ಇದರಿಂದಾಗಿ ಹೊಸಗನ್ನಡದ ಪುನರುಜ್ಜೀವನದ ಹಾದಿ ಸಿದ್ಧವಾಗಹತ್ತಿತು. ಪ್ರಾಚೀನ ಕಾವ್ಯಪ್ರಕಾಶನದ ಕಾರ್ಯದಲ್ಲಿಯೂ ಮಿಶನರಿಗಳಿಂದ ಪ್ರಚೋದನೆ ದೊರೆಯಿತು. ಈ ಶ್ರೇಯಸ್ಸು ಮೋಗ್ಲಿಂಗ್ ಹಾಗು ವೀಗಲ್ ಇವರಿಗಿದೆ. ಈ ಪರಂಪರೆಯಲ್ಲಿ ದೇಶೀಯ ಪಂಡಿತರು ಮುಂದುವರಿದರು. ವರ್ಥ ಸಾಹೇಬರ ಪ್ರಾಕ್ಕಾವ್ಯಮಾಲಿಕೆಯೆಂಬ ಕಾವ್ಯಸಂಕಲನ, ಇ. ವೆ. ರಾಯಸರ ಕನ್ನಡ ಸಾಹಿತ್ಯ ಚರಿತ್ರೆ ಇವು ನಮಗೆ ಹೊಸಬಗೆಯ ಕೃತಿಗಳಾಗಿ ಬಂದವು. ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಅವುಗಳನ್ನು ವ್ಯಾಸಂಗಕ್ಕೆ ಅನುಕೂಲವಾಗುವ ರೀತಿಯಲ್ಲಿ ಪ್ರಕಾಶನಗೊಳಿಸುವ ಕಾರ್ಯದಲ್ಲಿ ಮೈಸೂರಿನ 'ಕಾವ್ಯ ಕಲಾನಿಧಿ' ಮಾಲೆಯ ರಾಮಾನುಜ ಅಯ್ಯಂಗಾರರು ಹೆಚ್ಚಿನ ಶ್ರೇಯಸ್ಸನ್ನು ಗಳಿಸಿದರು. ಶಾಸ್ತ್ರೀಯವಾದ ಗ್ರಂಥಪರಿಷ್ಕರಣವು ಇನ್ನೂ ನಮ್ಮಲ್ಲಿ ಆರಂಭವಾಗದೆ ಇದ್ದ ಕಾಲದಲ್ಲಿ ಕಾವ್ಯಕಲಾನಿಧಿಯ ಪ್ರಕಟನೆಗಳು ಪ್ರಾಚೀನ ಕಾವ್ಯಗಳ ಅಭ್ಯಾಸಕ್ಕೆ ಉಪಯುಕ್ತ ಸಾಮಗ್ರಿಯನ್ನು ಒದಗಿಸಿದವು. ಎಸ್. ಜಿ. ನರಸಿಂಹಾಚಾರ್ಯ, ಆರ್. ನರಸಿಂಹಾಚಾರ್ಯ ಇವರ ದೀರ್ಘ ಪರಿಶ್ರಮದಿಂದ ಪ್ರಾಚೀನ ಕನ್ನಡ ಕಾವ್ಯಸಂಪತ್ತಿನ ಪರಿಚಯ ನಮ್ಮ ಜನಕ್ಕಾಯಿತು. ಆ ಬಗೆಯ ವ್ಯಾಸಂಗದ ಬಲವು ಪುನರುಜ್ಜೀವನದ ಹಾದಿಗೆ ಪರಿಪೋಷಕವಾಯಿತು. ಆರ್. ನರಸಿಂಹಾಚಾರ್ಯರ ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳು ಕನ್ನಡ ಸಾಹಿತ್ಯ ವ್ಯಾಸಂಗಕ್ಕೆ ಶಾಶ್ವತವಾದ ಕಾಣಿಕೆಯಾಗಿವೆ. ಇ. ವೆ. ರಾಯಿಸರು ೧೯೦೫ರಲ್ಲಿ ಪ್ರಕಟಿಸಿದ ಕನ್ನಡ ಸಾಹಿತ್ಯ ಚರಿತ್ರೆಯೆಂಬ ತಮ್ಮ ಆಂಗ್ಲ ಗ್ರಂಥವನ್ನು ನರಸಿಂಹಾಚಾರ್ಯರಿಗೆ ಅರ್ಪಿಸಿದ್ದು ಅರ್ಥವತ್ತಾಗಿದೆ.

ಮಂಗಳೂರಿನಲ್ಲಿ ಮಿಶನರಿಗಳ ವಿದ್ಯಾಸಾಹಸದ ಉತ್ತೇಜನ, ಮೈಸೂರಿನಲ್ಲಿ ಅರಮನೆಯ ವಿದ್ಯಾಪೋಷಣೆಯ ಪರಂಪರೆ ಇವುಗಳು ಕನ್ನಡದ ಮುನ್ನಡೆಗೆ ನೆರವಾಗಿ ನಿಂತವು. ಆದರೆ ಮುಂಬಯಿ ಕರ್ನಾಟಕದ ಭಾಗದಲ್ಲಿ ಮಾತ್ರ ಪರಿಸ್ಥಿತಿಯು ಅನನುಕೂಲವಾಗಿತ್ತು. ಕ್ರಿ. ಶ. ೧೮೫೬ರವರೆಗೆ ಈ ಭಾಗದ ಊರುಗಳಲ್ಲಿ ಸರಕಾರಿ ಶಾಲೆಗಳಿರಲಿಲ್ಲ. ಮಠದಯ್ಯನವರು ವಿದ್ಯಾದಾನದ ಕಾರ್ಯವನ್ನು ಸ್ವತಂತ್ರವಾಗಿ ನಡೆಸಿದ್ದರು. ೧೮೫೬ರಲ್ಲಿ ಶಾಲೆಗಳು ಆರಂಭವಾದ ನಂತರವೂ ೮-೧೦ ವರುಷಗಳವರೆಗೆ ಆ ಶಾಲೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ದೊರೆಯಲಿಲ್ಲ. ಅದುವರೆಗೆ ಈ ಭಾಗದ ಭಾಷೆ ಕನ್ನಡವೆಂಬುದನ್ನು ಗುರುತಿಸಲೂ ಆಗಿರಲಿಲ್ಲವೆಂದು ತೋರುತ್ತಿದೆ. ಮುಂಬಯಿ ಕರ್ನಾಟಕದ ಸಾರ್ವಜನಿಕರ ಭಾಷೆ ಕನ್ನಡವೆಂಬುದನ್ನು ಸಿದ್ಧಮಾಡಿಕೊಟ್ಟ ಕನ್ನಡಿಗರ ಪುಣ್ಯಕಟ್ಟಿಕೊಂಡ ಶ್ರೇಯಸ್ಸು ರಸೆಲ್ ಎಂಬ ಆಂಗ್ಲ ವಿದ್ಯಾಧಿಕಾರಿಗೆ ಸಲ್ಲಬೇಕಾಗಿದೆ. ರಸೆಲ್‌ರು ೧೮೬೫ರಲ್ಲಿ ಈ ಭಾಗದ ವಿದ್ಯಾಧಿಕಾರಿಯಾಗಿ ಬಂದರು. ಆಗ ಇಲ್ಲಿಯ ಪರಿಸ್ಥಿತಿಯನ್ನು ಅವಲೋಕಿಸಿ "ಇಲ್ಲಿಯ ಶಾಲೆಗಳಲ್ಲಿ ಕನ್ನಡಭಾಷೆಯನ್ನು ಕಲಿಸುತ್ತಿಲ್ಲ. ಶಾಲೆಗಳಲ್ಲಿ ನೇಮಕವಾದ ಶಿಕ್ಷಕರಿಗೆ ಕನ್ನಡ ಭಾಷೆ ಬರುವದಿಲ್ಲ." ಎಂಬರ್ಥದ ಮಾತುಗಳನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದರಿಂದ ಅಂದಿನ ಪರಿಸ್ಥಿತಿಯ ವಿಷಮತೆಯ ಅರ್ಥವಾಗುವುದು. ರಸೆಲ್ ಪೂರ್ವದಲ್ಲಿ ಕನ್ನಡ ಕ್ರಮಿಕ ಪುಸ್ತಕಗಳಿಲ್ಲದೆ, ಕನ್ನಡವನನ್ನರಿತ ಶಿಕ್ಷಕರಿಲ್ಲದೆ ಅಂದಿನ ಕನ್ನಡ ವಿದ್ಯಾಭ್ಯಾಸ ನಡೆಯಬೇಕಾಗಿತ್ತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕನ್ನಡಕ್ಕಾಗಿ ದುಡಿದ ಪುಣ್ಯಪುರುಷರ ಸೇವೆ ಹೋರಾಟಗಳಿಂದ ಇಂದಿನ ಕನ್ನಡ ಸಾಹಿತ್ಯದ ಬೀಜಾಂಕುರವಾಯಿತು. ಮಿಶನರಿಗಳಿಂದ ಮಂಗಳೂರಿನಲ್ಲಿ, ಅರಮನೆಯಿಂದ ಮೈಸೂರಿನಲ್ಲಿ ಹೊಸಗನ್ನಡದ ಸಸಿ ಬೆಳೆಯಹತ್ತಿದ್ದರೆ — ಮುಂಬಯಿ ಕರ್ನಾಟಕದಲ್ಲಿ ಶಿಕ್ಷಕರು, ವಿದ್ಯಾಧಿಕಾರಿಗಳು ಇವರಿಂದ ಇಂತಹ ಕಾರ್ಯ ಆರಂಭವಾಗಿದೆ. ಅಂದಿನ ಕಠಿಣ ಪರಿಸ್ಥಿತಿಯಲ್ಲಿ ಬಡಉಪಾಧ್ಯಾಯರು ಸಲ್ಲಿಸಿದ ಸೇವೆಯು ಮಹತ್ವದ್ದಾಗಿದೆ. ಕನ್ನಡ ಭಾಷೆಯ ಉದ್ಧಾರದ ದಿಶೆಯಲ್ಲಿ ರಸೆಲ್ ಸಾಹೇಬರ ನೆರವಿಗೆ ನಿಂತ ಡೆಪ್ಯೂಟಿ ಚೆನ್ನಬಸಪ್ಪನವರ ಪರಿಶ್ರಮ, ಸೇವೆ, ಕೆಚ್ಚು ಇವುಗಳಿಂದ ಇಂದು ಇಲ್ಲ. ಕನ್ನಡವು ನೆಲೆಯೂರಿ ನಿಲ್ಲಲು ಸಾಧ್ಯವಾಯಿತು. ಹೊಸಗನ್ನಡದ ಪುನರುಜ್ಜೀವನದ ಕಾರ್ಯದಲ್ಲಿ ಉಚಿತಸೇವೆ ಸಲ್ಲಿಸಿದ ಕೀರ್ತಿಶೇಷ ಮುದವೀಡು ಕೃಷ್ಣರಾಯರು, ಚೆನ್ನಬಸಪ್ಪನವರನ್ನು 'ಕನ್ನಡದ ಆದಿಪುರುಷ' 'ಕನ್ನಡದ ಹುಲಿ' ಎಂಬುದಾಗಿ ಬಣ್ಣಿಸಿದ್ದಾರೆ. ತಮ್ಮ ಕಾಲದಲ್ಲಿ ಡೆಪ್ಯೂಟಿ

ಚೆನ್ನಬಸಪ್ಪನವರು ಕನ್ನಡ ಪ್ರೇಮಿಗಳ ಒಂದು ತಂಡವನ್ನೇ ಸಂಘಟಿಸಬೇಕಾಯಿತು. ಆ ಗುಂಪಿಗೆ ಸೇರಿದವರಲ್ಲಿ ವೆಂಕಟ ರಂಗೋಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮುರಿ, ಶಾಂತವೀರ ಕಿತ್ತೂರ ಇವರು ಮುಖ್ಯರಾಗಿದ್ದಾರೆ. ಇವರೆಲ್ಲರೂ ಸೇರಿ ಆಗ ಕನ್ನಡ ಕ್ರಮಿಕ ಪುಸ್ತಕಗಳನ್ನು ಒದವಿಸಿದರು. ಕನ್ನಡಕ್ಕೆ ಮುದ್ರಣಾಲಯವೇ ಇಲ್ಲದಾಗ ವೆಂಕಟ ರಂಗೋ ಕಟ್ಟಿಯವರ ಪರಿಶ್ರಮದಿಂದ "ಜ್ಞಾನವರ್ಧಕ ಪ್ರೆಸ್", ಮುದ್ರಣಾಲಯವು ಸ್ಥಾಪಿತವಾಯಿತು. ಹೊಸಗನ್ನಡ ಗದ್ಯ ಪದ್ಯ ಲೇಖಕರನ್ನು ಮೊದಲಿಗೆ ಒದವಿಸಿದ ಶ್ರೇಯಸ್ಸು, ಈ ಭಾಗದ ಶಿಕ್ಷಣಾಲಯಕ್ಕೆ ಇದೆ. ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಕರು ಇಲ್ಲವೆ ವಿದ್ಯಾರ್ಥಿಗಳು ಆಗಿದ್ದ ಧೊಂಡೋ ನರಸಿಂಹ ಮುಳಬಾಗಿಲ, ವಲ್ಲಭ ಮಹಾಲಿಂಗ ಕಟ್ಟಿ ಶಾಂತ ಕವಿಗಳೆಂದು ಹೆಸರಾದ ಬಾಳಾಚಾರ್ಯ ಸಕ್ಕರಿ ಹಾಗೂ ಗಳಗನಾಥ ಇವರೆಲ್ಲ ಪುನರುಜ್ಜೀವನದ ಕಾರ್ಯದಲ್ಲಿ ದುಡಿದವರಲ್ಲಿ ಮೊದಲಿಗರಾಗಿದ್ದಾರೆ. ಶಾಲೋಪಯೋಗಿ ಗ್ರಂಥಗಳಿಂದ ಆರಂಭವಾದ ಕನ್ನಡ ಗ್ರಂಥ ರಚನೆ ವಿಶಾಲವಾದ ಸಾಹಿತ್ಯರಂಗಕ್ಕೆ ಅಡಿಯಿಡುವಲ್ಲಿ ಇವರು ನೆರವಾಗಿದ್ದಾರೆ. ಬಡತನದ ಬವಣೆಯಲ್ಲಿ ಬಳಲುತ್ತಿದ್ದು ಕನ್ನಡದ ದಾಸಯ್ಯನಾಗಿ ಬಂದು ಕನ್ನಡಿಗರಲ್ಲಿ ಅಭಿಮಾನವನ್ನು ಜಾಗ್ರತಗೊಳಿಸಿ ಕನ್ನಡ ಸಾಹಿತ್ಯವನ್ನು ಬೆಳೆಸುವ ಕಾರ್ಯದಲ್ಲಿ ಮುಂದಾದ ಶಾಂತಕವಿಗಳನ್ನು ನಾವು ಮರೆಯುವದು ಸಾಧ್ಯವಿಲ್ಲ. "ಗೌರೀಶ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶಿ. ಸೋ. ಕುಲಿಕರ್ಣಿಯವರ "ನಾಡ ನೆಲಗಾರ" ಎಂಬ ಗ್ರಂಥವು ಅಚ್ಚಗನ್ನಡದ ಕೆಚ್ಚನ್ನು ಎತ್ತಿ ತೋರಿಸುತ್ತಿದೆ. ಗಂಗಾಧರ ಮಡಿವಾಳೇಶ್ವರ ತುರಮುರಿಯವರು ಬಾಣನ ಕಾದಂಬರಿಯ ಸಾರ-ಸಂಗ್ರಹವನ್ನು ಕನ್ನಡಕ್ಕೆ ಇಳಿಸಿ ನಮ್ಮ ಸಾಹಿತ್ಯಕ್ಕೆ ಹೊಸ ಕಳೆಯನ್ನು ತಂದರು. ಬಾಣಭಟ್ಟನ ಮನೋಜ್ಞವಾದ ಕಥೆ, ವರ್ಣನೆಗಳಿಗೆ ಸವಿಕಟ್ಟಾದ ಕನ್ನಡ ಭಾಷಾ ಸರಣಿಯ ಜೊತೆಯೂ ಸೇರಿ ಹಾಲು ಸಕ್ಕರೆಗಳ ರುಚಿಯನ್ನು ಈ ಗ್ರಂಥ ಒದಗಿಸಿತು. ೧೮೭೦ರಲ್ಲಿ ರಚಿತವಾದ ಈ ಗ್ರಂಥ ಹೊಸಗನ್ನಡದ ವಿಜಯ ಪತಾಕೆಯಂತೆ ಕಂಗೊಳಿಸುತ್ತಿದೆ.

ಮುಳಬಾಗಿಲ ಅವರು ಕೆಲವು ಸುಪ್ರಸಿದ್ಧ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಒದಗಿಸಿ ಕೊಟ್ಟರು. ತುರಮುರಿ ಶೇಷಗಿರಿರಾಯರ ಶಾಕುಂತಲದ ಅನುವಾದ, ಅಭಿನವ ಕಾಳಿದಾಸರೆಂಬ ಹೆಸರಿನಿಂದ ಪ್ರಸಿದ್ಧರಾಗಿರುವ ಬಸವಪ್ಪಶಾಸ್ತ್ರಿ ಕೃತ ಸಂಸ್ಕೃತ ನಾಟಕಗಳ ಅನುವಾದಗಳು ಇವುಗಳಿಂದ ನಮ್ಮ ಸಾಹಿತ್ಯ ಭಾಂಡಾರ ತುಂಬಹತ್ತಿತು. ಕನ್ನಡ ಪುನರುಜ್ಜೀವನದ ಆರಂಭದಲ್ಲಿ ಸಂಸ್ಕೃತ ಸಾಹಿತ್ಯ ಭಾಂಡಾರದ ನೆರವನ್ನು ನಮ್ಮ ಲೇಖಕರು ಪಡೆದರು. ಸಂಸ್ಕೃತ ನಾಟಕಗಳ ಜನಪ್ರಿಯ ಕಥೆಗಳನ್ನು ಕಥಾರೂಪದಲ್ಲಿ ಕನ್ನಡದಲ್ಲಿ ಒದಗಿಸುವ ಪ್ರಯತ್ನಗಳೂ ಆಗ ನಡೆದವು. ಪುರಾಣ ಕಥೆಗಳಂತೂ ಸರಿಯೇ. ಸಂಸ್ಕೃತ ಸಾಹಿತ್ಯದ ಅನುವಾದಗಳೊಂದಿಗೆ ನಮ್ಮ ಸಾಹಿತ್ಯವನ್ನು ಸಮೃದ್ಧಗೊಳಿಸುವ ಕಾರ್ಯ ಅಂದು ನಡೆಯಿತು. ಹೊನ್ನಾಪುರ ಮಠ ಗದಿಗೆಯ್ಯನವರು ಅಂತಹ ಕಾರ್ಯ ಕೈಕೊಂಡಿದ್ದರು. ಅಂದಿನ ಅವರ ವಿಪುಲವಾದ ಬರವಣಿಗೆಯನ್ನು ನಾವು ಗಮನಿಸಲೇ ಬೇಕು.

ಕರ್ನಾಟಕದ ಪುನರುಜ್ಜೀವನದ ಹಾದಿಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆ ಮಹತ್ವದ ಹೆಜ್ಜೆಯಾಗಿದೆ. ೧೮೯೦ರಲ್ಲಿ ಈ ಸಂಘವನ್ನು ಸ್ಥಾಪಿಸಲು ಹೆಣಗಿದ ಪೂಜ್ಯ ಹಿರಿಯರು ಅಂದು ಕನ್ನಡ ವಿದ್ಯಾವರ್ಧನೆಯ ಕಾರ್ಯವನ್ನು ಆರಂಭಿಸಿ ಇಂದಿನ ಸಾಹಿತ್ಯ ವರ್ಧನೆಗೆ ಅಸ್ತಿವಾರ ಹಾಕಿದರು. ಈ ದಿಶೆಯಲ್ಲಿ ನಾವು ರಾಮಚಂದ್ರ ಹಣಮಂತ ದೇಶಪಾಂಡೆ, ಕಾಯಕಿಣಿ, ಗುರುಬಸಪ್ಪ ಹಳಕಟ್ಟಿ, ಇವರನ್ನು ಸ್ಮರಿಸಿಕೊಳ್ಳಬೇಕಾಗಿದೆ. ಸುಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರ ಕೃತಿಗಳು ಮೊದಲಿಗೆ ವಿದ್ಯಾವರ್ಧಕ ಸಂಘದ ವಾಗ್ಭೂಷಣ ಪತ್ರಿಕೆಯ ಮೂಲಕ ಬೆಳಕು ಕಂಡವು. ಅಂದಿನ ಅನೇಕ ಕನ್ನಡ ಲೇಖಕರ ಕೃತಿಗಳನ್ನು ಬೆಳಕಿಗೆ ತರುವ ಕಾರ್ಯವನ್ನು "ವಾಗ್ಭೂಷಣ"ಪತ್ರಿಕೆ ಕೈಗೊಂಡಿತ್ತು. ಶಾಂತಕವಿಗಳ ವಿದ್ಯಾರಣ್ಯ ಚರಿತ್ರೆ ಕೀರ್ತನ, ಆಲೂರ ವೆಂಕಟರಾಯರ ಕರ್ನಾಟಕಗತವೈಭವ ಗ್ರಂಥ, ಮುದವೀಡು ಕೃಷ್ಣರಾಯರ "ಅದ್ಭುತ ಶಕ್ತಿ" ಇವೆಲ್ಲ ಕನ್ನಡಿಗರಲ್ಲಿ ಜಾಗೃತಿಯನ್ನು ಮೊಳೆಯಿಸಿ ಉತ್ಸಾಹವನ್ನು ತುಂಬುವ ಕಾರ್ಯದಲ್ಲಿ ಉಪಯುಕ್ತ ಸಾಧನಗಳಾಗಿ ಪರಿಣಮಿಸಿರುವವು. ಶ್ರೀ ಆಲೂರು ವೆಂಕಟರಾಯರ ಕನ್ನಡದ ದೀಕ್ಷೆ ಇಂದು ಫಲಪ್ರದವಾಗಿ ಕಾಣುತ್ತಿದೆ.

ಜಾಗೃತಿ ಉತ್ಸಾಹಗಳೇನೇ ಸರಿ. ಆದರೆ ಓದಲು ಕನ್ನಡ ಗ್ರಂಥಗಳನ್ನು ಒದವಿಸಿ ವಾಚನಾಭಿ

ರುಚಿಯನ್ನು ಬೆಳೆಯಿಸಿ ಸಾಹಿತ್ಯ ಸಮೃದ್ಧಿಯನ್ನುಂಟು ಮಾಡಬೇಕಾದ ಕಾರ್ಯವು ಇದೆಯಷ್ಟೆ. ಕನ್ನಡಿಗರ ಅಭಿರುಚಿಯನ್ನು ವಿವಿಧವಾಗಿ ಬೆಳೆಯಿಸಿ ಶಕ್ತಿದಾಯಕವಾದ ವಾಚನಸಾಮಗ್ರಿಯನ್ನು ಅಂದು ಒದವಿಸಬೇಕಾದ ಆವಶ್ಯಕತೆಯಿತ್ತು. ಇಂತಹ ಕಾರ್ಯ ಕೊಳ್ಳಲು ಕೆಲವು ಲೇಖಕರು ಆಗ ಮುಂದೆ ಬಂದರು. ವಾಚನಾಭಿರುಚಿಯನ್ನು ಬೆಳೆಸುವ ಹಾಗು, ಜೀವನವನ್ನು ಸಾಹಿತ್ಯದಲ್ಲಿ ಬಿಂಬಿಸುವ ದಿಶೆಯಲ್ಲಿ ಕಾದಂಬರಿಯು ಮಹತ್ವದ ಸಾಧನವಾಗಿದೆ. ಈ ಸಾಧನದ ಪ್ರಯೋಜನ ಪಡೆದು ಕನ್ನಡಿಗರಿಗೆ ವಿಪುಲವಾಗಿ ಗ್ರಂಥಗಳನ್ನು ಒದಗಿಸುವರಲ್ಲಿ ಮೈಸೂರು ಭಾಗದ ಬಿ. ವೆಂಕಟಾಚಾರ್ಯರು, ಧಾರವಾಡದ ಕಡೆಯ ಗಳಗನಾಥರು ಮುಖ್ಯರಾಗಿದ್ದಾರೆ. ಬಂಕಿಮ ಚಂದ್ರರ ವಂಗಕಾದಂಬರಿಗಳ ಅನುವಾದಗಳನ್ನು ವೆಂಕಟಾಚಾರ್ಯರು, ಮರಾಠಿ ಕಾದಂಬರಿಗಳ ಅನುವಾದಗಳನ್ನು ಗಳಗನಾಥರು ಒದಗಿಸಿದರು. ಗ್ರಂಥಗಳ ವಿಪುಲತೆಯ ದೃಷ್ಟಿಯಿಂದ ಕೂಡ ಇವರೀರ್ವರ ಸೇವೆ ಶ್ರೇಷ್ಠವಾಗಿದೆ. ಬಂಕಿಮಚಂದ್ರರ ಕಾದಂಬರಿಗಳು ಓಜಸ್ವಿಯಾಗಿದ್ದು ಬಂಗಾಲದಲ್ಲಿ ರಾಷ್ಟ್ರೀಯ ಜೀವನವು ವಿಕಾಸವಾದುದನ್ನು ಅವು ಬಿಂಬಿಸುತ್ತಿವೆ. ಇವುಗಳ ಅದ್ಭುತರಮ್ಯ ಕಥಾನಕ, ಓಜಸ್ವಿಯಾದ ವಿಚಾರಸರಣಿ ಇವುಗಳ ಪರಿಚಯವು ಕನ್ನಡಿಗರಿಗೆ ವೆಂಕಟಾಚಾರ್ಯರಿಂದ ಲಭಿಸಿತು. ಮಹಾರಾಷ್ಟ್ರದ ಹರಿನಾರಾಯಣ ಆಪಟೆಯವರ ಕಾದಂಬರಿಗಳನ್ನು ಗಳಗನಾಥರು ಕನ್ನಡಕ್ಕೆ ತಂದರು. ಬಹುಸಂಖ್ಯೆಯಲ್ಲಿ ಕನ್ನಡ ವಾಚಕರನ್ನು ಗಳಗನಾಥರು ಆಕರ್ಷಿಸಿದರು. ಅಲ್ಲದೆ "ಸದ್ಬೋಧ ಚಂದ್ರಿಕೆ" "ಸದ್ಗುರು" ಎಂಬ ಮಾಸಪತ್ರಿಕೆಗಳ ಮೂಲಕವೂ ಗಳಗನಾಥರು ಅದ್ಭುತವಾದ ರೀತಿಯಲ್ಲಿ ಕನ್ನಡಿಗರ ವಾಚನಾಭಿರುಚಿಯನ್ನು ಬೆಳೆಸಿದರು. ಅವರ ಸ್ವತಂತ್ರ ಕೃತಿಯಾದ ಮಾಧವ ಕರುಣಾವಿಲಾಸವೆಂಬ ರಸವತ್ತಾದ ಕಾದಂಬರಿಯು ಕನ್ನಡಿಗರಲ್ಲಿ ಆತ್ಮಾಭಿಮಾನವನ್ನು ಜಾಗ್ರತಗೊಳಿಸುವಲ್ಲಿ ನವ ಕರ್ನಾಟಕವನ್ನು ಕಟ್ಟುವ ಹುಮ್ಮಸ್ಸನ್ನು ತುಂಬುವಲ್ಲಿ ಸಫಲವಾಯಿತು. ಕೆರೂರ ವಾಸುದೇವಾಚಾರ್ಯರು ಸ್ವತಂತ್ರವಾದ ಸಾಮಾಜಿಕ, ಐತಿಹಾಸಿಕ ಕಾದಂಬರಿ ನಾಟಕಗಳಿಂದ ಲೋಕಪ್ರಿಯತೆಯನ್ನು ಪಡೆದರು. ಆಂಗ್ಲ ನಾಟಕಗಳನ್ನು ಉತ್ಕೃಷ್ಟ ರೀತಿಯಲ್ಲಿ ಅನುವಾದಿಸಿದ ವಾಸುದೇವಾಚಾರ್ಯರ ಜಾಣ್ಮೆ ಇಂದಿಗೂ ಆದರ್ಶವಾಗಿ ಉಳಿದಿದೆ. ಅವರ ಲೇಖನದಲ್ಲಿಯ ಹಾಸ್ಯ, ವಿಡಂಬನ, ಪ್ರತಿಭೆ ಇವುಗಳಿಂದ ಕನ್ನಡಿಗರಲ್ಲಿ ಸಾಹಿತ್ಯದ ಬಗೆಗೆ ಸದಭಿರುಚಿ ಬೆಳೆಯಿತು. ಸತ್ಯಯುತವಾದ ಹೊಸಗನ್ನಡ ಕೃತಿಗಳನ್ನು ರಚಿಸಿದ ಹಿರಿಯರಲ್ಲಿ ಚ. ವಾಸುದೇವಯ್ಯನವರೂ ಒಬ್ಬರು. ಅವರ "ಆರ್ಯಕೀರ್ತಿ" ೧೮೯೬ರಲ್ಲಿಯೇ ಪ್ರಕಟವಾಗಿದೆ. ಹಳಗನ್ನಡದಲ್ಲಿ ಕೃತಿರಚಿಸಿಯೂ ಇಂದಿನ ಪುನರುಜ್ಜೀವನಕ್ಕೆ ಕಾರಣರಾದವರು ಮಂಗಳೂರ ಪ್ರಾಂತದ ನಂದಳಿಕೆ ಲಕ್ಷ್ಮೀನಾರಾಣಪ್ಪನವರು. "ಮುದ್ದಣ" ಎಂಬ ಸುಂದರ ಕಾವ್ಯನಾಮವುಳ್ಳ ಅವರ ಕೃತಿಗಳು ಕನ್ನಡಿಗರಿಗೆ ಅಚ್ಚುಮೆಚ್ಚಿನವಾಗಿವೆ.

ಆಂಗ್ಲ ಸಾಹಿತ್ಯಾಭ್ಯಾಸದ ಪ್ರಭಾವದಿಂದ ತಲೆದೋರಿದ ನವೀನ ದೃಷ್ಟಿಯು ನಮ್ಮ ಆಧುನಿಕ ಸಾಹಿತ್ಯಕ್ಕೆ ಸಂಜೀವಿನೀ ಶಕ್ತಿಯಾಗಿ ಪರಿಣಮಿಸಿತು. ಇತರ ಪ್ರಾಂತಗಳಲ್ಲಿ ಈ ಹೊಸ ಬೆಳಕು ಈ ಮೊದಲೇ ಹರಿದು ಬಂದಿತು. ಕರ್ನಾಟಕದಲ್ಲಿ ಎಲ್ಲವೂ ತಡವಾಗಿಯೇ ಆರಂಭವಾದಂತೆ ಈ ಅರುಣೋದಯವಾದರೂ ತಡವಾಗಿಯೇ ಬಂದಿತು. ಮಂಗಳೂರಿನತ್ತ ಶ್ರೀ ಪಂಜೆ ಮಂಗೇಶರಾಯರೂ, ಮೈಸೂರಿನತ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಧಾರವಾಡದ ಕಡೆಗೆ ಶ್ರೀ ಆಲೂರ ವೆಂಕಟರಾಯರು ಬಂದು ಹೊಸ ಹುರುಪಿನ ತರುಣರಿಗೆ ಸ್ಫೂರ್ತಿಯನ್ನಿತ್ತು ಅಭಿನವ ಸಾಹಿತ್ಯ ಸೇವೆಯ ದೀಕ್ಷೆಯನ್ನು ಕೊಟ್ಟರು. ಇದರಿಂದಾಗಿ ಹೊಸ ದೃಷ್ಟಿಯ ಹೊಸ ಚೇತನದ ಕನ್ನಡ ಸಾಹಿತ್ಯ ವಿಪುಲವಾಗಿ, ಬಹುಮುಖವಾಗಿ ಬೆಳೆಯಲು ಅನುಕೂಲವಾಯಿತು. ಬಿ. ಎಂ. ಶ್ರೀಕಂಠಯ್ಯನವರ "ಇಂಗ್ಲಿಷ್ ಗೀತಗಳು" ಎಂಬ ಕವನ ಸಂಗ್ರಹ. ಈ ಪುನರುಜ್ಜೀವನದ ಮೊದಲನೆಯ ಹೂವಾಗಿದೆ. ಆಧುನಿಕ ಕನ್ನಡ ಸಾಹಿತ್ಯ, ಹೂತು, ಕಾತು ಫಲಿಸುತ್ತಿರುವುದನ್ನು ನಮ್ಮ ಕಣ್ಮುಂದೆ ಕಾಣುತ್ತಿದ್ದೇವೆ.

ನೆನಪುಗಳು

ಶ್ರೀ ತಿರುಮಲೆ ತಾತಾಚಾರ್ಯಶರ್ಮನ್

ಮೂವತ್ತು ವರ್ಷಗಳ ಹಿಂದಿನ ಮಾತು ಭರತ ಖಂಡದ ಜೀವನೇತಿಹಾಸದಲ್ಲಿ ಸ್ಮರಣೀಯವಾದ ವರ್ಷವದು—೧೯೨೧. ಸತ್ಯ, ಅಹಿಂಸೆ, ಅಸಹಕಾರ ಯುಗಾದಿಯದು! ಎಲ್ಲ ಜನರಲ್ಲೂ ಏನೋ ಒಂದು ಹೊಸ ಲವಲವಿಕೆ ತಲೆ ಹಾಕಿದಂತೆ ಕಾಣಬರುತ್ತಿತ್ತು.

ದಕ್ಷಿಣಕನ್ನಡಜಿಲ್ಲೆಯ ಪ್ರಮುಖ ಮನೆತನದವರೆಲ್ಲ (ಅಧಿಕಾರಿಗಳು, ವಕೀಲರು, ವೈದ್ಯರು, ವರ್ತಕರು ಇತ್ಯಾದಿ) ವಾಸವಾಗಿದ್ದ ಮದರಾಸಿನ ಪರಶುವಾಕಂ ಕಡೆಯಲ್ಲೇ ನಾನೂ ವಾಸವಾಗಿದ್ದೆ. ನಾನಿದ್ದ ಮನೆಗೂ ಬೆಣಗಲ್ ರಾಮರಾಯರ ಮನೆಗೂ ಬಹಳ ದೂರವಿರಲಿಲ್ಲ. ಪಂಜೆ ಮಂಗೇಶರಾಯರು ಮದರಾಸಿಗೆ ಬಂದರೆ ಬೆಣಗಲ್ಲರ ಮನೆಯಲ್ಲೇ ಅವರ ಬಿಡಾರ.

ಸಾಮಾನ್ಯವಾಗಿ ದಿನಬಿಟ್ಟು ದಿನ ನಾವು ಬೆಣಗಲ್ ರಾಮರಾಯರ ಮನೆ ಮಹಡಿಯ ಮೇಲೆ ಸೇರುತ್ತಿದ್ದೆವು. (ನಾನು, ರಾಮರಾಯರು, ಡಾ! ಕೂರಿಗನೂರು ನರಸಿಂಗರಾಯರು, ಶ್ರೀ ಪಾನ್ಯಂ ಸುಂದರಶಾಸ್ತ್ರಿಗಳು ಆಗಾಗ ಶ್ರೀ ಪಂಜೆ ಮಂಗೇಶರಾಯರು.) ಭಾನುವಾರ ರಾತ್ರಿಯಂತೂ ಭಜನೆ. ನಾವು ಯಾವಾಗ ಸೇರಿದರೂ ಕನ್ನಡ ಸಾಹಿತ್ಯ, ನಾಟಕ, ಇತಿಹಾಸ, ಶಾಸನಗಳು, ರಾಜಕಾರಣ ಇವೇ ಮೊದಲಾದ ನಾನಾ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದೆವು. ಅನೇಕ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ಮಾಡುತ್ತಿದ್ದೆವು. ಬೆಣಗಲ್ ರಾಮರಾಯರು ದೊಡ್ಡ ವಿದ್ವಾಂಸರು, ಕವಿಗಳು, ವಿಮರ್ಶಕರು, ಭಾಷಾಂತರಕಾರರು ನಿಜ. ಅವರು ನಟರೂ ಆಗಿದ್ದರೆಂಬುದನ್ನೂ ಮರೆಯಬಾರದು. ನಾಟಕವೆಂದರೆ ಅವರಿಗೆ ಬಹಳ 'ಹುಚ್ಚು' (ಯಕ್ಷಗಾನಗಳ ಮೇಲೆ ಪ್ರೌಢಪ್ರಬಂಧವನ್ನು ನಿರ್ಮಿಸಿಯೇ ಅವರು ಎಂ. ಎ., ಪದವಿಯನ್ನು ಪಡೆದದ್ದು) ಅವರು ನನ್ನನ್ನು ಎಷ್ಟೋ ಸಾರೆ 'ಸುಗುಣ ವಿಲಾಸ ಸಭೆ'ಯ ನಾಟಕಗಳಿಗೆ ಕರೆದೊಯ್ದಿದ್ದಾರೆ. ಆ ಸಭೆಯಲ್ಲೇ 'ಕರ್ನಾಟಕ ನಾಟಕಶಾಖೆ'ಯನ್ನು ನಡೆಸುವುದರಲ್ಲೂ ಇವರು ವಿಶೇಷ ಆಸಕ್ತಿ, ಉತ್ಸಾಹ ತೋರಿಸುತ್ತಿದ್ದರು. ತಮಿಳು ನಾಟಕಗಳ ಪ್ರದರ್ಶನ ನೋಡುತ್ತ, ನೋಡುತ್ತ, ನಾವು ತಮಿಳು ನಾಟಕರಚನೆ, ತಮಿಳು ನಾಡಿನ ನಾಟಕಗಳ ವಸ್ತು, ನಟರು ಇವುಗಳನ್ನು ಕುರಿತು ಅಸಾಧ್ಯ ಚರ್ಚೆ ಮಾಡುತ್ತಿದ್ದೆವು. ಹಾಗೆಯೇ ತೆಲುಗು ನಾಟಕಾವಲೋಕನ, ಸಮಾಲೋಚನೆಗಳೂ ನಡೆಯುತ್ತಿದ್ದುವು. ರಾವ್ ಬಹದ್ದೂರ್ ಸಂಬಂಧಂ ರವರಂತೆ ಸಾಮಾಜಿಕ ನಾಟಗಳನ್ನು ರಚಿಸುವವರೇ ಕನ್ನಡ ನಾಡಿನಲ್ಲಿ ಇಲ್ಲವೆಂದು ರಾಯರೂ, ಅವರ ಹಲವು ಮಿತ್ರರೂ ಹೇಳುತ್ತಿದ್ದಾಗ ನಾನು ಕೈಲಾಸಂ ರವರ ಹೆಸರನ್ನು ಮುಂದಿಟ್ಟು ಮಾತನಾಡುತ್ತಿದ್ದೆ. ತಮಿಳರು, ತೆಲುಗರು ಸಹ ವರದಾಚಾರ್ಯರು, ರಾಘವಾಚಾರ್ಯರೆಂದರೆ ಪ್ರೀತಿ ಗೌರವಗಳಿಂದ ತಲೆದೂಗುತ್ತಿದ್ದರು.

ಒಂದು ದಿನ ಬೆಣಗಲ್, ಪಂಜೆ, ನಾನು ಮೂವರೂ "ಜಗತ್ತಿನ ಮಹಾಕೃತಿಗಳು ೨೫ನ್ನು ಆರಿಸಿಕೊಂಡು ಅವುಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಬೇಕು" ಎಂಬ ವಿಚಾರವನ್ನೆತ್ತಿಕೊಂಡು ದೀರ್ಘಕಾಲ ಚರ್ಚೆ ಮಾಡಿದೆವು. ಕೃತಿಗಳ ಹೆಸರುಗಳನ್ನೂ ಬರೆದುಕೊಳ್ಳಲು ನಾನು ಸಿದ್ಧನಾದೆ. ಆದರೆ ಕಾಗದದ ಮೇಲೆ ಒಂದು ಹೆಸರಾದರೂ ಬೀಳಲಿಲ್ಲ. ಆಲೋಚನೆ ಮಾಡಿ ಒಬ್ಬೊಬ್ಬರೂ ಸ್ವತಂತ್ರವಾಗಿ ಪಟ್ಟಿಗಳನ್ನು ಸಿದ್ಧಗೊಳಿಸೋಣವೆಂದು ಸಮಾಧಾನ ಮಾಡಿಕೊಂಡದ್ದಾಯಿತು

ಈಮಧ್ಯೆ ಪಂಜೆ ಮಂಗೇಶರಾಯರು ನಗುತ್ತ ನಗುತ್ತ, ನರ್ಮದ್ಯುತಿ ಬೆಳಗಿಸುತ್ತ ಅವರದೇ ಆದ ಮೇಲು ಮತ್ತು ಸವಿ ಮಾತುಗಳಲ್ಲಿ ಹಲವು ಕನ್ನಡ ಭಾಷಾಂತರ ಗ್ರಂಥಗಳ 'ಶೀಘ್ರವಿಮರ್ಶೆ'ಗೆ ಮೊದಲಿಟ್ಟರು. ವಿಚಾರಪೂರಿತ ಪ್ರಬಂಧಗಳಾದುವು, ನಾಟಕಗಳಾದುವು, ಕಾದಂಬರಿಗಳಾದುವು. ಇಂಗ್ಲಿಷ್ ಮರಾಠಿ, ಬಂಗಾಳಿ, ತೆಲುಗು ಭಾಷೆಗಳಿಂದಾದ ಕನ್ನಡ ಭಾಷಾಂತರಗಳಾದುವು. ಮಧ್ಯೆಮಧ್ಯೆ ಬೆಣಗಲ್‌ರವರು ಪಂಜೆಯವರ ಆಕ್ಷೇಪಣರೂಪದ ಟೀಕೆಗಳಿಗೆ ಸಮಾಧಾನರೂಪದ ವಚನಗಳನ್ನು ನುಡಿಯುತ್ತ ಹೋದರು. ಪಂಜೆಯವರ 'ನಗೆಮೊಗ'ದ, ಹಾಸ್ಯರಸಾಭಿಷಕ್ತ 'ಶೀಘ್ರವಿಮರ್ಶೆ'ಯ ನವೀನತೆಯನ್ನೂ, ಬೆಣಗಲ್‌ರವರ 'ಅರೆಮರೆ' ಮನಸ್ಸಿನ ಆ ದೃಢ ಅಭಿಪ್ರಾಯಗಳನ್ನೂ

ಕಂಡು ಕೇಳಿ ಚಕಿತನಾದೆ. ಅಂದಿನ 'ಚಿತ್ರ ಗಾಂಭೀರ್ಯ'ವನ್ನೂ ನಾನು ಮರೆಯುವಹಾಗೇ ಇಲ್ಲ.

"ಭಾಷಾಂತರಗಳು ಭಾಷಾಂತರ ಗತಿ. ಮೂಲದ ಭಾಗ್ಯ ಭಾಷಾಂತರಕ್ಕೆ ಬಂದೀತು ಹೇಗೆ? ಭಾವ, ಶಕ್ತಿ, ಸೌಂದರ್ಯಗಳನ್ನು ಭಾಷಾಂತರ ಮಾಡಲಾದೀತೆ? ಪ್ರತಿಭೆಯು ಭಾಷಾಂತರ ಸಾಮಗ್ರಿಯೇ? ಈ ಮಾತಿಗೇನಾದರೂ ಅರ್ಥವಿದೆಯೆ?"

ಅಂದರು ಪಂಜೆಯವರು.

"ಷೇಕ್ಸ್‌ಪಿಯರ್ ನಾಟಕಗಳು ಕೆಲವು ಕನ್ನಡಕ್ಕೆ ಬಂದಿವೆ. ನಾನು ಓದಿದ್ದೇನೆ. ಏನೇನೂ ಚೆನ್ನಾಗಿಲ್ಲ. 'ಪ್ರಮೀಳಾರ್ಜುನೀಯ', 'ರಾಮವರ್ಮ ಲೀಲಾವತಿ' ಮೊದಲಾದುವುಗಳನ್ನು ತಾವು ನೋಡಿರಬೇಕು"

ಅಂದೆ ನಾನು. ಆಗ ಬೆಣಗಲ್‌ರವರು

"ಕನ್ನಡದಲ್ಲಿ ಉತ್ತಮ ಭಾಷಾಂತರ ಕೃತಿಗಳಿಲ್ಲ; ಒಪ್ಪುತ್ತೇನೆ. ಆದರೆ ಇರುವ ಭಾಷಾಂತರಗಳೆಲ್ಲ ಎರಡು ಮೂರನೆಯ ದರ್ಜೆಯವೆಂದು ಹೇಳುವುದಾದರೂ ಹೇಗೆ?"

ಪಂಜೆಯವರು ನನ್ನಕಡೆ ನೋಡಿದರು. ನಾನಾಗ ಇಂಗರ್ಸಾಲನು ಪಟ್ಟ ಅಭಿಪ್ರಾಯ ಸಂದರ್ಭವನ್ನು ನೆನೆದೆ. 'ಅದೇನು' ಎಂದು ಬೆಣಗಲ್‌ರವರು ಮಹಾ ಕುತೂಹಲ ತೋರಿಸಿದರು.

"ರೂಸೋ, ವಿಕ್ಟರ್ ಹ್ಯೂಗೋ, ವಾಲ್ಟೇರ್ ಮೊದಲಾದವರ ಕೃತಿಗಳನ್ನು ಚನ್ನಾಗಿ ಅರ್ಥ ಮಾಡಿಕ್ಕೊಂಡು, ಅವುಗಳ ಸುಖವನ್ನು ಅನುಭವಿಸಬೇಕಾದರೆ ಫ್ರೆಂಚ್ ಭಾಷೆ ಕಲಿಯಬೇಕಾದದ್ದು ಅವಶ್ಯಕವೆಂದು ಹಲವರು ಹೇಳುವರಲ್ಲ. ತಮ್ಮ ಅಭಿಪ್ರಾಯವೇನು" ಎಂಬದಾಗಿ ಒಬ್ಬ ಇಂಗರ್ಸಾಲನನ್ನು ಕೇಳಿದ. "ವಾಲ್ಟೇರ್ ಅಥವಾ ಹ್ಯೂಗೋಗಳ ಕೃತಿಗಳ ಸುಖವನ್ನು ಅನುಭವಿಸಬೇಕಾದರೆ ಫ್ರೆಂಚ್ ಭಾಷಾ ಸಾಹಿತ್ಯಜ್ಞಾನ ಅತ್ಯಾವಶ್ಯಕವೆಂದು ಹೇಳುವುದು ಶುದ್ಧ ಅವಿವೇಕ. ಇಂತಹ ಪ್ರತಿಭಾವಂತರ ಗ್ರಂಥಗಳ ಪರಿಚಯವನ್ನಪೇಕ್ಷಿಸಿ ಶ್ರದ್ಧಾಳು ವಿದ್ಯಾರ್ಥಿ ಮುಂದೆ ಬಂದರೆ "ನೀನು ಮೊದಲು ಲೇಖಕರ ಭಾಷೆಯನ್ನೂ ಕಲಿತುಕೋ ಎಂದು ಹೇಳುವುದು ಬಹಳ ವಿಚಿತ್ರವಾಗಿದೆ. ನಾನು ಮಹಡಿಯಿಂದ ಇಳಿದು ಊಟಕ್ಕೆ ಹೋಗಬೇಕಾದರೆ ಇಳಿಯಲು ಮೆಟ್ಟಲನ್ನು ಕಟ್ಟಿ, ಅನಂತರ ಹೋಗುವಹಾಗಿದೆ! ಯಾರೋ ಪುಣ್ಯಾತ್ಮರು ಮೆಟ್ಟಲುಗಳನ್ನು ಕಟ್ಟಿದ್ದಾರೆ; ಸಿದ್ಧವಾಗಿದೆ. ಎಲ್ಲರೂ ಅದನ್ನು ಉಪಯೋಗ ಮಾಡುತ್ತಿದ್ದಾರೆ." ಎಂದು ಅವರು ಉತ್ತರವಿತ್ತರು."

ಎಂದು ಹೇಳಿ ನಿಲ್ಲಿಸಿದೆ. ಪಂಜೆ ಬೆಣಗಲ್ ಇಬ್ಬರಿಗೂ ಆದ ಸಂತೋಷಕ್ಕೆ ಪಾರವೇ ಇಲ್ಲ. ಪಂಜೆಯವರಂತೂ ಹ್ಯೂಗೋರವರ 'ಲೆ ಮಿಜರಬ್ಲೆ'ಯನ್ನು ಕೊಂಡಾಡಿದರು; ಜೀನ್‌ವಾಲ್ಜೀನ್ ಜಾವರ್ಟ್ ಪಾತ್ರಗಳನ್ನು ಸ್ಮರಿಸಿ ಮೈಮರೆತರು. 'ವಿಲ್ಬರ'ನ ಅದರ ಆಂಗ್ಲ ಅನುವಾದ ಅತ್ಯುತ್ತಮ ಕೃತಿ; ಕೌಶಲದ ಕೃತಿಯೆಂದು ಇಂಗರ್ಸಾಲನೇ ಹೇಳಿದ್ದಾನೆ' ಅಂದೆ. 'ಆ ಕೃತಿ ಕನ್ನಡಕ್ಕೆಬೇಕು' ಅಂದರು ಪಂಜೆಯವರು.

'ಶಾಕುಂತಲ'ವನ್ನಾಗಲೀ 'ಮೃಚ್ಛಕಟಿಕ'ವನ್ನಾಗಲೀ ಮೂಲ ಸಂಸ್ಕೃತದಲ್ಲೇ ಓದಿದರೆ ಪರಮ ಲಾಭ. ಪರಮಾನಂದವಾಗುತ್ತದೆ; ಇದರಲ್ಲಿ ಸಂದೇಹವಿಲ್ಲ. (ಅವುಗಳ ಕನ್ನಡ ಭಾಷಾಂತರಗಳೂ ವಿಮರ್ಶೆಗೆ ಬಂದುವು) ಆದರೆ ಅವುಗಳ ಅನುವಾದಗಳನ್ನು ಅವರವರ ಭಾಷೆಗಳಲ್ಲಿ ಓದಿದ ಮಾತ್ರದಿಂದ ಅವರಿಗೇನೂ ನಷ್ಟವಾಗುವುದಿಲ್ಲ. ಹೃದಯ ಸ್ಪಂದನಕ್ಕೆ, ಪ್ರತಿಭೆಯ ವಿದ್ಯುತ್ಪ್ರವಾಹಕ್ಕೆ ಭಾಷೆ ಒಂದು ಸಾಧನ, ಸಂಕೇತ ಮಾತ್ರ. ಈ ಸಾಧನ, ಸಂಕೇತ ಲೇಖಕನಿಗೂ ವಾಚಕನಿಗೂ ಮಧ್ಯೆ ತೆಳ್ಳನೆಯ ಪರದೆಯನ್ನೆಳೆಯುತ್ತದೆಂಬುದು ನಿಜ. ಇದು ಅನಿವಾರ್ಯ. ಲೇಖಕ ವಾಚಕರಿಬ್ಬರೂ ಜ್ಞಾನ ಮತ್ತು ಶಕ್ತಿಸಂಪನ್ನರಾಗಿದ್ದರೆ ಅವರು ಆ ಪರದೆಯನ್ನು ಕತ್ತರಿಸಿ ಹಾಕಬಲ್ಲರು.

ಮೂಲ ಲೇಖಕನು ಮಾತ್ರವಲ್ಲ; ಅನುವಾದಕನೂ ಸಹ ಲೇಖಕನಿಗೆ ಸಮಾನಸ್ಕಂಧನಾಗದೆ ಇದ್ದರೂ ಸಾಕಾದಷ್ಟು ಯೋಗ್ಯತಾ ಸಿದ್ಧಿ ಪಡೆದವನಾಗಿರಬೇಕು. 'ಲೆ ಮಿಜರಬ್ಲೆ' ಅನುವಾದ ಮಾಡುವುದು ಸುಲಭವಾದ ಕೆಲಸವಲ್ಲ. ಎಲ್ಲರೂ ವಿಲ್ಬರುಗಳೆನಿಸಲಾರರು.

ಮತ್ತೊಂದು ಸಂದರ್ಭದ ನೆನಪಾಗುತ್ತದೆ. ಪಂಜೆ, ಬೆಣಗಲ್ ಇಬ್ಬರಲ್ಲದೆ ಇನ್ನೂ ಇಬ್ಬರು ಮೂವರು 'ಸುಖಸಂಕಥಾ ವಿನೋದಗೋಷ್ಠಿ'ಗೆ ಸೇರಿದ್ದರು. 'ಸ್ನೇಹಿತರ ಸಹವಾಸ; ಸಂಭಾಷಣೆ,

ಉತ್ತಮ ಲೇಖಕನಿಗೆ ಅವಶ್ಯಕ'ವೆಂಬ ಮಾತು ಹೇಗೋ ಮೊದಲಾಯಿತು. 'ಅದೇ ಲೇಖಕನ ಸರ್ವಸ್ವ' ಅಂದರೊಬ್ಬರು. ಪ್ರತಿಭೆಯು ತನ್ನ ಅವ ಕುಂಠನವನ್ನು ತೆಗೆದೆಸೆಯುವುದು ಅಲ್ಲೆ' ಅಂದರು ಪಂಜೆಯವರು. ಆ ಮಾತು ಎಲ್ಲರನ್ನೂ ಮೂಕರನ್ನಾಗಿ ಮಾಡಿತು! ನನ್ನ ತಲೆಯಂತೂ ಗಿರ್ರನೆ ತಿರುಗಲಾರಂಭಿಸಿತು.

"ಶ್ರೇಷ್ಠಜನರ ಉದಾಹರಣೆ, ಪ್ರತಿಭಾವಂತರ ಅನುಕರಣ ಇವೆರಡರಿಂದ ಲೇಖಕ ಬೆಳೆಯಬೇಕು. ಪ್ರಪಂಚದಲ್ಲಿ ಮಹಾ ಮಹಾ ಲೇಖಕರು ಇದಕ್ಕೆ ಉದಾಹರಣೆಯಾಗಿದ್ದಾರೆ." ಎಂಬ ವಿಚಾರ ವಿಮರ್ಶೆಗೆ ಮೊದಲಾಯಿತು. ಬೆಣಗಲ್‌ರವರು ಅನೇಕ ಪಾಶ್ಚಾತ್ಯ ಲೇಖಕರನ್ನೂ ಉದಹರಿಸಿದರು.

"ಅನುಕರಣವೇ ಅನುಶೀಲನ, ಅನುಷ್ಠಾನ" ಎಂಬದಾಗಿ ಹೇಳಿ ಆ ಮಾತುಗಳ ಮರ್ಮವನ್ನೂ ಬಿಡಿಸಿ ಬಿಡಿಸಿ ಹೇಳಿದರು. ಕೆಲಸಗಾರನ ಜೀವನದಲ್ಲಿ ಅನುಕರಣ ಆಗತ್ಯವಾದ ಒಂದು ಘಟ್ಟ. ಸಾಹಿತಿ, ಕಲಾವಿದ ಯಾವನೇ ಆಗಲಿ ಈ ಘಟ್ಟದಲ್ಲಿ ಮೊದಲು ಮೊದಲು ತನ್ನ ಪಾದಗಳನ್ನಿಟ್ಟೇ ಮುಂದೆ ಸಾಗಬೇಕೆಂದು ಅವರು ತಿಳಿಸಿದರು. ಮಾನವನಿಗೇಕೆ ಪ್ರಾಣಿ ಸಮುದಾಯಕ್ಕೆಲ್ಲ 'ಅನುಕರಣ' ಜನ್ಮಸಿದ್ಧವಾದ ಲಕ್ಷಣವೆಂದು ಕಂಡುಬರುತ್ತದೆ. ಏನನ್ನಾದರೂ ಸಾಧಿಸಬೇಕೆಂದು ಬಯಸುವವನು ಅನುಕರಣ ಪಟುವಾಗಿ ಕ್ರಮಶಃ ಆಚರಣೆಯ ಅನುಷ್ಠಾನದ ಆಚಾರ್ಯನಾಗಬೇಕಂದೆ ನಾನು.

ಅಷ್ಟುಹೊತ್ತಿಗೆ ಬೆಣಗಲ್‌ರವರ ವೃದ್ಧ ತಂದೆಯವರು (ಮಂಜುನಾಥಯ್ಯನವರೆಂದಿರಬೇಕು ಅವರ ಹೆಸರು) ತಟ್ಟೆಯಲ್ಲಿ ಕೊಬ್ಬರಿ ಬೆಲ್ಲ ಬೆರೆಸಿದ ಅವಲಕ್ಕಿಯನ್ನು ತಂದು ನಮಗೆಲ್ಲ ಕೊಟ್ಟರು. "ಈಗ ನಾವೆಲ್ಲ ಅನುಷ್ಠಾನದ ಆಚಾರ್ಯಪುರುಷರಾಗಲು ಒಳ್ಳೆ ಅವಕಾಶ ಒದಗಿದೆ" ಅನ್ನುತ್ತ ನಗಲಾರಂಭಿಸಿದರು ಪಂಜೆಯವರು. ಅವರೊಂದಿಗೆ ನಾವೂ ನಗುತ್ತ ಅವಲಕ್ಕಿಯನ್ನು ಮೆಲ್ಲಲಾರಂಭಿಸಿದೆವು. ಪಂಜೆಯವರು ಮಾತನಾಡಲು ಮೊದಲಿಟ್ಟರೆ ಸಾಕು.

"ನುಡಿಗಳು ನವರಸ ಪ್ರಸ್ಯಂದಮಂ ಲೀಲೆಯಿಂ ಪಡೆಗುಂ" ಅದು 'ವಾಗ್ವಿದ್ಯಾಧರ'ನ ಪ್ರಭಾವ!

* * *

ಇದೇ ಕಾಲದಲ್ಲೇ ನನ್ನ ಸ್ನೇಹಗಣಕ್ಕೆ ಕೀರ್ತಿಶೇಷರಾದ ಎ. ಎಸ್. ರಾಮನಾಥ ಮತ್ತು ಕೆ. ವಿ. ಲಕ್ಷ್ಮಣರಾಯರು ಸೇರಿದ್ದು. ಮೊದಲವರು ತಮಿಳರು; ಎರಡನೆಯವರು ತೆಲುಗರು. ರಾಮನಾಥರವರಿದ್ದ ಪ್ರಾಕ್ತನ ವಿಮರ್ಶೆ ಮತ್ತು ಶಾಸನಗಳ ಶಾಖೆಯಲ್ಲೇ ನಾನೂ ಕೆಲಸಮಾಡುತ್ತಿದ್ದದ್ದು. ರಾಮನಾಥರವರು ತಿರುವಾಂಕೂರಿನ 'ಆರ್ಕಿಯಲಾಜಿಕಲ್' ಶಾಖೆಯ ಅಧಿಕಾರಿಗಳಾಗಿಯೂ ಇದ್ದರು. ಕೊಮರ್ರಾಜು ಲಕ್ಷ್ಮಣರಾಯರು ಮುನಗಾಲಾ ದಿವಾನರು. ಅವರು ಭಾಷಾ ಸಾಹಿತ್ಯೇತಿಹಾಸ ಸಂಶೋಧಕರು. ಅವರು ಆಗಾಗ ನಮ್ಮ ಕಾರ್ಯಾಲಯಕ್ಕೆ ಬಂದು ಸಂಶೋಧನಾ ಕಾರ್ಯ ನಡೆಸುತ್ತಿದ್ದರು. ಅವರನ್ನೂ ನಾನು 'ಆಂಧ್ರ ಸಾಹಿತ್ಯ ಪರಿಷತ್' ಮತ್ತು 'ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ'ಗಳಲ್ಲೂ ಭೇಟಿಮಾಡುತ್ತಿದ್ದೆ. ತೆಲುಗು ಸಂಶೋಧಕ ವಿದ್ವಾಂಸರ ಮಾತು ಹಾಗಿರಲಿ ತಮಿಳು ನಗೆಗಾರ ಸೂಕ್ಷ್ಮವಿಮರ್ಶಕರನ್ನೂ ಕೊಂಚನೋಡಿ.

ಬಹಳ ಸರಸಿಗಳು. "ನಾವಿರುವುದು ನಾಲ್ಕು ಮಂದಿ. ನಾನು, ನಮ್ಮಾಕೆ, ನಮ್ಮಮ್ಮ, ನಮ್ಮಣ್ಣನ ಮಗಳು. ಮೊದಲನೆ ತಾರೀಖು ಒಂದು ಹಡಿ ಬೇಳೆ ತಂದರೆ ಮತ್ತೆ ಬೇಳೆ ವ್ಯಾಪಾರ ಮೊದಲನೆ ತಾರೀಖೇ. ನೀವು ಇರುವುದಿಬ್ಬರು (ನಾನು, ಕೀರ್ತಿಶೇಷ ಕಂದಾಡೆ ಕೃಷ್ಣಯ್ಯಂಗಾರ್ಯರು) ಎರಡು ದಿನಕ್ಕೊಂದು ಪಡಿ ಮುಗಿಸೋ ಹಾಗಿದೆಯಲ್ಲ! You Canadian Pappus!" ಅನ್ನುವರು! 'ನೀವು ದಿನಕ್ಕೆಷ್ಟು ಹಾಲು ಕೊಳ್ಳುತೀರಿ" ಅಂದರೆ ತಕ್ಷಣ ಅವರು "ಅರೆಕ್ಕಾಲ್ ಆಳಾಕ್" ಅನ್ನುವರು!

ಬೇರೆ ಕಚೇರಿಯಿಂದ ನಮ್ಮ ಕಾರ್ಯಾಲಯಕ್ಕೆ ಗೃಹಸ್ಥರೊಬ್ಬರು ಬಂದರು. ಅವರ ಪರಿಚಯವನ್ನೂ ಮಾಡಿಕೊಟ್ಟ ಬಗೆ ನೋಡಿ.

"ವರ್ಗವಾಗಿ ಬಂದಹಾಗಿದೆ" ಅಂದೆ ನಾನು.

"ಅತಿಕಾಯವರ್ಗದವರಿಗೆ ಅವರ ಕಚೇರಿಯಲ್ಲಿ ಸ್ಥಳವಿಲ್ಲವೆಂದು ವಿಶಾಲವೀಧಿಯಂತಿರುವ ನಮ್ಮ ಕಚೇರಿಗೆ ಕಳುಹಿಸಿದ್ದಾರೆ" ಅಂದರು. ಎಲ್ಲರೂ ನಕ್ಕೆವು. "ಇವರು ದೊಡ್ಡ ಗ್ರಂಥಕರ್ತರು 'Puranic India', 'Forts and Fortrerses', 'Gods and goddesses' ಎಂದು ಮುಂದುವರಿಸುತ್ತಿರಲು ನಾನು "ಪುರಾಣಿಕ್ ಇಂಡಿಯಾ ಅಂದರೆ" ಅಂದೆ. "ಅಯ್ಯೋ! ಗೊತ್ತಿಲ್ಲವೆ ನಿಮ್ಮ "ಛಪ್ಪನ್ನಾರು ದೇಶ

ಗಳು" ಅನ್ನುತ್ತ 'ನಮ್ಮ ಮಿತ್ರರ ಮುಂದಿನ ಪ್ರಕಟನೆ ಹೆಸರು ಗೊತ್ತೋ? 'Rogues and Rascals' ಅಂದು ನಗುವಿನ ಪ್ರಚಂಡ ತರಂಗಗಳನ್ನೆಬ್ಬಿಸಿಬಿಟ್ಟರು. ಆ ತರಂಗ ಸುಖಾನುಭವಿಗಳಲ್ಲಿ ರಾಮನಾಥ್ ಮೊದಲಿಗರು; ಎರಡನೆಯವರು ಅವರ ಮಿತ್ರರು!

* * *

> "ವಂಗೀಯ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಪರಿಷತ್; ಆಂಧ್ರ ಸಾಹಿತ್ಯ ಪರಿಷತ್ ಇಂತಹ ಪರಿಷತ್ತೇನಾದರೂ ತಮಿಳು ನಾಡಿನಲ್ಲುಂಟೋ? ನಿಮ್ಮ ಸಾಹಿತ್ಯದಲ್ಲಿ ಹೊಸ ಸೃಷ್ಟಿಯೇನಾದರೂ ಉಂಟೋ?"

ಎಂಬದಾಗಿ ಒಮ್ಮೆ ಮಿತ್ರ ರಾಮನಾಥ್‌ರವರನ್ನು ಕೇಳಿದೆ. ಅವರು ನನ್ನನ್ನೂ 'ಅಯ್ಯೋ ಪಾಪ' ಅನ್ನುವಹಾಗೆ ನೋಡಿ

> "ನಿಮ್ಮ ಪರಿಷತ್ ಗಿರಿಷತ್ ನಮ್ಮಲಿಲ್ಲ. ಯಾತಕ್ಕೆ ಪರಿಷತ್? ನಮ್ಮಲ್ಲಿ ಮೂರು ಸಂಘಗಳಿದ್ದುವು. ಮಧುರೆಯಲ್ಲಿ. ಮೂರನೆಯ ಸಂಘ ಅಥವಾ ಕಟ್ಟಕಡೆಯ ಸಂಘದ ಕಾಲ ಸುಮಾರು ಕ್ರಿಸ್ತಶಕ ಎರಡನೆಯ ಶತಮಾನ. ಆ ಸಂಘದಲ್ಲಿ ೪೯ ಮಂದಿ ಮಹಾ ಕವಿಗಳಿದ್ದರಂತೆ. ಅವರಲ್ಲಿ ನಕ್ಕೀರರ್ ಒಬ್ಬ. ತಮಿಳಿನಲ್ಲಿ ಮೊದಲು ವ್ಯಾಕರಣ ಬರೆದ ತಾಳ್ಗಾಪ್ಪಿಯರ್ ಮೊದಲೆರಡು ಸಂಘಗಳಲ್ಲಿದ್ದರು. ಎರಡನೆಯ ಸಂಘದ ಕಾಲದಲ್ಲಿ ಮಹಾ ಪ್ರಳಯವಾಗಿ ಪಾಂಡ್ಯದೇಶವೆಲ್ಲ ಮುಳುಗಿ ಹೋಯಿತಂತೆ. 'ಶಿಲಪ್ಪದಿಗಾರ' ದಲ್ಲಿ ಈ ವಿಚಾರ ಹೇಳಿದೆ. ಈ ಕಾಲವನ್ನೆಲ್ಲ ಜೈನರ ಕಾಲ ಅನ್ನೋಣ. ಎಳೆಂಟನೆಯ ಶತಮಾನದಿಂದ ಶೈವನಾಯನಾರುಗಳು, ವೈಷ್ಣವ ಆಳ್ವಾರುಗಳು ಹುಟ್ಟಿದರು; ಹೊಡೆದಾಡಿದರು, ಸಾಹಿತ್ಯ ಸೃಷ್ಟಿ ಮಾಡಿದರು. ಹನಾಲ್ಕನೆಯ ಶತಮಾನದ ಅನಂತರ ಹೊಸದೊಂದು ಚಟುವಟಿಕೆ ಕಾಣಬಂತು. ಹದಿನೇಳನೆ ಶತಮಾನದಲ್ಲಿರಬೇಕು ಸಿದ್ಧರ ಬಳುವಳಿಯ ಆರಂಭ ಈಗ ಅದೇ ಆರ‍್ಯದ್ರಾವಿಡ ಸಂಗ್ರಾಮ ಸಂಕೇತವೇ ಇಂದಿನ ತಮಿಳು 'ನಾವೆಲ್'! ಮೊದಲನೆ ಪುಟದ ಮೊದಲನೆ ವಾಕ್ಯದ ಮೊದಲನೆಯ ಮಾತೇ 'ರಕ್ತ' ವಾಗಿರಬೇಕು. ಮೊದಲನೆಯ ಅಧ್ಯಾಯ ಮುಗಿಯುವುದರೊಳಗಾಗಿ ಮೂರು ಹೆಣಗಳಾದರೂ ಬಿದ್ದಿರಬೇಕು. ಗೊತ್ತಾಯಿತೋ?"

ಅಂದು ನನ್ನ ಕಣ್ಣಲ್ಲಿ ಕಣ್ಣಿಟ್ಟು ಕಿರುನಗೆ ನಕ್ಕರು!

ನನ್ನ ಮಿತ್ರರು ಅತ್ಯುತ್ತಮವಾದ ಶೈಲಿಯಲ್ಲಿ ತಮಿಳು ಗದ್ಯವನ್ನು ಬರೆಯುತ್ತಿದ್ದರೆಂದೂ, ಶ್ರೇಷ್ಠ ವರ್ಗದ ಸಾಹಿತ್ಯ ವಿಮರ್ಶಕರೆಂದೂ ನಾನು ಬಲ್ಲೆ. ರೇಖಾ ಚಿತ್ರಗಳನ್ನು ಬಹಳ ಚೆನ್ನಾಗಿ ಬರೆಯುತ್ತಿದ್ದರು. ಕುಮಾರಸ್ವಾಮಿಯ ಚಿತ್ರವನ್ನು ಅವರೆಷ್ಟು ಬಗೆಯಾಗಿ ಬರೆದರೂ ಅವರಾಸೆ ತೀರದು. ಇಷ್ಟು ವರ್ಷಗಳಾದ ಮೇಲೆ ನಾನವರ ನೆನಪನ್ನು ಮಾಡಿಕೊಳ್ಳುತ್ತಿದ್ದೇನೆ. ಇಂದೇ ಸುದಿನ.

ಸಕ್ಕರೆಯ ಚರಿತ್ರೆ

(ಸಕ್ಕರೆ ಕೈಗಾರಿಕೆಯ ಹುಟ್ಟು ಮತ್ತು ಬೆಳವಣಿಗೆಯ ಸಂಕ್ಷಿಪ್ತ ಪರಿಚಯ)

ಶ್ರೀ ಬಿ. ಎಸ್. ನಾಗಪ್ಪ, ಮಂಡ್ಯ

ಲೇಖಾಂಕ ೧

ಸಕ್ಕರೆಯೆಂದರೆ ನಮಗೆ ತಟ್ಟನೆ ಗೋಚರವಾಗುವುದು ನಾವು ದಿನ ನಿತ್ಯ ಕಾಫ್ಗಿಗಾಗಿ ಉಪಯೋಗಿಸುವ ಶುದ್ಧ ಬಿಳಿಯ ಹರಳು ಸಕ್ಕರೆ. ಆದರೆ ವಿಜ್ಞಾನದ ದೃಷ್ಟಿಯಲ್ಲಿ ಇದಕ್ಕೆ ತನ್ನದೇ ಆದ ಒಂದು ವಿಶಾಲವಾದ ಅರ್ಥವಿದೆ. ವೈಜ್ಞಾನಿಕ ಪರಿಭಾಷೆಯುಲ್ಲಿ ಸಕ್ಕರೆಗೆ 'ಸುಕ್ರೋಸ್' (Sucrose) ಎಂದು ಕರೆಯುತ್ತಾರೆ. ಈ ಸಕ್ಕರೆ ಅಥವ ಸುಕ್ರೋಸ್ ಒಂದು ವಿಶಿಷ್ಟ ಗುಣ ಮತ್ತು ಲಕ್ಷಣ ಹೊಂದಿರುವುದರಿಂದ, ರಸಾಯನ ಶಾಸ್ತ್ರಜ್ಞರು ಅದನ್ನು ಬಹು ಸುಲಭವಾಗಿ ಗುರುತಿಸಬಲ್ಲರು. ಆಹಾರ ಪದಾರ್ಥಗಳಲ್ಲಿ ಸಾಮಾನ್ಯವಾಗಿ ದೊರೆಯುವ ಈ ಸಕ್ಕರೆಯ (ಸುಕ್ರೋಸ್) ಹತ್ತಿರದ ಸಂಬಂಧಿಗಳೆಂದರೆ, ಡಿ-ಗ್ಲೂಕೋಸ್, (D-glucose). ಇದಕ್ಕೆ ಡೆಕ್ಸ್ಟ್ರೋಸ್ (Dextrose) ಅಥವ 'ಧಾನ್ಯ ಸಕ್ಕರೆ' (Corn Sugar) ಎಂದೂ ಹೆಸರು. ಮತ್ತು ಡಿ-ಫ್ರುಕ್ಟೋಸ್ (D-Fructose) ಇದಕ್ಕೆ ಲೆವಲೋಸ್ (Levulose) ಅಥವ 'ಹಣ್ಣಿನ ಸಕ್ಕರೆ' (Fruit Sugar) ಎಂದೂ ಹೆಸರು. ಈ ಸಕ್ಕರೆ ಸಂಬಂಧಿಗಳು ಕೂಡ (Sugar relatives) ಹರಳಿನ ರೂಪದಲ್ಲಿರಬಲ್ಲವಾದ್ದರಿಂದ, ಅವುಗಳನ್ನೂ ಸುಲಭವಾಗಿ ಗುರುತಿಸಬಹುದು.

ಸಕ್ಕರೆಯು ಇಂದು ಅಗತ್ಯವಾದ ಆಹಾರ ವಸ್ತುಗಳಲ್ಲೊಂದಾಗಿರುವುದರಿಂದ, ಅದಕ್ಕೆ ಜೀವನದಲ್ಲಿ ಹೆಚ್ಚು ಪ್ರಾಮುಖ್ಯತೆಯುಂಟು. ದಿನ ಬೆಳಗಾದರೆ ಒಂದಲ್ಲ ಒಂದು ರೀತಿಯಲ್ಲಿ ಜನಗಳ ಬಾಯನ್ನು ಸಿಹಿ ಮಾಡಿ, ಮಕ್ಕಳು ಮುದಿಗಳೆನ್ನದೆ ಎಲ್ಲರ ಪ್ರೀತಿವಿಶ್ವಾಸಗಳಿಗೆ ಪಾತ್ರವಾದ ಈ ಸಕ್ಕರೆಯ ಚರಿತ್ರೆ ತಿಳಿಯುವುದು ತುಂಬ ಸ್ವಾರಸ್ಯವೂ ಅಗತ್ಯವೂ ಆಗಿದೆ. ಆದ್ದರಿಂದ ಆ ಬಗ್ಗೆ ಮುಂದೆ ಪ್ರಸ್ತಾಪ ಮಾಡೋಣ.

ಸಕ್ಕರೆಯ ಇತಿಹಾಸ ತಿಳಿಯಬೇಕಾದರೆ ನಾವು ಪುರಾತನ ಕಾಲಕ್ಕೆ ನಮ್ಮ ದೃಷ್ಟಿ ಚೆಲ್ಲಬೇಕಾಗುತ್ತದೆ. ಇತಿಹಾಸ ಕಾಲಕ್ಕೂ ಹಿಂದೆ ಮನುಷ್ಯರಿಗೆ ಸಕ್ಕರೆಯ ವಿಷಯ ತಿಳಿಯದಿದ್ದರೂ, ಒಂದು ವಿಧದಲ್ಲಿ ಅವರು ಕಾಯಿಪಲ್ಯಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದಾಗಲೆಲ್ಲಾ ಸಕ್ಕರೆಯನ್ನು ಸೇವಿಸುತ್ತಿದ್ದರೆಂದೇ ಹೇಳಬೇಕು ಕಾಯಿಪಲ್ಯ ಮತ್ತು ಹಣ್ಣುಹಂಪಲುಗಳಲ್ಲೆಲ್ಲಾ ಸಕ್ಕರೆಯ ಅಂಶ ಇರುವುದೇ ಇದಕ್ಕೆ ಉದಾಹರಣೆಯಾಗಿದೆ. ಮನುಷ್ಯ ಸಕ್ಕರೆಯ ವಿಷಯ ತಿಳಿದು ಸುಮಾರು ಮೂರುಸಾವಿರ ವರ್ಷಗಳಾಗಿರಬಹುದು. ಅದಕ್ಕೂ ಹಿಂದೆ ಜನಗಳು ಸಿಹಿಗಾಗಿ ಜೇನುತುಪ್ಪ ಉಪಯೋಗಿಸುತ್ತಿದ್ದರು.

ಪ್ರಪಂಚದ ವಿಶಿಷ್ಟ ಸಕ್ಕರೆ ಉತ್ಪತ್ತಿಗೆ ಇಂದು ಕಬ್ಬು ಮತ್ತು ಬೀಟ್‌ರೂಟುಗಳೇ ಮೂಲಾಧಾರವಾಗಿವೆ. ಆದ್ದರಿಂದ ಸಕ್ಕರೆ ಚರಿತ್ರೆ ತಿಳಿಯಬೇಕಾದರೆ, ಈ ಕಬ್ಬು ಮತ್ತು ಬೀಟ್‌ರೂಟುಗಳ ಚರಿತ್ರೆ ತಿಳಿಯುವುದೂ ಅಗತ್ಯವಾಗಿದೆ.

ಕಬ್ಬಿಗೆ ಭಾರತವೇ ತೌರೂರು. ಕಬ್ಬಿನ ಉಲ್ಲೇಖನವನ್ನು ನಾವು ಮೊದಲು ಕಾಣುವುದು ನಮ್ಮ ಪೌರಾಣಿಕ ಗ್ರಂಥಗಳಲ್ಲಿ. ಅಲ್ಲದೆ ನಮ್ಮ ಹಲವು ಪುರಾತನ ಶಾಸ್ತ್ರಗಳಲ್ಲಿ ಸಕ್ಕರೆಗೆ 'ಶರ್ಕರ' ಎಂದು ಸಂಭೋದಿಸಿರುವುದನ್ನು ನೋಡಬಹುದು. ಇದರಿಂದ ಭಾರತದಲ್ಲಿ ಕಬ್ಬು ಮತ್ತು ಸಕ್ಕರೆಯು ಎಷ್ಟು ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ ಎಂಬುದು ಗೋಚರವಾಗುತ್ತದೆ. ಆದರೆ ಹಿಂದೆ ಎಂದೂ ಇಂದಿನಂತೆ ಸಕ್ಕರೆ ಉತ್ಪತ್ತಿ ಮಾಡುತ್ತಿರಲಿಲ್ಲವೆಂಬುದನ್ನು ಅರಿಯಬೇಕು.

ಕ್ರಿ. ಪೂ. ನಾಲ್ಕನೆ ಶತಮಾನಕ್ಕೆ ಸೇರಿದ ಕೆಲವು ಬೌದ್ಧ, ದಂತಕತೆಗಳಲ್ಲಿ ಕೂಡ ಕಬ್ಬಿನ ಉಲ್ಲೇಖನವನ್ನು ಕಾಣಬಹುದು. ಕಬ್ಬಿಗೆ ಗಂಗಾನದಿಯ ಬಯಲು ಪ್ರದೇಶವೇ ಆದಿಮೂಲ. ಇದು ನಿಜವೆಂಬುದಕ್ಕೆ ಅನೇಕ ಆಧಾರಗಳನ್ನು ತೋರಿಸಬಹುದು. ಬೈಬಲ್‌ನಲ್ಲೇ ಆಗಲಿ, ಕುರಾನಿನಲ್ಲಿಯೇ ಆಗಲಿ ಜೇನುತುಪ್ಪದ ಉಲ್ಲೇಖನವಿದೆಯೇ ಹೊರತು, ಕಬ್ಬು ಅಥವ ಸಕ್ಕರೆಯ ಉಲ್ಲೇಖನವಿಲ್ಲದೆ ಇರುವುದರಿಂದ, ಈ ಮಾತಗಳಿಗೆ ಜನ್ಮಭೂಮಿಯಾದ ಅರೇಬಿಯವು ಕಬ್ಬಿಗೆ ತೌರೆಂದು ಹೇಳಲು ಸಾಧ್ಯವೇ ಇಲ್ಲ.

ಕಬ್ಬು ಮೊದಲು ಭಾರತದಿಂದ ಪರ್ಷಿಯಕ್ಕೂ, ಅನಂತರ ಇತರ ದೇಶಗಳಿಗೂ ಹರಡಿತೆಂದು ಹೇಳಲಾಗಿದೆ. ವಿದೇಶಗಳಿಗೆ ಕಬ್ಬಿನ ವಿಷಯ ತಿಳಿದಿದ್ದು ಅಲೆಕ್ಸಾಂಡರನ ದಂಡಯಾತ್ರೆಯ ತರುವಾಯವೆ. ಕ್ರಿ.ಪೂ. ೩೨೭ ರಲ್ಲಿ ಅಲೆಕ್ಸಾಂಡರ ನೌಕಾಧಿಪತಿಯಾದ ನಿಯಾರ್ಕಸ್ಸನು ಒಂದು ದಿನ ಸಿಂಧೂನದಿಯಮೇಲೆ ಪ್ರಯಾಣ ಮಾಡುತ್ತಿದ್ದಾಗ ಆಕಸ್ಮಾತ್ ಜೇನಿನಷ್ಟು ಸಿಹಿ ಕೊಡುವ ಒಂದು ಬಗೆಯ ಜೊಂಡನ್ನು (ಕಬ್ಬು) ಕಂಡನಂತೆ. ಅಂದಿನಿಂದ ಕಬ್ಬು ವಿದೇಶಿಯರ ಆಕರ್ಷಣೆಗೆ ಒಳಗಾಯಿತು. ಮತ್ತು ಅವರು ಅದನ್ನು ಬಹಳ ಆಸಕ್ತಿಯಿಂದ ಕೊಂಡೊಯ್ದು ತಮ್ಮ ದೇಶಗಳಲ್ಲಿ ಪ್ರಚುರಪಡಿಸಿದರು.

ಕ್ರಿ.ಪೂ. ೨ನೇ ಶತಮಾನದಲ್ಲೇ ಕಬ್ಬು ಭಾರತದಿಂದ ಚೈನಾಕ್ಕೂ ಹಬ್ಬಿತು. ಪ್ರಸಿದ್ಧ ಚೈನಾ ಯಾತ್ರಿಕನಾದ ಫಾಹಿಯಾನನ ಹೇಳಿಕೆ ಪ್ರಕಾರ ಕ್ರಿ.ಶ. ೩೯೯ ರ ಹೊತ್ತಿಗೆ ಕಬ್ಬು ಚೈನಾದಲ್ಲಿ ಚೆನ್ನಾಗಿ ತಳ ಊರಿದ್ದಿತು. ಕ್ರಿ.ಶ. ೬೦೦ ರಲ್ಲಿ ಚೈನಾ ಚಕ್ರವರ್ತಿಯಾದ ತಾಷ್ ಸಂಗನು ಕಬ್ಬಿನ ವ್ಯವಸಾಯ ಮತ್ತು ಸಕ್ಕರೆ ತಯಾರಿಕೆಯ ಬಗ್ಗೆ ಹೆಚ್ಚು ಅನುಭವ ಪಡೆದು ಬರಲು ಭಾರತಕ್ಕೆ ಒರ್ವ ಪ್ರತಿನಿಧಿಯನ್ನು ಕಳುಹಿಸಿಕೊಟ್ಟನು. ಇದರಿಂದ ಚೈನಾದಲ್ಲಿ ಸಕ್ಕರೆ ಕೈಗಾರಿಕೆ ಮತ್ತಷ್ಟು ಅಭಿವೃದ್ಧಿಗೊಳ್ಳಲು ತುಂಬ ಸಹಾಯವಾಯಿತು. ೮ನೇ ಶತಮಾನದ ಹೊತ್ತಿಗೆ ಈ ಕೈಗಾರಿಕೆ ತುಂಬ ಉಚ್ಛ್ರಾಯಸ್ಥಿತಿಯಲ್ಲಿತ್ತು. ಸುಪ್ರಸಿದ್ಧ ವೆನಿಸ್ ಪ್ರವಾಸಿಗನಾದ ಮಾರ್ಕ್ಕೊ ಪೋಲೊ ೧೨೭೦ ರಲ್ಲಿ ಶುದ್ಧ ಬಿಳಿಯ ಸಕ್ಕರೆಯನ್ನು ಚೈನಾದಲ್ಲಿ ಯಥೇಚ್ಛವಾಗಿ ತಯಾರಿಸುತ್ತಿದ್ದರೆಂದು ತಿಳಿಸುತ್ತಾನೆ. ಹೀಗೆ ಕಬ್ಬು ಒಂದುಕಡೆ ಭಾರತದಿಂದ ಪರ್ಷಿಯಾಗೂ, ಮತ್ತೊಂದು ಕಡೆ ಚೈನಾಕ್ಕೂ ಹಬ್ಬಿ ಬಹಳ ಪ್ರಸಿದ್ಧಿಗೆ ಬಂದಿತು.

ಕ್ರಿ.ಶ. ೪೦೦ ರಲ್ಲಿ ಯೂಫ್ರಿಟಸ್ ನದಿ ಮುಖದಲ್ಲಿದ್ದ ಗೊಂಡಿಸ್‌ಪುರದಲ್ಲಿ ನೆಸ್ಟೋರಿಯನ್ ಕ್ರೈಸ್ತ ಸನ್ಯಾಸಿಗಳು ಒಂದು ಪ್ರಸಿದ್ಧ ಆರೋಗ್ಯಧಾಮವನ್ನು ನಡೆಸುತ್ತಿದ್ದರೆಂದೂ, ಈ ಆರೋಗ್ಯಧಾಮಕ್ಕೆ ಅನೇಕ ಭಾರತೀಯ ವೈದ್ಯರುಗಳು ಬಂದು ಹೋಗುತ್ತಿದ್ದರೆಂದೂ ಹೇಳಲಾಗಿದೆ. ಕ್ರಿ.ಶ. ೪೫೦ ರಲ್ಲಿ ಔಷಧಿಗಳ ಉಪಯೋಗಕ್ಕಾಗಿ ಈ ಸನ್ಯಾಸಿಗಳು ಮೊಟ್ಟಮೊದಲು ಕಬ್ಬಿನಿಂದ ಸ್ವಚ್ಛ:ಬಿಳಿಯ ಸಕ್ಕರೆ ಮಾಡುವುದನ್ನು ಕಂಡುಹಿಡಿದರೆಂದು ತಿಳಿದು ಬಂದಿದೆ.

ಕ್ರಿ. ಶ. ೬೩೭ ರಲ್ಲಿ ಅರಬ್ಬರು ಪರ್ಷಿಯಾವನ್ನು ಗೆದ್ದಮೇಲೆ, ಅವರು ಕಬ್ಬಿನ ವ್ಯವಸಾಯದಲ್ಲಿ ತುಂಬ ಆಸಕ್ತಿ ವಹಿಸಿ ಅದನ್ನು ಅರೇಬಿಯದ ಸುತ್ತಲ ಪ್ರದೇಶಗಳಿಗೆಲ್ಲ ಹರಡಿದರು. ಉದಾಹರಣೆಗೆ ಕಬ್ಬು ಸಿರಿಯಾಕ್ಕೆ ಸುಮಾರು ಕ್ರಿ. ಶ. ೬೩೦ ರಲ್ಲೂ, ಸೈಪ್ರೆಸ್ ಮತ್ತು ಸೊಕಟ್ರ ದ್ವೀಪಕ್ಕೆ ಸುಮಾರು ೭೦೦ ರಲ್ಲೂ, ಮೊರೋಕ್ಕೊ ೭೦೯ ರಲ್ಲೂ ಮತ್ತು ಈಜಿಪ್ಟಿಗೆ ೭೧೦ ರಲ್ಲೂ ಪ್ರವೇಶಿಸಿತು. ಗೊಂಡಿಸಪುರದ ನೆಸ್ಟೋರಿಯನ್ ಕ್ರೈಸ್ತ ಸನ್ಯಾಸಿಗಳ ಆರೋಗ್ಯಧಾಮವು ಈ ಹೊತ್ತಿಗೆ ಇನ್ನೂ ಅಭಿವೃದ್ಧಿಸ್ಥಿತಿಯಲ್ಲಿತ್ತಲ್ಲದೆ, ಅಲ್ಲಿ ಸಕ್ಕರೆ ತಯಾರಿಕೆಯಲ್ಲಿ ಅನೇಕ ಪರಿಶೋಧನೆಗಳು ನಡೆಯುತ್ತಿದ್ದವು. ಈಜಿಪ್ಟಿನ ಅನೇಕ ರಸಶಾಸ್ತ್ರಜ್ಞರು (Alchemists) ಅಲ್ಲಿ ಈ ಉದ್ಯಮದಲ್ಲಿ ತೊಡಗಿದ್ದರು. ಕಬ್ಬಿನ ಹಾಲಿನ ಆಸಿಡ್ ಗುಣವಿಶೇಷವನ್ನು ಹೋಗಲಾಡಿಸಲು ಅದಕ್ಕೆ ಸುಣ್ಣ ಮತ್ತು ಗಿಡದ ಬೂದಿ (Plant Ash) ಬೆರಸಬೇಕೆಂಬುದನ್ನು ಇವರು ಮೊಟ್ಟಮೊದಲು ಕಂಡುಹಿಡಿದು ಸಕ್ಕರೆ ಹಳಿಮಾಡುವಿಕೆಯು (Crystallization) ಪ್ರಗತಿ ಹೊಂದಲು ತುಂಬ ಸಹಾಯ ಮಾಡಿದರು ಅನಂತರ ವ್ಯಾಪಾರಿ ಮಟ್ಟದಲ್ಲಿ ಸಕ್ಕರೆ ತಯಾರುಮಾಡುವುದಕ್ಕೆ ಇದ್ದ ಒಂದು ದೊಡ್ಡ ಕಷ್ಟ ಕಣ್ಮರೆಯಾದಂತಾಯಿತು.

ಕ್ರಿಶ. ೭೧೧ ರಲ್ಲಿ ಅರಬ್ಬರು ಸ್ಪೇನ್ ದೇಶವನ್ನು ಗೆದ್ದ ಮೇಲೆ ಕಬ್ಬಿನ ವ್ಯವಸಾಯವು ಅಲ್ಲಿಗೂ ಹಬ್ಬಿತು. ಅಂತೂ ಹೀಗೆ ಅರಬ್ಬರ ಮತಪ್ರಚಾರದ ದಾಹದಿಂದ ಕಬ್ಬು ಅತಿ ಜಾಗ್ರತೆ ಮೆಡಟರೇನಿಯನ್ ತೀರಪ್ರದೇಶಗಳಿಗೆಲ್ಲ ಪ್ರವೇಶಿಸಿತು. ಕ್ರಿ ಶ. ೧೧೫೦ ರ ಹೊತ್ತಿಗೆ ಸ್ಪೇನಿನಲ್ಲಿ ಕಬ್ಬಿನ ವ್ಯವಸಾಯ ಬಹಳ ಚೆನ್ನಾಗಿ ನಡೆಯುತ್ತಿತ್ತು. ಆದರೆ ಕ್ರಮೇಣ ಅಲ್ಲಿ ಕ್ರೈಸ್ತಮತ ಪ್ರಚಾರಕರ ಪ್ರಾಬಲ್ಯ ಹೆಚ್ಚಾಗಿ, ಸ್ವಲ್ಪ ಕಾಲದಲ್ಲಿ ಅರಬ್ಬರು ಅಲ್ಲಿಂದ ಓಡಿಸಲ್ಪಟ್ಟರು. ಅನಂತರ ಕಬ್ಬಿನ ವ್ಯವಸಾಯ ಸ್ಪೇನಿನಲ್ಲಿ ನಾಶಹೊಂದಿತು. ಯುರೋಪಿನಲ್ಲಿ ೧೨ನೇ ಶತಮಾನದ ಹೊತ್ತಿಗೆ ಸಕ್ಕರೆಯು ತುಂಬ ಜನಪ್ರಿಯತೆಯನ್ನು ಪಡೆದಿತ್ತು ಸಕ್ಕರೆ ಬೆಲೆ ತುಟ್ಟಿಯಾದರೂ, ಜನರು ಅದನ್ನು ಕೊಳ್ಳುತ್ತಿದ್ದರು. ೧೪ನೇ ಶತಮಾನದಲ್ಲಿ ವೆನಿಸ್ ನಗರವು ಸಕ್ಕರೆ ಶುದ್ಧಿಮಾಡುವುದಕ್ಕೂ ಹಾಗೂ ವ್ಯಾಪಾರಕ್ಕೂ ಪ್ರಸಿದ್ಧ ಕೇಂದ್ರವಾಗಿತ್ತು. ೧೪೧೩ ರಲ್ಲಿ ವೆನಿಸ್ ಹಡಗುಗಳು ಇಂಗ್ಲೆಂಡಿಗೆ ಸುಮಾರು ಒಂದು ಲಕ್ಷ ಪೌಂಡು ಸಕ್ಕರೆ ಸಾಗಿಸಿ ಅದರ ಬದಲು ಉಣ್ಣೆಯನ್ನು ಕೊಂಡು ತಂದವು.

ಪೋರ್ಚಗೀಸರು ೧೪೨೦ ರಲ್ಲಿ ಮೆಡಿರ ದ್ವೀಪವನ್ನು ಪುನಃ ಕಂಡುಹಿಡಿದಮೇಲೆ, ಆದು ಜಾಗ್ರತೆ ಕಬ್ಬಿನ ವ್ಯವಸಾಯಕ್ಕೆ ಮತ್ತೊಂದು ಕೇಂದ್ರವಾಯಿತು. ಕಬ್ಬಿನ ವ್ಯವಸಾಯವು ಆಗ ಎಷ್ಟು ಲಾಭಕರವಾಗಿತ್ತೆಂದರೆ, ಸಮುದ್ರ ಪ್ರವಾಸಿಗರು ಕಷ್ಟವನ್ನು ಲೆಕ್ಕಿಸದೆ ಪಶ್ಚಿಮಾಭಿಮುಖವಾಗಿ ಹೆಚ್ಚು ಪ್ರವಾಸ ಮಾಡಿ, ಕಬ್ಬು ಬೆಳೆಯುವುದಕ್ಕೆ ಹೊಸ ಹೊಸ ಭೂಮಿಗಳನ್ನು ಕಂಡುಹಿಡಿದರು. ಆದರೆ ೧೪೩೨ ರಲ್ಲಿ ಅಜರೋಸ್ ದ್ವೀಪವೂ, ಅನಂತರ ಕೇಪ್‌ವರ್ಡಿ ದ್ವೀಪಗಳೂ, ತದನನಂತರ ಕ್ಯಾನರಿ ದ್ವೀಪವೂ ಮತ್ತು ಕೊನೆಯದಾಗಿ ವೆಸ್ಟ್ ಇಂಡೀಸ್ ದ್ವೀಪವೂ ಕಂಡುಹಿಡಿಯಲ್ಪಟ್ಟವು. ಕೊಲಂಬಸ್ಸನು ೧೪೯೩ ರಲ್ಲಿ ಸಾಂಟೋಡಾಮಿಂಗದಲ್ಲಿ ಕಬ್ಬನ್ನು ಬಿತ್ತಿದನು. ಅನಂತರ ಕಬ್ಬು ಅಲ್ಲಿಂದ ಪೋರ್ಟ್‌ರಿಕೋ, ಜಮೈಕ, ಕ್ಯೂಬಾ, ಹೈಕಿ, ಬಾರ್ಬಡಾಸ್; ಮೆಕ್ಸಿಕೊ ಮತ್ತು ಪೆರುಗಳಿಗೆ ಹಬ್ಬಿತಲ್ಲದೆ, ಕ್ರಮೇಣ ಹೊಸ ಪ್ರಪಂಚ (New World) ವನ್ನೇ ಆವರಿಸಿತು. ಒಟ್ಟಿನಲ್ಲಿ ಅಮೆರಿಕ ಕಂಡುಹಿಡಿದ ಸುಮಾರು ಒಂದು ನೂರ ವರ್ಷಗಳಲ್ಲಿ ಸಕ್ಕರೆಯು ಬ್ರೆಜಿಲ್, ಕ್ಯೂಬಾ, ಮೆಕ್ಸಿಕೊ ಇತ್ಯಾದಿ ದೇಶಗಳ ಮುಖ್ಯ ವ್ಯಾಪಾರವಾಗಿದ್ದಿತು.

ಸಕ್ಕರೆ ಶುದ್ಧಿ ಮಾಡುವ ಕಾರ್ಖಾನೆ ರಷ್ಯಾದಲ್ಲಿ ಆರಂಭವಾದದ್ದು ೧೭೦೨ರಲ್ಲಿ. ಡೆನ್‌ಮಾರ್ಕಿನಲ್ಲಿ ೧೬೨೦ರಿಂದ ಆರಂಭವಾಯಿತು. ನಾರ್ವೆ ೧೭೪೦ರಿಂದ ಪ್ರಾರಂಭಿಸಿತು. ಅಂತು ಪ್ರಪಂಚದಲ್ಲಿ ಈಗ ಯಾವ ಯಾವ ದೇಶಗಳು ಸಕ್ಕರೆ ತಯಾರಿಕೆಗೆ ಕೇಂದ್ರಸ್ಥಳಗಳಾಗಿವೆಯೋ, ಆ ದೇಶಗಳಿಗೆಲ್ಲ ಕಬ್ಬು ೧೬೫೦ರ ಹೊತ್ತಿಗೆ ಪ್ರವೇಶಿಸಿ ಭದ್ರವಾಗಿ ತಳ ಊರಿದ್ದಿತು.

ಬೀಟ್ ಸಕ್ಕರೆ

ಪ್ರಪಂಚದ ವಿಶಿಷ್ಟ ಸಕ್ಕರೆ ಉತ್ಪತ್ತಿಗೆ ಕಬ್ಬು ಮತ್ತು ಬೀಟ್‌ಗೆಡ್ಡೆಗಳೇ ಮೂಲಾಧಾರವಾಗಿದ್ದರೂ, ಬೀಟ್‌ಗೆಡ್ಡೆಯಿಂದ ಸಕ್ಕರೆ ಉತ್ಪತ್ತಿ ಮಾಡಬಹುದೆಂಬ ವಿಷಯ ಜನಗಳಿಗೆ ತಿಳಿದಿದ್ದು ತೀರ ಇತ್ತೀಚೆಗೆ. ಆಲಿವರ್ ಡಿಸಿರೆಸ್ ಎಂಬ ಓರ್ವ ಫ್ರೆಂಚ್ ವಿಜ್ಞಾನಿಯು ೧೬೦೫ರಲ್ಲಿ ಕಬ್ಬಿನಂತೆ ಬೀಟ್‌ಗೆಡ್ಡೆಯಲ್ಲಿಯೂ ಸಕ್ಕರೆ ಅಂಶವಿದೆಯೆಂಬುದನ್ನು ತೋರಿಸಿಕೊಟ್ಟನು. ಇದಾದ ೧೪೨ ವರ್ಷಗಳನಂತರ, ಮಾರ್‌ಗ್ರಾಫ್ ಎಂಬುವನು ಸಕ್ಕರೆ ಅಂಶವಿರುವ ಸಸ್ಯಗಳನ್ನು ಪರಿಶೋಧಿಸುತ್ತಿದ್ದಾಗ, ಬೀಟ್‌ಗೆಡ್ಡೆಯಲ್ಲಿ ಶೇಕಡ ೬ರಿಂದ ೭ ಭಾಗ ಸಕ್ಕರೆ ಅಂಶವಿದೆಯೆಂಬುದನ್ನು ಪುನಃ ಪತ್ತೆ ಹಚ್ಚಿದನು. ಇವನ ವಿದ್ಯಾರ್ಥಿ ಅಜಾರ್ಡ್ ೧೮೦೨ರಲ್ಲಿ ಬೀಟ್‌ನಿಂದ ಸಕ್ಕರೆ ಮಾಡುವ ವಿಧಾನ ಕಂಡುಹಿಡಿದನು. ಇದರಿಂದ ಸಕ್ಕರೆ ಕೈಗಾರಿಕೆ ಇತಿಹಾಸದಲ್ಲಿಯೇ ಒಂದು ಹೊಸ ಪರಿಸ್ಥಿತಿ ತಲೆದೋರಿತು. ಇದೇ ಸಂದರ್ಭದಲ್ಲಿ ಯೂರೋಪಿನಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರಿ ಇಂಗ್ಲೆಂಡಿಗೂ ಪಶ್ಚಿಮ ಯೂರೋಪಿಗೂ ವ್ಯಾಪಾರ ಸಂಪರ್ಕವೇ ನಿಂತುಹೋದುದರ ಪರಿಣಾಮವಾಗಿ, ಆಗ ರಾಜಕೀಯ ಪ್ರಮುಖನಾಗಿದ್ದ ನೆಪೋಲಿಯನ್ನನು ಈ ಬೀಟ್ ಸಕ್ಕರೆ ತಯಾರಿಕೆಗೆ ಪ್ರೋತ್ಸಾಹ ಕೊಡುವುದು ಅನಿವಾರ್ಯವಾಯಿತು. ಈಗ ಬೀಟ್ ಸಕ್ಕರೆ ಕೈಗಾರಿಕೆಯು ಯೂರೋಪಿನಲ್ಲಿ ಒಂದು ಪ್ರಾಮುಖ್ಯ ಉದ್ಯಮವಾಗಿ ನಿಂತಿರುವುದಲ್ಲದೆ, ಅಮೆರಿಕ ಸಂಯುಕ್ತ ಸಂಸ್ಥಾನದ ಸುಮಾರು ಹದಿನೈದು ಪ್ರಾಂತಗಳಲ್ಲಿ ಬಹಳ ಉಚ್ಛ್ರಾಯಸ್ಥಿತಿಯಲ್ಲಿದೆ. ಕ್ಯಾಲಿಫೋರ್ನಿಯ ಮತ್ತು ಕೊಲೊರೇಡೊ ಪ್ರಾಂತ್ಯಗಳಂತೂ ಇದಕ್ಕೆ ಭಾರೀ ಕೇಂದ್ರಗಳಾಗಿವೆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ವರ್ಷಂಪ್ರತಿ ಬೇಕಾಗುವ ಒಟ್ಟು ಸಕ್ಕರೆ ಉತ್ಪತ್ತಿಯಲ್ಲಿ ಈಗ ಬೀಟ್ ಸಕ್ಕರೆಯು ೧/೩ ಭಾಗವಾಗಿದೆ.

ಪ್ರಪಂಚದಲ್ಲಿ ದಿನದಿನಕ್ಕೆ ನಾಗರೀಕತೆ ಹೆಚ್ಚುತ್ತ ಬಂದಂತೆಲ್ಲಾ ಸಕ್ಕರೆ ಸೇವನೆಯ ಪ್ರಮಾಣ ಹೆಚ್ಚಾಯಿತು. ಕಾಫಿ, ಟೀ, ಕೋಕೊ ಇತ್ಯಾದಿ ಪಾನೀಯಗಳಿಗಲ್ಲದೆ, ಪೆಪ್ಪರ್‌ಮೆಂಟ್, ಬಿಸ್ಕಟ್, ಚಾಕುಲೆಟ್, ಇತ್ಯಾದಿ ಮಿಠಾಯಿಗಳಿಗೂ ಇಂದು ಸಕ್ಕರೆ ಬಳಸುವುದು ವಾಡಿಕೆಯಾಗಿದೆ. ಆದ್ದರಿಂದ ಇಂದು ಜನತೆಗೆ ಸಕ್ಕರೆಯ ಆವಶ್ಯಕತೆಯು ಹೆಚ್ಚಾಗಿ ತನ್ಮೂಲಕ ಸಕ್ಕರೆಯ ಖರ್ಚು ವಿಪರೀತವಾಗಿದೆ. ಇದರಿಂದ ಸಕ್ಕರೆ ಕೈಗಾರಿಕೆ ಬೆಳೆಯಲು ತುಂಬ ಅವಕಾಶವಾಗಿದೆ.

ಭಾರತದಲ್ಲಿ ಸಕ್ಕರೆ ಕೈಗಾರಿಕೆಯ ಬೆಳವಣಿಗೆ

ಕಬ್ಬು ಮತ್ತು ಸಕ್ಕರೆ ತಯಾರಿಕೆಗೆ ಭಾರತವೇ ತೌರೆಂದು ನಾವು ಈ ಹಿಂದೆಯೇ ತಿಳಿಸಿದ್ದೇವೆ. ಈಗ ಈ ಕಬ್ಬಿನ ಸಕ್ಕರೆ ಕೈಗಾರಿಕೆ ಭಾರತದಲ್ಲಿ ಯಾವರೀತಿ ಬೆಳೆಯಿತೆಂಬುದನ್ನು ನೋಡೋಣ. ಭಾರತದಲ್ಲಿ ಸಕ್ಕರೆ ಕೈಗಾರಿಕೆಯು ವಿದೇಶಿಯರು ಕಾಲಿಡುವವರೆಗೂ, ನವೀನರೀತಿಯಲ್ಲಿ ಅಭಿವೃದ್ಧಿಗೊಳ್ಳಲಿಲ್ಲವೆಂದು ಹೇಳಬಹುದು. ವಿದೇಶೀಯರಾದರೋ, ಎಂದೂ ಕಬ್ಬನ್ನೇ ಅರಿಯದಿದ್ದವರು ನಮ್ಮಿಂದ ಕಬ್ಬನ್ನು ಕೊಂಡೊಯ್ದು,

ತಮ್ಮ ದೇಶದಲ್ಲಿ ಬೆಳೆಸಿ ಅಭಿವೃದ್ಧಿ ಪಡೆಸಿದರಲ್ಲದೆ, ಅದರಿಂದ ತಯಾರಿಸಬಹುದಾದ ಪದಾರ್ಥಗಳ ಬಗ್ಗೆ ಸಂಶೋಧನೆ ನಡೆಸಿ, ಈ ಕೈಗಾರಿಕೆಯ ಇಂದಿನ ಅಗಾಧ ಪ್ರಗತಿಗೆ ಕಾರಣರಾಗಿರುವರು. ಇದು ನಿಜಕ್ಕೂ ಒಂದು ಗಮನಾರ್ಹವಾದ ವಿಷಯವಾಗಿದೆ.

ಭಾರತದಲ್ಲಿ ಹಿಂದೆ ಎಂದೂ ಇಂದಿನಂತೆ ಶುದ್ಧ ಬಿಳಿಯ ಹರಳು ಸಕ್ಕರೆ ತಯಾರಿಸುತ್ತಿರಲಿಲ್ಲ. ೧೪೯೭ರಲ್ಲಿ ಬೆಲ್ಲ ಮತ್ತು ಸಕ್ಕರೆ ವ್ಯಾಪಾರದಲ್ಲಿ ದಕ್ಷಿಣ ಭಾರತದಲ್ಲಿರುವ ಕಲ್ಲೀಕೋಟೆಯು ಬಹಳ ಪ್ರಸಿದ್ಧಿಪಡೆದಿದ್ದಿತೆಂದು ವಾಸ್ಕೋಡಿಗಾಮ ತಿಳಿಸುತ್ತಾನೆ. ಈ ಬಂದರಿನಿಂದ ಆಗ ವಿದೇಶಗಳಿಗೆ ಸಕ್ಕರೆ ವ್ಯಾಪಾರ ಬಹಳವಾಗಿ ನಡೆಯುತ್ತಿತ್ತು. ಅದರಲ್ಲೂ ಯೂರೋಪಿನಲ್ಲಿ ಭಾರತದ ಸಕ್ಕರೆಗೆ ತುಂಬ ಗಿರಾಕಿ ಇತ್ತು. ೧೬೦೦ರಲ್ಲಿ ಭಾರತದಲ್ಲಿ ತುಂಬ ಗಿರಾಕಿ ಇತ್ತು. ೧೬೦೦ರಲ್ಲಿ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪಿತವಾದ ಮೇಲೆ ನಮ್ಮ ಸಕ್ಕರೆ ಕೈಗಾರಿಕೆ ಬೆಳೆಯಲು ತುಂಬ ಪ್ರೋತ್ಸಾಹ ದೊರೆಯಿತು. ೧೬೧೦ರಲ್ಲಿ ಕ್ಯಾಪ್ಟನ್ ಹಿಪ್ಪನ್ ಎಂಬುವನು ಮಚಲೀಪಟ್ಟಣದಲ್ಲಿ ಮೊಟ್ಟಮೊದಲು ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಿದನು. ಅನಂತರ ಕ್ಯಾಪ್ಟನ್ ಬೆಸ್ಟ್ ಮತ್ತು ಡಾಟನ್ ಎಂಬುವರು ೧೬೧೩ರಲ್ಲಿ ಸೂರತ್ತಿನಲ್ಲಿ ಒಂದು ಕಾರ್ಖಾನೆ ತೆರೆದರು. ೧೬೩೬ರ ಹೊತ್ತಿಗೆ ಡಚ್ ವ್ಯಾಪಾರಿಗಳು ಮಚ್ಚಲಿ ಪಟ್ಟಣದಿಂದ ಬಂಗಾಳಾ ಸಕ್ಕರೆಯನ್ನು ಹೊರದೇಶಗಳಿಗೆ ಕಳುಹಿಸುತ್ತಿದ್ದರು. ೧೭ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಬಿಳೀ ಬೂರ ಮತ್ತು ಕಲ್ಲುಸಕ್ಕರೆಯನ್ನು ವಿಶೇಷವಾಗಿ ತಯಾರಿಸುತ್ತಿದ್ದರೆಂದು ಗೊತ್ತಾಗಿದೆ. ಅಲ್ಲದೆ ಸೂರತ್ತಿನಿಂದ ಹೊರದೇಶಗಳಿಗೆ ರಪ್ತು ಮಾಡುತ್ತಿದ್ದನು. ೧೬೫೯ ರಿಂದ ಕಲ್ಕತ್ತದಿಂದಲೂ ಹೊರದೇಶಗಳಿಗೆ ಸಕ್ಕರೆ ರಫ್ತಾಗಲು ಪ್ರಾರಂಭಿಸಿತು. ೧೭೮೪ರಲ್ಲಿ ಕ್ರಾಪ್ಟಸ್ ಎಂಬುವನು ಹೂಗ್ಲೀ ನದಿಯ ದಡದಮೇಲಿದ್ದ ಸೂಕ್‌ಸಾಗರ್ ಪ್ರದೇಶದಲ್ಲಿ ಖಾಸಗಿಯಾಗಿ ಒಂದು ಕಂಪೆನಿ ತೆರೆದನು. ೧೭೯೧ ರಲ್ಲಿ ಲಿಯಟನೆಂಟ್ ಜಾನ್‌ಪೀಟರ್ ಸನ್ ಎಂಬುವನು ಈಸ್ಟ್ ಇಂಡಿಯಾ ಕಂಪೆನಿಯಿಂದ ೨೫ ಸಾವಿರ ರೂಪಾಯಿ ಸಾಲ ಪಡೆದು ಬೀಹಾರಿನಲ್ಲಿ ಒಂದು ಕಬ್ಬಿನ ವ್ಯವಸಾಯ ಕ್ಷೇತ್ರ ಮತ್ತು ಸಕ್ಕರೆ ಕಾರ್ಖಾನೆ ಸ್ಥಾಪಿಸಿದನು. ೧೭೯೯ರಲ್ಲಿ ಎಡ್ವರ್ಡ್ ಕ್ಯಾಂಬಲ್ ಎಂಬುವನು ದಕ್ಷಿಣಭಾರತದ ತಿರುಚನಾಪಳ್ಳಿ ಬಳಿ ಒಂದು ಕಬ್ಬಿನ ವ್ಯವಸಾಯ ಕ್ಷೇತ್ರ ತೆರೆಯಲು ಪ್ರಯತ್ನಿಸಿ ವಿಫಲನಾದನು. ಅನಂತರ ೧೮೧೪ರಲ್ಲಿ ಡಬ್ಲ್ಯು. ಜೆ. ಕೂಲೀ ಎಂಬುವನು ಮಿನ್‌ಸರ್ಕ್ (Mynsurk) ಎಂಬಲ್ಲಿ ೪೪ ಸಾವಿರ ರೂಪಾಯಿ ಬಂಡವಾಳದ ಮೇಲೆ ಒಂದು ಸಕ್ಕರೆ ಕಾರ್ಖಾನೆ ತೆರೆದು ವರ್ಷಂಪ್ರತಿ ೩೦೦ ಟನ್ನು ಸಕ್ಕರೆ ಉತ್ಪತ್ತಿ ಮಾಡಲಾರಂಭಿಸಿದನು.

೧೭೯೩ ರಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿಯೂ ಸಕ್ಕರೆ ತಯಾರಿಸಲು ಹಲವು ಪ್ರಯತ್ನಗಳು ನಡೆದುವು. ೧೮೦೧ ರಲ್ಲಿ ಡಾಕ್ಟರ್ ಸ್ಕಾಟ್, ಪೋವೆ ಎಂಬಲ್ಲಿ ಅಲ್ಪ ಪ್ರಮಾಣದಲ್ಲಿ ಸಕ್ಕರೆ ತಯಾರಿಸುತ್ತಿದ್ದನು. ಅಂತೂ ಒಟ್ಟನಲ್ಲಿ ಆಗ ಇಂದಿನ ಕಾಲದಂತಹ ನವೀನ ಯಂತ್ರೋಪಕರಣಗಳಿಲ್ಲದಿದ್ದರೂ, ಅವರವರ ಸ್ವಂತ ಬುದ್ಧಿಗೆ ತಕ್ಕಂತೆ ಯಂತ್ರ ಸೌಲಭ್ಯಗಳನ್ನು ತಾವೇ ಮಾಡಿಕೊಂಡು ವಿದೇಶಿಯರು ನಮ್ಮ ಜನಗಳೊಡನೆ ಸೇರಿ ಸಕ್ಕರೆ ಉದ್ಯಮದಲ್ಲಿ ಕೈಹಚ್ಚಿದರು. ಇದರಿಂದ ಭಾರತದಲ್ಲಿ ಒಂದು ಕಡೆ ವ್ಯವಸಾಯ ಮತ್ತು ವ್ಯಾಪಾರ ಅಭಿವೃದ್ಧಿಗೊಂಡಿತಲ್ಲದೆ, ಜನತೆಯ ಆರ್ಥಿಕ ಸಂಪತ್ತು ಹೆಚ್ಚಲು ಅನುವಾಯಿತು

(ಮುಂದುವರಿಯುವುದು)

ಕೋ, ಕೋಡು

ಶ್ರೀ ಎಲ್ ಗುಂಡಪ್ಪ

ನಿಡುಗೋಡು, ಬಿಕ್ಕೋಡು, ಕೆಸಗೋಡು, ಕುಪ್ಪಗೋಡು, ಕೋಗೋಡು.

ಊರಿಗೆ ಹೋಗಿ ವರ್ಷದ ಮೇಲಾಗಿತ್ತು. ರಜ ಮುಗಿಯುವುದರಲ್ಲಿ ಮನೆಯವರನ್ನೂ ನಂಟರನ್ನೂ ನೋಡಿಕೊಂಡು ಬರೋಣವೆಂದು ಬೇಲೂರ ಕಡೆ ಹೋಗಿದ್ದೆ. ಆಗ ಈ ಹೆಸರುಗಳು ಕಿವಿಗೆ ಬಿದ್ದವು; ಕಣ್ಣಿಗೆ ಬಿದ್ದವು.

ಈ ಹೆಸರುಗಳನ್ನು ನಾನು ಕೇಳಿದ್ದು ಇದೇ ಮೊದಲಲ್ಲ. ಸುಮಾರು ಮೂವತ್ತು ವರ್ಷಕ್ಕೂ ಮೇಲ್ಪಟ್ಟು ಇವುಗಳ ಪರಿಚಯ ನನಗಿದೆ ನಮ್ಮ ಗದ್ದೆಗಳಿರುವುದು ಬಿಕ್ಕೋಡು ಹೋಬಳಿಯಲ್ಲಿ. ಚಿಕ್ಕಂದಿನಲ್ಲಿ ಬತ್ತ ತರುವುದಕ್ಕಾಗಿ ನಮ್ಮ ದೊಡ್ಡಪ್ಪನವರ ಸಂಗಡ ಎಷ್ಟೋ ಸಲ ಬಿಕ್ಕೋಡು ಊರ ಮುಂದೆ ಸಂತೆಮಾಳದಲ್ಲಿ ಹಾದು ಹೋಗಿದ್ದೇನೆ. ನಿಡುಗೋಡಿನ ಗೌಡನೊಬ್ಬ ನಮ್ಮ ಮನೆಯ ಗೋಡೆ ಹಾಕುವುದಕ್ಕೆ ಗುತ್ತಿಗೆ ಮಾಡಿಕೊಂಡಿದ್ದ. ಕೆಸಗೋಡಿಗೆ ಆಸ್ಪತ್ರೆ ಬರುತ್ತಂತೆ ಎಂದು ಹಳ್ಳಿಯವರು ಯಾರೋ ನಮ್ಮ ದೊಡ್ಡಪ್ಪನವರ ಸಂಗಡ ಹೇಳುತ್ತಿದ್ದದ್ದನ್ನು ಕೇಳಿದ್ದೆ. ಕುಪ್ಪಗೋಡು ತೋಟದ ಯಾರೋ ಒಬ್ಬ ರೈಟರ ಮಗ ನಮ್ಮ ಜೊತೆ ಓದುತ್ತಿದ್ದ. ಕೋಗೋಡಿನ ಕಿತ್ತಲೆ ತೋಟದ ನೋಟ ಕಣ್ಣಿಗೆ ಕಟ್ಟಿದಂತಿದೆ; ಆ ತೋಟದ ಯಜಮಾನರ ಆದರ ಎಂದೂ ನೆನೆಯತಕ್ಕದ್ದು.

ಈ ಸಲ ಬಸ್ಸಿನಲ್ಲಿ ಹೋಗುತ್ತಿರುವಾಗ ರಸ್ತೆಯ ಪಕ್ಕದ ಹೆಸರುಕಲ್ಲುಗಳ ಮೇಲೆ ಕುಪ್ಪಗೋಡು, ಕೋಗೋಡು ಎಂಬ ಬರಹಗಳನ್ನು ಕಂಡಾಗ, 'ಇದರ ಅರ್ಥ ಏನಿರಬಹುದು?' ಎಂದು ಯೋಚನೆ ಹರಿಯಿತು. ಜೊತೆಯಲ್ಲಿದ್ದ ಸ್ಥಳದ ಹಳಬರನ್ನು ಕೇಳಿದೆ. "ಇದು ಊರ ಹೆಸರು. ಇದಕ್ಕೆ ಅರ್ಥಗಿರ್ಥ ಯಾಕೆ ಹುಡುಕಬೇಕು? ಅರ್ಥ ಇರಬೇಕಾದ ಅಗತ್ಯ ತಾನೆ ಏನು? ಇತ್ತೋ ಇಲ್ಲವೋ ನಮಗೊಂದೂ ಗೊತ್ತಿಲ್ಲ" ಎಂದರು. ಈ ವಿವರಣೆಯಿಂದ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ವಿಚಾರಚಕ್ರ ಸುತ್ತುತ್ತಲೇ ಇತ್ತು.

ನಮಗೆ ಸ್ವರಾಜ್ಯ ಬಂದ ಮೇಲೆ ಊರ ಹೆಸರುಗಳನ್ನು ಬದಲಾಯಿಸುವ ಚಟ(ವೆಂದೇ ಹೇಳಬಹುದು) ಬಲವಾಗಿ ಬಿಟ್ಟಿದೆ. ಈ ಊರುಗಳವರಿಗೆ ತಮ್ಮ ಊರಿನ ಹೆಸರು ವಿಕಾರ ಎಂಬ ಭಾವನೆ ಇನ್ನೂ ಬಂದಿಲ್ಲ; ಅಂದವಾದ ಬೇರೆ ಹೆಸರಿಟ್ಟುಕೊಳ್ಳುವ ಆಸೆ ಇನ್ನೂ ಮೂಡಿಲ್ಲ. ಅರ್ಥ ಗೊತ್ತಿಲ್ಲದಿದ್ದರೂ ಹಳೆಯ ಹೆಸರನ್ನೇ ಇನ್ನೂ ಉಳಿಸಿಕೊಂಡಿದ್ದಾರೆ. ಇದಕ್ಕಾಗಿ ಅವರಿಗೆ ಮನಸ್ಸಿನಲ್ಲೇ ಧನ್ಯವಾದಗಳನ್ನರ್ಪಿಸಿದೆ.

ಊರ ಹೆಸರಿನಲ್ಲಿ ಹಳೆಯ ಚರಿತ್ರೆ ಅಡಗಿರಬಹುದು; ಸ್ವಾಭಾವಿಕ ಸೌಂದರ್ಯ ಸೂಚನೆಯೂ ಜೊತೆಗೂಡಿರಬಹುದು. ಗಳಿಗೆಗೊಂದು ಸಲ ಬದಲಾಯಿಸುವುದರಿಂದ ಅವೆಲ್ಲ ಮರೆಯಾಗಿ ಹೋಗುತ್ತವೆ. ಈ ಸಂದರ್ಭದಲ್ಲಿ ಹೆಸರುಬದಲಾವಣೆಯ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ.

ಬೆಂಗಳೂರಿಗೆ ಹಿಂದಿರುಗಿ ಬರುವಾಗ ನನ್ನ ನಾದಿನಿಯ ಊರಿಗೆ ಹೋಗಿದ್ದೆ. ತಿಪಟೂರಿನಲ್ಲಿ ಬಸ್ಸು ಬದಲಾಯಿಸಬೇಕಾಯಿತು. ತುಮಕೂರು ಕಡೆಗೆ ಹೋಗುವ ಬಸ್ಸನ್ನು ಹುಡುಕಿಕೊಂಡು ಹೋಗಿ ಕೂತು, 'ರಜತಾದ್ರಿಪುರ'ಕ್ಕೆ ಟಿಕೇಟು ಕೇಳಿದೆ. ಕಂಡಕ್ಟರು ಕಂಕುಮಂಕಾದ; ಯಾವ ಊರೆಂದು ಅವನಿಗೆ ಅರ್ಥವಾಗಲಿಲ್ಲ. ನನಗೆ ಅದರ ಹಿಂದಿನ ಹೆಸರು ಗೊತ್ತಿರಲಿಲ್ಲ. "ನರಸಿಂಹದೇವರ ಬೆಟ್ಟವಿದೆಯಲ್ಲಾ, ಆ ವೂರು" ಎಂದು ಗುರುತು ಹೇಳಿದೆ. "ಓ, ಹತ್ಯಾಳೀ!' ಎಂದು ಆತ ಮುಖ ಅರಳಿಸಿದ; ಟಿಕೇಟು ಕೊಟ್ಟ. ನಿತ್ಯವೂ ಅಲ್ಲಿ ತಿರುಗುತ್ತಿದ್ದರೂ, ರಸ್ತೆಯ ಪಕ್ಕದಲ್ಲಿ ಹೊಸ ಹೆಸರು ಕೆತ್ತಿದ ಹೆಸರುಕಲ್ಲು ನಿಂತಿದ್ದರೂ ಅವನಿಗೆ ಹಳೆಯ 'ಹತ್ಯಾಳು' ಗೊತ್ತು; ಹೊಸ 'ರಜತಾದ್ರಿಪುರ' ಇನ್ನೂ ಪರಿಚಿತವಾಗಿಲ್ಲ.

'ಹತ್ತಿಹಾಳು' ಎಂಬುದರ ಹ್ರಸ್ವರೂಪ 'ಹತ್ಯಾಳು'. ಇಲ್ಲಿ 'ಹಾಳು' ಎಂಬ ಮಾತು 'ಬಯಲು ನೆಲ' ಎಂಬರ್ಥ ಕೊಡುತ್ತದೆ. ಎಷ್ಟೋ ಊರುಗಳ ಹೆಸರಿನಲ್ಲಿ 'ಹಾಳು' ಎಂಬ ಪದ ಕೊನೆಯಲ್ಲಿದೆ. 'ಕುರುಬರ ಬೂದಿಹಾಳು' ನಮ್ಮೂರ ಹತ್ತಿರವೇ ಇದೆ.

(ಈ ಊರವರೂ ತಮ್ಮೂರಿನ ಹೆಸರು ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇನ್ನೂ ಚಲಾಯಿಸಿಲ್ಲ). ಹತ್ಯಾಳಿನವರು ತಮ್ಮೂರ ಹೆಸರಿನಲ್ಲಿ ಈ 'ಹಾಳು' ಪದ ಏಕಿರಬೇಕೆಂದು ಬೇಸರಪಟ್ಟುಕೊಂಡು ಬದಲಾಯಿಸಿದರೆಂದು ಕಾಣುತ್ತದೆ. ಬದಲಾಯಿಸಿದವರು ಬುದ್ಧಿವಂತರು. ರಜತಾದ್ರಿಪುರವೆಂದು ಹೊಸ ಹೆಸರಿಟ್ಟು ಹಾಳಿನಿಂದ ನೇರವಾಗಿ ಕೈಲಾಸಕ್ಕೇ ಏರಿಬಿಟ್ಟರು. ಆದರೆ ನೆಲದ ಮೇಲೆಯೇ ಓಡಾಡುವ ಬಸ್ ಕಂಡಕ್ಟರಂಥ ಸಾಮಾನ್ಯರಿಗೆ, 'ರಜತಾದ್ರಿಪುರ' (ಬೆಳ್ಳಿಬೆಟ್ಟದ ಕೈಲಾಸಪಟ್ಟಣ) ಇನ್ನೂ ದೂರವಾಗಿಯೇ ಉಳಿದಿದೆ.

ಇಲ್ಲಿನ ಹಿರಿಯರನ್ನ ವಿಚಾರಿಸಿದಾಗ ಅವರು ಬೇರೊಂದು ವಿವರಣೆ ಕೊಟ್ಟರು: "ಇದು 'ಹತ್ತಿಹಾಳು' ಅಲ್ಲ. ಇಲ್ಲಿ ಹತ್ತಿ ಬೆಳೆಯುವುದೂ ಇಲ್ಲ. ಇಲ್ಲಿನ ಬೆಟ್ಟದ ನರಸಿಂಹ ದೇವರಿಗೆ ಹತ್ತು ತೋಳುಗಳಿವೆ. 'ಹತ್ತು ತೋಳು ನರಸಿಂಹ' ಎಂದು ಪ್ರಸಿದ್ಧಿಯಾಗಿ, ಅದರಿಂದ ಈವೂರಿಗೆ 'ಹತ್‌ತೋಳು' ಎಂದು ಹೆಸರು ಬಂತು. ತಿಳಿಯದವರ ಬಾಯಲ್ಲಿ 'ಹತ್ಯಾಳು' ಆಯಿತು. ಈಗ 'ರಜತಾದ್ರಿಪುರ' ಆಗಿದೆ" ಎಂದರು. ಈ ವಿವರಣೆ ಒಪ್ಪುವ ಹಾಗೂ ಇದೆ.

ನನ್ನ ಚಿರಪರಿಚಯದ ಆ ಊರುಗಳ 'ಕೋಡು' ಏನೆಂದು ಯೋಚಿಸ ತೊಡಗಿದೆ. 'ಕೋಡು' ಎತ್ತು ಮುಂತಾದ ಪ್ರಾಣಿಯ ಕೊಂಬು ಎಂಬುದು ಎಲ್ಲರಿಗೂ ಗೊತ್ತು. "ಅವನಿಗೇನು, ತಲೆಯ ಮೇಲೆ ಕೋಡು ಮೂಡಿರುವುದು?" ಎಂದು ನಿಂದಿಸುವ ಮಾತನ್ನು ಯಾರು ಕೇಳಿಲ್ಲ? ಕನ್ನಡ ನುಡಿಯ ಹಿರಿಮೆಯನ್ನು ವರ್ಣಿಸುವಾಗ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, "ನಮ್ಮ ಕವಿಗಳೆಂಬ ಕೋಡು ತಲೆಗದಾವುದು?" ಎಂದು ಕೇಳಿದ್ದಾರೆ. ಎರಡನೆಯದಾಗಿ 'ಕೋಡು' ಎಂದರೆ ಮರದ ಕೊಂಬೆ ಎಂದು ಅರ್ಥವಾಗುತ್ತದೆ. 'ಮಾವಿನ ಬಂದ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ' ಎಂದು ವರ್ಣಿಸುವಲ್ಲಿ ಪಂಪ ಈ ಪದವನ್ನು ಕೊಂಬು, ಕೊಂಬೆ, ಭಯ—ಎಂಬ ಮೂರು ಅರ್ಥಗಳೂ ಏಕಕಾಲದಲ್ಲಿ ತೋರುವಂತೆ ಪ್ರಯೋಗಿಸಿದ್ದಾನೆ. ಮಾವಿನ ಕೊಂಬೆಯೇ ವಸಂತಗಜದ ಕೊಂಬು (ಕೋಡು, ಇಲ್ಲಿ ದಂತ); ಈ ವಸಂತಗಜದ ಕೊಂಬನ್ನು ಕಂಡು ವಿಯೋಗಿ ಹೆದರಿ ತಲ್ಲಣಿಸುವಂತಾಯಿತು—ಎಂದು ಭಾವ. ಬೆಟ್ಟದ ಶಿಖರಕ್ಕೂ 'ಕೋಡು' ಎಂದು ಹೆಸರುಂಟು. ತುದಿಯಲ್ಲಿ ಚಾಚಿರುವ ಕಲ್ಲನ್ನು ಕೋಡುಗಲ್ಲೆನ್ನುತ್ತಾರೆ. 'ಕೊಡು' ಧಾತುವಿನ ಭಾವನಾಮವೂ 'ಕೋಡು' ಎಂದಾಗುತ್ತದೆ; ಬಿಡು 'ಬೀಡು' ಆಗುವಂತೆ, ತೊಡು 'ತೋಡು' ಆಗುವಂತೆ. "ತೋಡುಂ ಬೀಡುಂ ಕಾಣಲಾಗದಂತು........ಸರಲ ಸರಿಯಂ ಸುರಿಯೆ" ಎಂದು ಪಂಪ ಕವಿ ಬಾಣದೆಸುಗೆಯನ್ನು ವರ್ಣಿಸುತ್ತಾನೆ. ಬಾಣವನ್ನು ಬಿಲ್ಲಿಗೆ ತೊಡುವುದಾಗಲಿ ಬಿಲ್ಲಿನಿಂದ ಅದನ್ನು ಬಿಡುವುದಾಗಲಿ ಕಾಣಲಾಗುತ್ತಿರಲಿಲ್ಲ; ಅಷ್ಟು ವೇಗವಾಗಿ ಬಾಣ ಪ್ರಯೋಗ ಮಾಡುತ್ತಿದ್ದರು ಎಂದು ತಾತ್ಪರ್ಯ. ಇದರಂತೆಯೇ ಕೊಡುವಿನ ಭಾವನಾಮ 'ಕೋಡು' ಕೊಡುವುದು, ದಾನ ಎಂಬರ್ಥ ಕೊಡುತ್ತದೆ. ದಾನವಾಗಿ ಕೊಟ್ಟದ್ದಕ್ಕೂ ದಾನವೆಂದೇ ಹೆಸರು. 'ಶ್ರೀ....
...........ಅವರ ದಾನ' ಎಂದು ಬರೆದ ಶಾಸನಗಳು ನಮ್ಮ ಪಟ್ಟಣಗಳ ಸಾರ್ವಜನಿಕ ಸ್ಥಳಗಳಲ್ಲಿ ಅಲ್ಲಲ್ಲೇ ಗೋಚರವಾಗುತ್ತವೆ. ಈ ಅರ್ಥ 'ಕೋಡಿಗೂ' ಉಂಟು. ಪಂಪನ ಈ ಪದ್ಯವನ್ನು ನೋಡಿ:

ಪೊಡೆದುದು ಬಿಲ್ಲ ಜೇವೊಡೆಯೆ ವಿಾಜುವ ವೈರಿ ನರೇಂದ್ರರಂ ಸಿಡಿ
ಲ್ವೊಡೆದ ವೊಲಟ್ಟಿ ಮುಟ್ಟೆ ಕಡಿದಿಕ್ಕಿದುದಾದೆಡರಂ ನಿರಂತರಂ
ಕಡಿಕಡಿದಿತ್ತ ಪೊನ್ನೆ ಬುಧ ಮಾಗಧ ವಂದಿ ಜನಕ್ಕೆ ಕೊಟ್ಟ ಕೋ
ಡೆಡರದೆ ಬೇಡಿ ವೋಡಿಮಿದು ಚಾಗದ ಬೀರದ ಮಾತು ಕರ್ಣನಾ

ಇಲ್ಲಿ 'ಕೋಡು' ಎಂದರೆ ಕೊಟ್ಟದ್ದು, ದಾನ. ಹೀಗೆ ಈ ಮಾತಿಗೆ ಪ್ರಾಣಿಯ ಕೊಂಬು, ಮರದ ಕೊಂಬೆ, ಬೆಟ್ಟದ ಶಿಖರ, ಕೊಡುವುದು, ಕೊಟ್ಟದ್ದು (ದಾನ), ಭಯ, ಶೈತ್ಯ, ಕುಗ್ಗುವುದು—ಎಂದು ನಾನಾ ಅರ್ಥಗಳುಂಟು. ಇವುಗಳಲ್ಲಿ ಯಾವ ಅರ್ಥ ಈ ಊರ ಹೆಸರುಗಳಿಗೆ ಹೊಂದುತ್ತದೆಯೆಂದು ನೋಡೋಣ.

ನಿಡುಗೋಡು: ಇದನ್ನು ಬಿಡಿಸಿದರೆ 'ನಿಡಿದಾದ ಕೋಡು' ಎಂದಾಗುತ್ತದೆ; ಉದ್ದವಾದ ಕೋಡು ಎಂದರ್ಥ. ಉದ್ದವಾದ ಕೋಡಿನ ಯಾವುದಾದರೂ ಪ್ರಾಣಿಯಿಂದಲೋ, ಉದ್ದವಾದ ಕೊಂಬೆಯುಳ್ಳ ಯಾವುದಾದರೂ ಮರದಿಂದಲೋ ಅಥವಾ ಬಹು ದೂರಕ್ಕೆ ಹಬ್ಬಿದ ಯಾವುದಾದರೂ ಬೆಟ್ಟದಿಂದಲೋ ಎತ್ತರವಾದ ಶಿಖರದಿಂದಲೋ ಈ ಹೆಸರು ಬಂದಿರಬಹುದು. ಈ ಹಳ್ಳಿಯಿರುವ ಬಳಿ ಬೆಟ್ಟವೂ ಇಲ್ಲ; ಶಿಖರವೂ ಇಲ್ಲ. ಪ್ರಾಣಿಯ ಕೊಂಬಿನಿಂದ ಹೆಸರು ಬಂತೆಂದು ಊಹಿಸುವುದು ವಿಚಿತ್ರವಾಗಿ ಕಾಣುತ್ತದೆ. ಹಾಗಿರಲಾರದು. ಉದ್ದಗೊಂಬೆಗಳುಳ್ಳ ನೂರಾರು

ವರ್ಷ ಬಾಳುವ ಆಲ ಮೊದಲಾದ ಯಾವುದೋ ಮರದಿಂದ ಹೆಸರು ಬಂದಿದ್ದರೂ ಬಂದಿರಬಹುದು ಆದರೆ ಇಲ್ಲಿ ಕೋಡಿಗೆ ದಾನವೆಂದು ಅರ್ಥ ಮಾಡಿದರೆ ಹೆಚ್ಚು ಸಮಂಜಸವಾಗುತ್ತದೆ. ಯಾರೋ ಒಬ್ಬ ಪುಣ್ಯಾತ್ಮ ಈ ಸ್ಥಳದಲ್ಲಿ ಬಹುಕಾಲದ ವರೆಗೂ ಅಥವಾ ಬಹು ದೊಡ್ಡದಾದ ದಾನ ಮಾಡಿದ್ದರಿಂದ 'ನಿಡು + ಕೋಡು' ಎಂದರೆ, ದೀರ್ಘದಾನ, ಮಹಾದಾನ (ಇವತ್ತಿನ ರೂಢಿಯಂತೆ 'ಮಹಾದಾನಪುರ') ಎಂದು ಹೆಸರು ಬಂದಿರಬೇಕು.

ಸಾಮಾನ್ಯವಾಗಿ ಊರಹೆಸರಿನ ಈ 'ಕೋಡು'ಗಳಿಗೆಲ್ಲ ಈ ಅರ್ಥವೇ ಚೆನ್ನಾಗಿ ಒಪ್ಪುತ್ತದೆ. ಹಿಂದೆ ಈ ಪ್ರಾಂತದಲ್ಲಿ ಜೈನಮತ ಪ್ರಬಲವಾಗಿತ್ತು. ಜೈನ ಗ್ರಂಥಗಳಲ್ಲಿ ದಾನದ ಮಹಿಮೆಯನ್ನು ವಿಶೇಷವಾಗಿ ಹೊಗಳಿದೆ. ಇಲ್ಲಿಗೆ ಹತ್ತಿಪ್ಪತ್ತು ಮೈಲಿ ಸುತ್ತಿನಲ್ಲಿ ಕೋಡುಕೊನೆಯ ಊರುಗಳು ಬಹಳ ಇವೆ; 'ವಸುಧಾರೆ'ಯೆಂದೂ ಒಂದೂರಿದೆ (ಅದು ಈಗ 'ವಸ್ತಾರೆ' ಎಂಬ ರೂಪಕ್ಕಿಳಿದಿದೆ). ಮಹಾತಪಸ್ವಿಗೆ ಯೋಗ್ಯದಾನ ಮಾಡಿದಾಗ ಮಳೆ ಸುರಿದಂತೆ ರತ್ನ ವರ್ಷವಾಗುತ್ತದೆ, 'ವಸುಧಾರೆ' ಸುರಿಯುತ್ತದೆ— ಎಂದು ಪುರಾಣವಚನ. ಅಂಥ ಮಹಾದಾನದಲ್ಲಿ ವಸುಧಾರೆ ಸುರಿದ ಒಂದು ಸ್ಥಳವನ್ನು ಈ 'ವಸ್ತಾರೆ' ಸೂಚಿಸುತ್ತದೆಯೆಂದು ಕಾಣುತ್ತದೆ

ಬಿಕ್ಕೋಡು: ಇದಕ್ಕೆ 'ಬಿಕ್ಕೆಗೋಡು' ಎಂದು ಶಾಸನದಲ್ಲಿ ಪ್ರಯೋಗವಿದೆ. 'ಬಿಕ್ಕೆಗೋಡು' ಎಂಬ ಮೊದಲಿನ ಹೆಸರು ಕಾಲಕ್ರಮದಲ್ಲಿ ಜನರ ಬಾಯಲ್ಲಿ ಸವೆದು ಸವೆದು ಕುಗ್ಗಿ ಈಗ 'ಬಿಕ್ಕೋಡು'ಆಗಿದೆ. ಇಲ್ಲಿಯೂ ಬೆಟ್ಟ ಎಂದು ಹೇಳಿಸಿಕೊಳ್ಳುವಂಥದೇನೂ ಇಲ್ಲ. ಸಣ್ಣ ಗುಡ್ಡ ಒಂದೆರಡು ಸಮೀಪದಲ್ಲಿವೆ. (ಮಲೆನಾಡಿನಲ್ಲಿ ಎಲ್ಲಿ ತಾನೆ ಸಣ್ಣ ಗುಡ್ಡವಿರುವುದಿಲ್ಲ?) ಅಲ್ಲಿ 'ಬಿಕ್ಕೆ' ಗಿಡಗಳು ಸಮೃದ್ಧಿಯಾಗಿ ಇವೆಯೋ ಇಲ್ಲವೋ ಕಾಣೆ. ಹಿಂದೆ ಇದ್ದಿರಬಹುದು. ಆದರಿಂದ 'ಬಿಕ್ಕೆಗಿಡಗಳ ಬೆಟ್ಟ' ಎಂಬರ್ಥ ಕೊಡುವ 'ಬಿಕ್ಕೆಗೋಡು' ಎಂಬ ಹೆಸರು ಊರಿಗೆ ಬಂದಿರಬಹುದು.

ಸಂಸ್ಕೃತದ 'ಭಿಕ್ಷೆ' ಕನ್ನಡದಲ್ಲಿ 'ಬಿಕ್ಕೆ' ಆಗುತ್ತದೆ. ಯಾರೋ ಯಾರಿಗೋ 'ಭಿಕ್ಷೆಯಾಗಿ ಕೊಟ್ಟದ್ದು' ಎಂಬ ಕಾರಣದಿಂದ 'ಬಿಕ್ಕೆಗೋಡು' (ಭಿಕ್ಷಾದಾನಪುರ) ಎಂದು ಹೆಸರಾಗಿದ್ದರೂ ಇರಬಹುದು.

ಕೆಸಗೋಡು, ಕುಪ್ಪಗೋಡುಗಳಿಗೆ ನಾನು ಹೋಗಿಲ್ಲ. ಇದ್ದರೆ ಸಣ್ಣ ಗುಡ್ಡಗಳೇ ಹೊರತು ಅಲ್ಲಿಯೂ ಬೆಟ್ಟಗಳಿಲ್ಲವೆಂದು ಮಾತ್ರ ಚೆನ್ನಾಗಿ ಗೊತ್ತು. ಕೆಸವಿನ ದಂಟನ್ನು 'ಕೆಸ' ಎಂದೂ ಕರೆಯುತ್ತಾರೆ. 'ಕೆಸವು ಬೆಳೆಯುವ ಗುಡ್ಡ' (ಕೆಸ + ಕೋಡು) 'ಕೆಸಗೋಡು' ಆಗಿರಬಹುದು. 'ಕಿಸುಗೋಡು' ಎಂದು ಮೊದಲು ಹೆಸರಿದ್ದು ಕಾಲಕ್ರಮದಲ್ಲಿ ಅದು ಕೆಸಗೋಡಾಗಿದ್ದರೂ ಇರಬಹುದು. ಹಾಗಿದ್ದರೆ ಈ ಮಾತಿಗೆ 'ಕೆಂಪು ಬೆಟ್ಟ' ಎಂದು ಅರ್ಥಮಾಡಬೇಕಾಗುತ್ತದೆ. ಅಲ್ಲಿನ ಮಣ್ಣು ಕೆಂಪಾಗಿದ್ದರೆ ಇದು ಸಮಂಜಸವೂ ಆಗುತ್ತದೆ.

'ಕೆಸ' ಎಂಬುದು ಹೆಸರಾಗಿದ್ದರೆ (ಕೆಸವಯ್ಯ, ಕೆಸವಣ್ಣ ಮುಂತಾಗಿ ಹೆಸರಿಟ್ಟುಕೊಳ್ಳುವುದು ಆಗ ರೂಢಿಯಿತ್ತೆಂದು ಭಾವಿಸಿದರೆ) ಆ ಹೆಸರಿನ ಯಾರೋ ಒಬ್ಬಾತನಿಗೆ ಕೊಟ್ಟ ಊರು ಎಂದೂ ಭಾವಿಸಬಹುದು. ಕೇಶವನಿಗೆ ಕೊಟ್ಟದ್ದು ಎಂಬರ್ಥದಲ್ಲಿ 'ಕೇಶವಗೋಡು' ಎಂದು ಮೊದಲು ಹೆಸರಿದ್ದು ಈಗ 'ಕೆಸಗೋಡು' ಆಗಿದೆಯೆಂದೂ ಊಹಿಸಬಹುದು. ಕೆಸಗೋಡು ಬೇಲೂರಿಗೆ ಬಹು ದೂರವೇನಲ್ಲ. ಆದರೆ, ಹೀಗೆ ಊಹೆಕಟ್ಟುವುದು ಭಾಷೆಯ ವಿಷಯದಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸಿದಂತಾದೀತು.

'ಕುಪ್ಪನಿಗೆ ಕೊಟ್ಟದ್ದು' ಅಥವಾ 'ಕುಪ್ಪನು ಕೊಟ್ಟದ್ದು' **ಕುಪ್ಪಗೋಡು. 'ಕುಪ್ಪೆಗೋಡು'** (ಕುಪ್ಪೆ + ಕೋಡು) ಕುಪ್ಪಗೋಡು ಆಯಿತೆಂದು ಇಟ್ಟುಕೊಂಡರೆ, 'ಕುಪ್ಪೆ ಹಾಕಿದ ಹಾಗೆ ಇರುವ ಗುಡ್ಡ' ಎಂದು ಅರ್ಥ ಮಾಡಬೇಕಾಗುತ್ತದೆ. ಹಾಗಲ್ಲದೆ, 'ಕುಪ್ಪೆಗಳನ್ನು ದಾನ ಕೊಟ್ಟ ಸ್ಥಳ' ಎಂದೂ ಆಗಬಹುದು. ಮಹಾದಾನಿಯೊಬ್ಬನು ಬಣಬೆಗಟ್ಟಳೆ ನೆಲ್ಲನ್ನು ದಾನ ಮಾಡಿದ್ದರ ನೆನಪು ಇಲ್ಲಿ ಉಳಿದಿರಬಹುದು.

ಕೋಗೋಡಿನಲ್ಲಿ ಕೋಡಿಗಿಂತ 'ಕೋ'ವೇ ಮುಖ್ಯವಾಗಿರುವ ಭಾಗ. 'ಕೋ'ನ ಕೋಡು (ಕೋ + ಕೋಡು) ಕೋಗೋಡು. ಕೋಡು ಬೆಟ್ಟವಾದರೂ ಆಗಲಿ ದಾನವಾದರೂ ಆಗಲಿ ಈ 'ಕೋ'ಗೆ ಅರ್ಥ ಗೊತ್ತಾದಲ್ಲದೆ ಒಟ್ಟು ಮಾತಿನ ಅಭಿಪ್ರಾಯ ಸ್ಪಷ್ಟವಾಗುವುದಿಲ್ಲ. 'ಕೋ' ಎಂಬುದಕ್ಕೆ ಕನ್ನಡ

ಸಾಹಿತ್ಯದಲ್ಲಿ ಬಳಕೆಯಿರುವ ಅರ್ಥ 'ಪೋಣಿಸು' ಎಂದು. ದಾನಕ್ಕಾಗಲಿ ಬಿಟ್ಟಿಕ್ಕಾಗಲಿ ಈ 'ಪೋಣಿಸು' ಎಂಬರ್ಥವನ್ನು ಹೊಂದಿಸಲಾಗುವುದಿಲ್ಲ, 'ಕೋ'ಗೆ ಬೇರೆ ಅರ್ಥ ಕನ್ನಡದಲ್ಲಿ ರೂಢಿಯಿಲ್ಲ. ನಾಮವಾಚಕ ಪ್ರಯೋಗವೂ ಕಾಣುವುದಿಲ್ಲ. ಕನ್ನಡದ ಸೋದರ ಭಾಷೆ ತಮಿಳಿನಿಂದ ಇಲ್ಲಿ ಸಹಾಯ ಸಿಕ್ಕುತ್ತದೆ. ತಮಿಳಿನಲ್ಲಿ 'ಕೋ' ಎಂದರೆ 'ದೊರೆ, ದೇವರು' ಎಂದರ್ಥ. ಆ ಅರ್ಥ ಕನ್ನಡದಲ್ಲಿಯೂ ಒಂದಾನೊಂದು ಕಾಲದಲ್ಲಿ ಬಳಕೆಯಿತ್ತೆಂದು ಭಾವಿಸುವುದಾದರೆ, ಇಲ್ಲಿನ ತೊಡಕು ಸುಲಭವಾಗಿ ಪರಿಹಾರವಾಗುತ್ತದೆ. ಇದೇ ಸಾಲಿಗೆ ಸೇರಬಹುದಾದ 'ಪೆರ್ಮಾಡಿ = ಪೆರುಮಾನಡಿ' ಮೊದಲಾದ ತಮಿಳುಗಂಧದ ಕೆಲವು ಪದಗಳು ಹಳೆಯ ಶಾಸನಗಳಲ್ಲಿ ದೊರೆಯುತ್ತವೆ. ಕೋಗೋಡಿನ ಸುತ್ತಮುತ್ತಿನಲ್ಲೇ 'ಕೋನೇರ್ಲು' ಎಂಬ ಮತ್ತೊಂದು ಊರಿದೆ. 'ಕೋ + ನೇರಿಲು' ಎಂದು ಇದನ್ನು ಬಿಡಿಸಬಹುದು. 'ದೊರೆ ನೇರಿಲು' ಎಂದರೆ 'ಶ್ರೇಷ್ಠವಾದ ನೇರಿಲೆ ಹಣ್ಣು' ಎಂದು ಇದಕ್ಕೆ ಅರ್ಥಮಾಡಬಹುದು. ಆ ಸ್ಥಳ ಅತ್ಯುತ್ತಮವಾದ ನೇರಿಳೆ ಹಣ್ಣಿಗೆ ಪ್ರಸಿದ್ಧವಾಗಿತ್ತೆಂದು ಕಾಣುತ್ತದೆ. 'ಕೋನಯ್ಯ' ಎಂಬ ಒಬ್ಬ ಕವಿಯ ಹೆಸರು ಕನ್ನಡ ಕವಿಚರಿತ್ರೆಯಲ್ಲಿ ಸಿಕ್ಕುತ್ತದೆ. ಈಗಲೂ ಆ ಹೆಸರಿನವರು ಇದ್ದರೂ ಇರಬಹುದು. 'ದೇವರಯ್ಯ, ರಾಜಯ್ಯ, ದೊರೆಯಪ್ಪ' ಎಂಬವಕ್ಕೆ ಸಮವಾಗುತ್ತದೆ ಈ ಹೆಸರು. 'ಕೋ + ಅಯ್ಯ'ಗಳು ಕೂಡುವಾಗ ಉಚ್ಚಾರಕ್ಕೆ ಸಹಾಯವಾಗಿ 'ನ'ಕಾರ ಬಂದಿರಬಹುದು. ಅಂತೂ 'ಕೋ' ನಾಮವಾಚಕವಾಗಿ ಕನ್ನಡದಲ್ಲಿ ಬಳಕೆಯಿದ್ದಿರಬಹುದು ಎಂದು ಊಹಿಸಲು ಅವಕಾಶ ದೊರೆತಂತಾಯಿತು.

'ಕೋಗೋಡು' ಎಂದರೆ ದೊರೆ ಕೊಟ್ಟದ್ದು, ದೊರೆಯ ಕೊಡಗೆ, 'ರಾಜದಾನಪುರ'—ಎಂದು ಅರ್ಥವಾಗುತ್ತದೆ. ಅಥವಾ 'ಕೋ'ಗೆ ಎಂದರೆ ದೇವರಿಗೆ ಕೊಟ್ಟದ್ದು, 'ದೇವದಾನಪುರ' ಎಂದು ಬೇಕಾದರೂ ಅರ್ಥಮಾಡಬಹುದು.

ಈ ಹೆಸರುಗಳ ಚಾರಿತ್ರಿಕ ಮೂಲ ಗತಕಾಲದ ಮುಸುಕಿನಲ್ಲಿ ಮರೆಯಾಗಿ ಹೋಗಿದೆ. ಭಾಷಾ ಶಾಸ್ತ್ರದ ಹಣತೆಯನ್ನು ಹಚ್ಚಿಕೊಂಡು ಆ ಮುಸುಕಿನಲ್ಲಿ ಇಣಿಕಿ ನೋಡುತ್ತಾ ಸ್ವಲ್ಪಮಟ್ಟಿಗೆ ಅದರ ಅಸ್ಪಷ್ಟ ರೂಪವನ್ನು ನಾವು ಕಾಣಬಹುದು. ಆಗೊಮ್ಮೆ ಈಗೊಮ್ಮೆ ಈ ಬೆಳಕು ದೊಡ್ಡ ಪಂಜಾಗಿ ಬೆಳಗಿ ಅಮೂಲ್ಯ ನಿಧಿಯನ್ನೇ ತೋರಿಸಿಬಿಡುತ್ತದೆ. ಆ ಬೆಳಕನ್ನು ಬಳಸುವ ಕೌಶಲ್ಯ ಮಾತ್ರ ಸುಲಭವಲ್ಲ; ಸಂತತ ಪ್ರಯತ್ನದಿಂದ ಸಾಧಿಸಬೇಕಾಗಿದೆ.

ಹೈದರಾಬಾದಿನಲ್ಲಿ ನಡೆದ ಹೊರನಾಡ ಕನ್ನಡಿಗರ ಸ್ನೇಹ ಸಮ್ಮೇಲನ

ಶ್ರೀ ತವಗ ಭೀಮಸೇನರಾವ್, ಕಲಬುರ್ಗಿ

ಪರಿಷತ್ತಿನ ಆದೇಶದಮೇರೆಗೆ ಹೈದರಾಬಾದಿನಲ್ಲಿ ನಡೆದ ಹೊರನಾಡು ಕನ್ನಡಿಗರ ಸಮ್ಮೇಳನದಲ್ಲಿ ಪರಿಷತ್ತಿನ ಪ್ರತಿನಿಧಿಯಾಗಿ ಭಾಗವಹಿಸಿ ತಿರುಗಿಬಂದೆನು. ಸಮ್ಮೇಳನದ ನಡೆವಳಿಕೆಯ ವಿವರವು ಸಂಗ್ರಹವಾಗಿ ಇಂತಿವೆ.

ಸಮ್ಮೇಳನ ಜುಲೈ ೫, ೬ ತಾ|| ಗಳಲ್ಲಿ ನೃಪತುಂಗ ವಿದ್ಯಾಲಯ ಕಟ್ಟಡದಲ್ಲಿ ನಡೆಯಿತು. ಸಮ್ಮೇಳನಕ್ಕಾಗಿಯೇ ಸುಂದರವಾದ ಮಂಟಪಃ ಒಂದು ರಚಿಸಲಾಗಿತ್ತು. ಎರಡೂ ದಿನಗಳಲ್ಲಿ ಮಂಟಪವು ಜನಸಂದಣಿಯಿಂದ ಕಿಕ್ಕಿರಿದಿರುತ್ತಿತ್ತು. ಸ್ತ್ರೀಯರೂ ತಂಡೋಪತಂಡವಾಗಿ ಬರುತ್ತಿದ್ದುದು ಒಂದು ವೈಶಿಷ್ಟ್ಯ. ೫ನೆಯ ತಾರೀಕು ಪ್ರಾತಃಕಾಲ ೮|| ಗಂಟೆಗೆ ಅರ್ಥ ಸಚಿವರಾದ ಮಾನ್ಯ ಡಾ. ಮೇಲ್‌ಕೋಟೆಯವರ ಶುಭ ಹಸ್ತದಿಂದ ಧ್ವಜಾರೋಹಣವಾಯಿತು.

ಸಂಜೆ ಆರು ಗಂಟೆಯಿಂದ ಸಮ್ಮೇಳನ ಪ್ರಾರಂಭವಾಯಿತು. ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬುರಗಲ ರಾಮಕೃಷ್ಣರಾಯರು, ಕಾಯದೆ ಮಂತ್ರಿ ಶ್ರೀ ಚಂಡರಕಿ ಜಗನ್ನಾಥರಾಯರು, ಕೇಂದ್ರ ಸರಕಾರದ ವಾಣಿಜ್ಯ ಶಾಖೆಯ ಉಪಮಂತ್ರಿ ಮಾನ್ಯ ದ. ಪ. ಕರಮರಕರರು, ಕ. ಪ್ರ. ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು, ಹೈ. ಪ್ರ. ಸಮಿತಿಯ ಅಧ್ಯಕ್ಷ ಸ್ವಾಮಿ ರಮಾನಂದತೀರ್ಥರು, ಮಾನ್ಯ ಮಂತ್ರಿ ಶ್ರೀ ಶಂಕರದೇವರು, ಮಾನ್ಯ ಮಂತ್ರಿ ಶ್ರೀ ಅಣ್ಣಾರಾಯರು, ಶಾಸನ ಸಭೆಯ ಅಧ್ಯಕ್ಷ ಕಾಶೀನಾಥರಾಯರು ಮುಂತಾದ ಮಹನೀಯರಿಂದ ಸಭೆಗೆ ದ್ವಿಗುಣಿತ ಶೋಭೆ ಉಂಟಾಗಿತ್ತು. ನಿಯೋಜಿತ ಅಧ್ಯಕ್ಷರಾದ ಕವಿವರ್ಯ ಬೇಂದ್ರೆಯವರಿಗೆ ಬರಲು ಸಾಧ್ಯವಾಗದಿದ್ದುದರಿಂದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಅಧ್ಯಕ್ಷಸ್ಥಾನಕ್ಕೆ ಸೂಚಿಸಲ್ಪಟ್ಟು ಕನ್ನಡ ಸಾಹಿತ್ಯ ಪರಿಷತ್ತು ಮೊದಲುಗೊಂಡು ಇತರ ಸಂಸ್ಥೆಗಳ ಅನುಮೋದನೆಯ ಮೇರೆಗೆ ಶ್ರೀ ಮಾಸ್ತಿಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಇದಕ್ಕೆ ಮುಂಚೆ ಮುಖ್ಯ ಮಂತ್ರಿಗಳು ಅಸ್ಖಲಿತವಾದ ಕನ್ನಡದಲ್ಲಿ ಭಾಷಣಮಾಡಿ ಸಮ್ಮೇಳನವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಸಂಘಸಂಸ್ಥೆಗಳು ಮಾಡಬೇಕಾದ ಕಾರ್ಯವನ್ನು ಒತ್ತಿ ಹೇಳಿ ಸಾಂಸ್ಕೃತಿಕ ಐಕ್ಯದ ಆವಶ್ಯಕತೆಯನ್ನೂ ದೇಶಪ್ರೇಮದ ಆವಶ್ಯಕತೆಯನ್ನೂ ಮನಸ್ಸಿನಲ್ಲಿ ಬಿಂಬಿಸುವಂತೆ ಅಪ್ಪಣೆ ಕೊಡಿಸಿದರು. ಅನಂತರ ಶ್ರೀ ಕರಮರಕರರು, ಶ್ರೀ ನಿಜಲಿಂಗಪ್ಪನವರು, ಶ್ರೀ ರಮಾನಂದತೀರ್ಥರು ಇವರುಗಳ ಅಮೋಘವಾದ ಭಾಷಣಗಳಾದವು. ಈ ಎಲ್ಲ ಮಹನೀಯರು ಭಾಷಾವಾರು ಪ್ರಾಂತರಚನೆಯ ಹೆಬ್ಬಯಕೆಯನ್ನು ವ್ಯಕ್ತಮಾಡುತ್ತ ಕರ್ಣಾಟಕ ಪ್ರಾಂತರಚನೆಯ ದಿನಗಳು ಬಹಳ ದೂರವಿಲ್ಲವೆಂದೂ ಅದಕ್ಕಾಗಿ ಎಲ್ಲ ತ್ಯಾಗವನ್ನು ಮಾಡಲು ಸಿದ್ಧರಿರುವುದಾಗಿಯೂ ಈ ಪ್ರಶ್ನೆಯನ್ನು ವ್ಯಾವಹಾರಿಕ ದೃಷ್ಟಿಯಿಂದ ಸ್ವಲ್ಪ ನಿಧಾನವಾಗಿ ಬಿಡಿಸತಕ್ಕುದೆಂದೂ ಹೇಳಿದರು. ಮಾನ್ಯ ಶ್ರೀ ಕರಮರಕರರು ಕನ್ನಡಿಗರಲ್ಲಿ ವಿಶಾಲದೃಷ್ಟಿಯುಳ್ಳವರಿಗೂ ಆಡಳಿತಪಟುಗಳಿಗೂ ಏನೂ ಕೊರತೆ ಇಲ್ಲವೆಂದು ಹೇಳಿ ಕರ್ಣಾಟಕದ ಹೊರಗೆ ಕೂಡ ಕನ್ನಡಿಗರು ರಾಷ್ಟ್ರಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಅನಂತರ ಅಧ್ಯಕ್ಷಸ್ಥಾನದಿಂದ ಶ್ರೀ ಮಾಸ್ತಿಯವರ ಭಾಷಣವಾಯಿತು. ಅವರು ತಮ್ಮ ಭಾಷಣದಲ್ಲಿ " ಇಂತಿಂತಹ ತ್ಯಾಗಿಗಳ ಮಧ್ಯದಲ್ಲಿ ನಾನಿದ್ದುದು ನನ್ನ ಸುದೈವ. ಇಂದು ಮುಖಂಡರು ಕರ್ಣಾಟಕ ಏಕೀಕರಣ ಬೇಗ ಆಗುತ್ತದೆ ಎಂದು ಒಕ್ಕೊರಲಿನಿಂದ ಹೇಳಿದುದು ಶುಭ ಸೂಚಕ. ಕೆಲ ಜನ ಪತ್ರಿಕಾಕರ್ತರು ಏಕೀಕರಣದಿಂದ ಭಾರತದೇಶಕ್ಕೆ ಧಕ್ಕೆ ಆಗುತ್ತದೆ ಎಂದು ಹೇಳಿ ಅಪಪ್ರಚಾರ ಮಾಡುತ್ತಿದ್ದಾರೆ. ಭರತಖಂಡ ಒಂದು ಎಂಬುದನ್ನು ಈ ಜನ ನಮಗೆ ಹೇಳಿಕೊಡುವ ಕಾರಣವಿಲ್ಲ. ಉದಾರಚರಿತನಾದವನಿಗೆ ವಸುಧೆಯೇ ಕುಟುಂಬ ಎಂಬ ಮಂತ್ರವನ್ನು ಕನ್ನಡಿಗರು ಮನನ ಮಾಡಿಕೊಂಡು ಆಚರಣೆಯಲ್ಲಿ ತಂದು ತೋರಿಸಿದ್ದಾರೆ, ತೋರಿಸುತ್ತ ಇದ್ದಾರೆ. ಆದರೆ ಕರ್ಣಾಟ ಒಂದು ದೇಶವಾಗಿ ಇಲ್ಲದೆ ಅದು ಭಾರತದ ಸೇವೆ ಹೇಗೆ ಮಾಡಬಲ್ಲುದು ? ಕನ್ನಡನಾಡು ಒಂದು ಆಡಳಿತದಲ್ಲಿ ಬರಬೇಕು. ಎಲ್ಲ ಪ್ರಾಂತಗಳು ತಮ್ಮ ವಿಶಿಷ್ಟ ಗುಣಗಳನ್ನು ಉಳಿಸಿಕೊಂಡು ಭಾರತದ

ಸೇವೆ ಮಾಡಿ ಅದಕ್ಕೆ ಘನತೆಯನ್ನು ತಂದುಕೊಡಬೇಕು. ಇದಕ್ಕಾಗಿ ನಮಗೆ ಕರ್ಣಾಟಕ ಬೇಕು. ಇದು ಕರ್ಣಾಟಕದ ಭಾಗ್ಯನಗರ, ನಮಗೆ ಇಂದು ಭಾಗ್ಯತಾರೆಯು ಉದಯವಾಗಿದೆ" ಎಂದು ಮುಂತಾಗಿ ಅಪ್ಪಣೆಕೊಡಿಸಿದರು.

ರಾತ್ರಿ ಮನರಂಜನೆಯ ಕಾರ್ಯಕ್ರಮಗಳು ನಡೆದವು.

ದಿನಾಂಕ ೬-೭-೫೨ ಬೆಳಗಾಗ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ಮಾನಪತ್ರವನ್ನು ಸಮರ್ಪಿಸುವ ಸಮಾರಂಭವು ಏರ್ಪಟ್ಟಿತ್ತು. ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಪ್ರಾಸ್ತಾವಿಕವಾಗಿ "ನಮ್ಮ ಜನದ ನೀತಿಯ ಮಟ್ಟ ಉನ್ನತವಾಗಬೇಕು. ಪ್ರಪಂಚಕ್ಕೆ ಭರತ ಖಂಡವು ಮಾರ್ಗದರ್ಶನ ಮಾಡಬೇಕು. ಸುಂದರವಾದ ಸಮಾಜವನ್ನು ನಿರ್ಮಾಣ ಮಾಡುವ ಭಾರ ಸಾಹಿತಿಗಳದು. ಶ್ರೀ ಮಾಸ್ತಿಯವರು ಈ ಕಾರ್ಯವನ್ನು ಸರ್ವೋತ್ಕೃಷ್ಟವಾಗಿ ಮಾಡುತ್ತಲಿದ್ದಾರೆ."ಎಂದು ಅಪ್ಪಣೆ ಕೊಡಿಸಿದನಂತರ ಸುಮಾರು ಇಪ್ಪತ್ತು ವಿವಿಧ ಸಂಸ್ಥೆಗಳು ಶ್ರೀ ಮಾಸ್ತಿಯವರಿಗೆ ಪೂಮಾಲೆಯನ್ನು ಅರ್ಪಿಸಿ ಧನ್ಯತೆಯನ್ನು ಪಡೆದವು. ಅನಂತರ ಶ್ರೀ ಹೇಮಂತರು ಕವನ ರೂಪದಲ್ಲಿ ರಚಿಸಿದ ಮಾನಪತ್ರವು ಹೊರನಾಡ ಕನ್ನಡಿಗರ ಪರವಾಗಿ ಶಾಸನ ಸಚಿವರಾದ ಶ್ರೀ ಚಂಡರಕಿ ಜಗನ್ನಾಥರಾಯರಿಂದ ಸಮರ್ಪಿತವಾಯಿತು. ಕುಮಾರಿ ಚಂದ್ರಾವತಿ ಬಿ.ಎಸ್‌ಸಿ. ಅವರು ಅದನ್ನು ಓದುತ್ತಿರುವಾಗ ಸಭೆಯು ಕೃತಜ್ಞತೆಯ ಮಡಲಲ್ಲಿ ತೂಗಾಡುತ್ತಿತ್ತು. ಆಮೇಲೆ ಮಾಸ್ತಿ ಅವರು ತಮ್ಮ ಕೃತಜ್ಞತೆಯನ್ನು ವ್ಯಕ್ತಮಾಡುತ್ತ ಸಮಯೋಚಿತವಾಗಿ ಉತ್ತರವನ್ನು ಕೊಟ್ಟರು.

ಈ ಕಾರ್ಯಕ್ರಮವು ಮುಗಿದ ಮೇಲೆ **ಸಮ್ಮೇಳನ ನಡೆಯಿತು.** ಶ್ರೀ ಮಾಸ್ತಿ, ಸಿದ್ದಯ್ಯ ಪುರಾಣಿಕ, ದೇವೇಂದ್ರ ಕುಮಾರ, ನಾಯಕ, ತವಗ ಮುಂತಾದ ೧೦, ೧೨ ಜನ ಹಿರಿಯ ಕಿರಿಯ ಕವಿಗಳು ಭಾಗವಹಿಸಿ ತಮ್ಮ ತಮ್ಮ ಪ್ರತಿಗಳನ್ನು ಓದಿ ತೋರಿಸಿದರು. ಮಾಸ್ತಿಯವರೇ ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಪದ್ಯ ಬರೆಯುತ್ತಿರಬೇಕು. ಕಾವ್ಯದಲ್ಲಿ ಅಮೃತ ಬಿಂದು ಇರುತ್ತದೆ. ಬರೆಯುವವನಿಗೆ ಸಂತೋಷ. ಕೇಳುವವನಿಗೂ ಸಂತೋಷವುಂಟು. ಕಾವ್ಯ ಶಾಶ್ವತವಾಗಿರಬೇಕಾದರೆ ಅದು ಹೃದಯದಿಂದ ಬರಬೇಕು. ಅನುಭವದಿಂದ ಬರಬೇಕು. ಕಾವ್ಯ ಹೇಳುವುದು ಹಿತವಾಗಿ ಇರಬೇಕು. ಬರಿಯ ವೇಷ ಸಾಲದು. ಶಬ್ದಾಡಂಬರ ಸಲ್ಲ. ಇದು ಅನುಭವವಲ್ಲ. ಅರ್ಥ ಸರಿಯಾಗಿ ಮನಸ್ಸಿಗೆ ಮುಟ್ಟುವಂತಿದ್ದರೆ ಅದು ನಿಜವಾದ ಕಾವ್ಯ" ಎಂದು ಅಪ್ಪಣೆ ಕೊಡಿಸಿದರು.

ಸಂಜೆ ಐದು ಗಂಟೆಗೆ ಶ್ರೀ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಹೊರನಾಡ ಕನ್ನಡಿಗರ ಬಹಿರಂಗ ಅಧಿವೇಶನ ನಡೆಯಿತು ಶ್ರೀ ಎಚ್. ಎಸ್. ಪಾಟೀಲ, ದಿಲ್ಲಿ ಇವರು ಸಂಯುಕ್ತ ಕರ್ನಾಟಕ ಸಂಘಗಳ ವಿಚಾರವಾಗಿಯೂ, ಶ್ರೀ ಎಚ್. ಬಿ. ಕುಲಕರ್ಣಿಯವರು ಸಂಘಗಳು ಹಾಕಿಕೊಂಡ ಯೋಜನೆಗಳ ಬಗ್ಗೆಯೂ, ಶ್ರೀ ಕುಸುಮಾಕರ ದೇಸಾಯಿ, ಇವರು ಕಾಲೇಜುಗಳ ಕನ್ನಡ ವಿದ್ಯಾರ್ಥಿ ಪ್ರಾಧ್ಯಾಪಕರು ಮಾಡುತ್ತಿರುವ ವಿಚಾರವಾಗಿಯೂ ಪುಣೆ ಸಂಘದ ಕಾರ್ಯದರ್ಶಿಗಳಾದ ಶ್ರೀ ಗಾಯಿತೊಂಡೆಯವರು 'ಕನ್ನಡ ಸಂಘಗಳು' ಎಂಬ ವಿಷಯವಾಗಿಯೂ ವಿಚಾರಪರಿಪ್ಲುತವಾದ ಭಾಷಣಗಳನ್ನು ಮಾಡಿದರು. ಆಮೇಲೆ ಅಧಿಕಾರಿ ವರ್ಗದ ಆಯ್ಕೆಯ ಪ್ರಕಟನೆ ಆಯಿತು. ಹೊರನಾಡ ಕನ್ನಡಿಗರ ಸಂಸ್ಥೆಗೆ ಶ್ರೀ ಮಾಸ್ತಿಯವರು ಅಧ್ಯಕ್ಷರೆಂದು, ಆರ್. ವೆಂಕಟೇಶಮೂರ್ತಿಯವರು ಕಾರ್ಯಾಧ್ಯಕ್ಷರೆಂದು, ಶ್ರೀ ಗಾಯತೊಂಡೆಯವರು ಕೋಶಾಧಿಕಾರಿಗಳೆಂದು, ಶ್ರೀ ಹೇಮಂತ ಕುಲಕರ್ಣಿಯವರು ಪ್ರಧಾನ ಕಾರ್ಯದರ್ಶಿಗಳೆಂದು, ಮತ್ತು ಆರ್. ಕೆ. ಕಾರಂತರು ಲೆಕ್ಕದ ತಪಾಸಿಗರೆಂದು ಆರಿಸಲ್ಪಟ್ಟುದಾಗಿ ಸಾರಲಾಯಿತು. ತರುವಾಯ 'ಸಾಹಿತ್ಯ ನಿಕೇತನ' ಸಂಸ್ಥೆಯಿಂದ ಪ್ರಕಟಿತವಾದ ಎಚ್. ಬಿ ಕುಲಕರ್ಣಿಯವರ ಕವನಸಂಗ್ರಹವಾದ "ಸ್ನೇಹಸೂಕ್ತ" ಎಂಬ ಗ್ರಂಥವನ್ನು ಮಾಸ್ತಿಯವರ ಶುಭಹಸ್ತದಿಂದ ಪ್ರಸಿದ್ಧಿಸಲಾಯಿತು. ಕೊನೆಗೆ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಮುಕ್ತಾಯ ಭಾಷಣವನ್ನು ಮಾಡಿದರು. ಅವರ ಭಾಷಣದ ಮುಖ್ಯವಾದ ಅಂಶಗಳು ಇಂತಿವೆ :

"ಪ್ರಾರಂಭದಲ್ಲಿ ಪ್ರಾಂತಪ್ರೇಮ ಬೆಳೆಸಿದ್ದಾಯಿತು. ತತ್ಪರಿಣಾಮವಾಗಿ ದೊಡ್ಡದೊಡ್ಡ ಊರುಗಳಲ್ಲಿ ಕನ್ನಡ ಸಂಘಗಳಾಗಿವೆ. ಸಂಘಗಳನ್ನು ನಡೆಸಬೇಕಾದರೆ ಹತ್ತು ಜನ ಒಂದೆಡೆ ಸೇರಬೇಕು. ಸೇರಿ ಅವರು ಸಾಹಿತ್ಯದ ಸುಖವನ್ನು ಜನಕ್ಕೆ ದೊರೆಯುವಂತೆ

ಮಾಡಬೇಕು. ಈಗಿನ ಜನ ವ್ಯರ್ಥವಾಗಿ ಕಾಲ ಕಳೆಯುತ್ತಾರೆ. ಪೆಂಗ್ವಿನ್, ಪೆಲಿಕನ್ ಮುಂತಾದ ಗ್ರಂಥಮಾಲೆಗಳನ್ನೋದಿ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಒಳ್ಳೆಯ ಗ್ರಂಥಗಳನ್ನು ಅವರು ಓದಬೇಕು. ಗ್ರಂಥಕರ್ತರಿಗೆ ಉತ್ತೇಜನ ಕೊಡಬೇಕು. ಜನರ ರುಚಿ ಕೆಟ್ಟುಹೋಗಿದೆ. ನಮ್ಮ ಬಾಳು ಬರಿಯ ಗಳಿಸುವುದು, ತಿನ್ನುವದು, ಹೀಗಾಗಿ ದನದ ಬಾಳು ಆಗಿದೆ. ಸಂಘಗಳು ಇದನ್ನು ಸರಿಪಡಿಸಬೇಕು. ಗಂಡು ಹೆಣ್ಣು ಎಲ್ಲರೂ ಸಂಘಗಳಲ್ಲಿ ಸೇರಿ ಗೀತ, ವಾಚನ, ವಿಚಾರವಿನಿಮಯ, ಮುಂತಾದ ಕಾರ್ಯಕ್ರಮಗಳನ್ನೇರ್ಪಡಿಸಿಕೊಂಡು ಬಾಳನ್ನು ತಿದ್ದಿಕೊಳ್ಳಬೇಕು. ಎಲ್ಲರೂ ಸಾಹಿತ್ಯಕ್ಕೆ ಪ್ರೋತ್ಸಾಹವನ್ನು ಕೊಡಬೇಕು."

ಅನಂತರ ವಂದನಾರ್ಪಣೆ ಜಯಘೋಷದೊಡನೆ ಸಭೆ ಮುಕ್ತಾಯವಾಯಿತು.

ಬಹಿರಂಗ ಅಧಿವೇಶನದಲ್ಲಿ ಈ ಕೆಳಗಿನ ಠರಾವು-ಗೊತ್ತುವಳಿಗಳು ಸ್ವೀಕೃತವಾದವು.

೧. ಹೊರನಾಡ ಕನ್ನಡಿಗರ ಶೈಕ್ಷಣಿಕ, ಸಾಂಸ್ಕೃತಿಕ ಪ್ರಗತಿಸಂಸ್ಥೆಗಳನ್ನು ಸ್ಥಾಪಿಸಬೇಕು-ದೊಡ್ಡದೊಡ್ಡ ಊರುಗಳಲ್ಲಿ.

೨. ಪರರಾಷ್ಟ್ರಗಳಲ್ಲಿರುವ ಕನ್ನಡಿಗರೊಡನೆ ವಿದೇಶ ರಾಯಭಾರ ಕಚೇರಿಯ ಮುಖಾಂತರ ಸಂಬಂಧ ಬೆಳೆಸಿಕೊಳ್ಳಬೇಕು.

೩. ಕನ್ನಡಿಗರು ಹೊರಗೆ ಎಲ್ಲಿದ್ದರೂ ಅವರಿಗೆ ಶಿಕ್ಷಣಸಂಸ್ಕೃತಿಯ ಸಾಧನೆಯನ್ನು ಸಹಾಯ ಮಾಡಬೇಕು.

ಉತ್ತರ ಪ್ರದೇಶದಲ್ಲಿ ಕನ್ನಡಿಗರು

ಲೇಖಕರು : ಶ್ರೀ ಪಾಟೀಲ ಹನುಮಂತರಾಯರು

ಸ್ವಾತಂತ್ರ್ಯೋತ್ತರಕಾಲದಲ್ಲಿ ಸಂಭವಿಸಿದ ಸಂಸ್ಥಾನಗಳ ಲೀನೀಕರಣ ಮತ್ತು ಸವಿಾಕರಣಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡರೂ, ಇಡಿಯ ಭಾರತದಲ್ಲಿ ಇಂದು ಉತ್ತರ ಪ್ರದೇಶವು ಕ್ಷೇತ್ರ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಮಿಕ್ಕ ಎಲ್ಲ ಪ್ರಾಂತ-ಪ್ರದೇಶಗಳಿಗಿಂತಲೂ ದೊಡ್ಡದಾಗಿದೆ. ಹಾಗೆಯೆ ಕೃಷಿ ಮತ್ತು ಆಹಾರೋತ್ಪಾದನೆಯ ವಿಷಯದಲ್ಲಿಯೂ ಈ ಪ್ರದೇಶವು ಮಹತ್ವದ ಸ್ಥಾನವನ್ನು ಪಡೆದಿದೆ. ಅದಕ್ಕೆ ಕಾರಣ ಇಲ್ಲಿ ಹರಿಯುವ ಗಂಗಾ, ಯಮುನಾ, ಗೋಗ್ರಾ, ಗೋಮತಿಗಳೆ ಮೊದಲಾದ ನದಿಗಳೂ, ಗಂಗಾ-ಯಮುನೆಗಳ ನಡುವಿನ ಫಲವತ್ತಾದ ಭೂಮಿಯೂ, ಅನೇಕ ಶತಮಾನಗಳಿಂದ ಈ ಪ್ರದೇಶದಲ್ಲಿ ರಚಿಸಲ್ಪಟ್ಟ ಅಸಂಖ್ಯ ಕಾಲುವೆಗಳೂ ಕಾರಣ ಎಂದೆನ್ನಬಹುದು

ಆದರೆ ಕನ್ನಡಿಗರ ಸಂಖ್ಯೆ ಮತ್ತು ಕನ್ನಡ ಚಟುವಟಿಕೆಗಳ ದೃಷ್ಟಿಯಿಂದ ಈ ಪ್ರದೇಶವು ಮುಂಬಯಿ, ಮದರಾಸು, ಹೈದರಾಬಾದು, ದೆಹಲಿ ಮತ್ತು ಬಂಗಾಲಗಳ ನಂತರ ಬರುತ್ತದೆ ಎಂದೆನ್ನಬಹುದು. ಆ ಪ್ರದೇಶಗಳಲ್ಲಿ ಕನ್ನಡ ನಾಡಿನ ಒಂದೊಂದು ಭಾಗವು ಸಮಾವೇಶವಾಗಿರುವದೆಂದೂ, ಪ್ರಾಂತಿಕ ಇಲ್ಲವೆ ಕೇಂದ್ರ ಆಧಿಪತ್ಯಗಳಲ್ಲಿ ಕನ್ನಡಿಗರು ಮೊದಲಿನಿಂದ ಸೇರುತ್ತ ಬಂದಿರುವರೆಂದೂ ಮಿಕ್ಕ ಪ್ರಾಂತ ಮತ್ತು ಪ್ರದೇಶಗಳಲ್ಲಿ ಕನ್ನಡಿಗರ ಸಂಖ್ಯೆ ಮತ್ತು ಪ್ರಮಾಣಗಳು ಹೆಚ್ಚಿನವಾಗಿವೆ. ಅದರಂತೆಯೆ ಕನ್ನಡಿಗರ ಸಂಘಟನೆ ಮತ್ತು ಕನ್ನಡ ಸಂಘ-ಸಂಸ್ಥೆಗಳ ಕಾರ್ಯ ಕ್ಷಮತೆಗಳು ಆ ಪ್ರದೇಶಗಳಲ್ಲಿ ಹೆಚ್ಚಾಗಿಯೂ, ಬಹಳ ದಿನಗಳಿಂದಲೂ ನಡೆದುಬಂದುದು ಸ್ವಾಭಾವಿಕವಾಗಿ ಕಂಡು ಬರುತ್ತದೆ.

ಉತ್ತರ ಪ್ರದೇಶದ ಕಾಶಿ, ಪ್ರಯಾಗ, ಕಾನಪುರ ಮತ್ತು ಲಖನೋಗಳಲ್ಲಿ ಈಗೀಗ ಕನ್ನಡಿಗರ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿಯೂ, ಆಗ್ರಾ, ಜಾಂಸಿ, ಅಯೋಧ್ಯಾ, ಅಲೀಗಢ, ಹರಿದ್ವಾರ, ಡೆಹರಾಡೂನ್, ಮೀರತ್, ಗುಡಗಾವ ಮೊದಲಾದ ಸಣ್ಣ-ಪುಟ್ಟ ಸ್ಥಳಗಳಲ್ಲಿ ಅಲ್ಪ ಪ್ರಮಾಣದಲ್ಲಿಯೂ ಕಾಣುತ್ತದೆ. ಕಾಶಿ, ಪ್ರಯಾಗ ಅಯೋಧ್ಯಾ ಮತ್ತು ಹರದ್ವಾರಗಳು ತೀರ್ಥ-ಕ್ಷೇತ್ರಗಳಾಗಿದ್ದು ಅವು ಕನ್ನಡಿಗರಿಗೆ ಮೊದಲಿನಿಂದಲೂ ಪರಿಚಿತವಾಗಿವೆ. ಅದರಂತೆಯೆ ಲಖನೋ, ಆಗ್ರಾ,

ಕಾಶಿ ಮತ್ತು ಅಲೀಗಢಗಳು ಶಿಕ್ಷಣಕೇಂದ್ರಗಳಾಗಿದ್ದ ಕಾರಣ ಅರ್ವಾಚೀನ ಕಾಲದಲ್ಲಿ ಕನ್ನಡಿಗರೂ ಅವುಗಳ ಬಗ್ಗೆ ಸಾಕಷ್ಟು ಅರಿವು ಮತ್ತು ಆತ್ಮೀಯತೆಗಳನ್ನು ಉಂಟುಮಾಡಿಕೊಂಡಿರುತ್ತಾರೆ. ಇತ್ತ ಕಾನಪುರ, ಮಿರಾಜ್, ಡೆಹರಾಡೂನ, ಗುಡಗಾವಗಳು ವ್ಯಾಪಾರ ಕೇಂದ್ರಗಳಾಗಿದ್ದು ಆ ವಿಷಯದಲ್ಲಿ ಕನ್ನಡಿಗರು ಇನ್ನೂ ಸಾಕಷ್ಟು ಆಸಕ್ತಿಯನ್ನು ವಹಿಸಿಲ್ಲ ಎಂದೇ ಹೇಳಬೇಕಾಗುವದು. ಕೊನೆಯದಾಗಿ ಅಗ್ರಾ ಮತ್ತು ಜಾಂಸಿಗಳಂತಹ ಐತಿಹಾಸಿಕ ಸ್ಥಳಗಳು ನಮ್ಮ ದೇಶದಲ್ಲಿಯೆ ಸಾಕಷ್ಟು ಲಕ್ಷ್ಯವನ್ನು ಸೆಳದಿಲ್ಲ ಎಂದು ಹೇಳಿದರೆ ಅಷ್ಟೇನು ತಪ್ಪಾಗಲಿಕ್ಕಿಲ್ಲ.

ಉತ್ತರ ಪ್ರದೇಶದೊಳಗಿನ ಕನ್ನಡಿಗರ ಒಂದು ವೈಶಿಷ್ಟ್ಯವೆಂದರೆ ಮೇಲೆ ಕಾಣಿಸಿದ ಮಿಕ್ಕ ಪ್ರಾಂತಗಳಂತೆ ಇಲ್ಲಿ ಪ್ರಾಂತೀಯ ಆಧಿಪತ್ಯದಲ್ಲಿಯೂ ಖಾಸಗೀ ಸಂಸ್ಥೆಗಳಲ್ಲಿಯೂ ಹೆಚ್ಚು ಜನರು ಕೆಲಸಕ್ಕೆ ನಿಲ್ಲದಿರುವದು. ಇತ್ತ ಮುಂಬಯಿ-ಮದರಾಸು--ಹೈದರಾಬಾದುಗಳಲ್ಲಿನಂತೆ ಸ್ವತಂತ್ರ ಉದ್ಯಮಗಳನ್ನು ಅನುಸರಿಸಿಕೊಂಡು ಬಂದು ಕನ್ನಡಿಗರಂತೂ ಇಲ್ಲವೆಂದರೂ ಸಲ್ಲಬಹುದು. ಬಹುತರವಾಗಿ ಎಲ್ಲ ಕನ್ನಡಿಗಿರು ಕೇಂದ್ರ ಆಧಿಪತ್ಯದ ಆಡಳಿತದಲ್ಲಿರುವ ಕಚೇರಿಗಳು ಇಲ್ಲವೆ ಸಂಸ್ಥೆಗಳಲ್ಲಿ ದುಡಿಯುತ್ತಿರುವರು. ಇದಕ್ಕೆ ಕಾರಣ ಸಾಕಷ್ಟು ಸ್ಪಷ್ಟವಾದುದಾಗಿದೆ. ಅನಂತರದ ಕ್ಷೇತ್ರವೆಂದರೆ ವಿಶ್ವವಿದ್ಯಾಲಯಗಳು. ಅಲ್ಲಿ ಅಧ್ಯಾಪಕ ವರ್ಗಗಳಲ್ಲಿ ಹಲಕೆಲವು ಜನರು ಸೇವೆಗೈಯುತ್ತಿದ್ದು, ಪ್ರತಿವರ್ಷವೂ ಬದಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅವರು ಆಧಾರ ಸ್ಥಾನದಲ್ಲಿಯೂ, ಮಾರ್ಗದರ್ಶಕರಾಗಿಯೂ ಇರುತ್ತಾರೆ. ಇನ್ನೊಂದು ಮಹತ್ವದ, ಕನ್ನಡಿಗರು ಕೆಲಸಕ್ಕಿರುವ, ಕ್ಷೇತ್ರವೆಂದರೆ ವಿದೇಶೀಯರು ಸ್ಥಾಪಿಸಿಕೊಂಡಿರುವ ಕೆಲವು ಶಾಸ್ತ್ರೀಯ ಸಂಸ್ಥೆಗಳಲ್ಲಿ! ಅಲ್ಲಿ ಬಹಳ ದಿನಗಳಿಂದ ದುಡಿಯುತ್ತಿರುವ ಕಾರಣದಿಂದಾಗಲಿ, ಅಲ್ಲಿರುವ ಉಚ್ಚವಾದ ನೈತಿಕ ಮತ್ತು ವೈಜ್ಞಾನಿಕ ಮಟ್ಟ, ಅಲ್ಲಿ ದೊರೆಯುವ ಕೈತುಂಬ ಸಂಬಳ ಮತ್ತು ಮನಂಬುಗವ ನಡೆವಳಿಕೆ ಇವುಗಳಿಗಾಗಿ ಕನ್ನಡಿಗರು ಆ ಸಂಸ್ಥೆಗಳಲ್ಲಿಯ ತಮ್ಮ ಸ್ಥಾನಗಳನ್ನು ಇಟ್ಟುಕೊಂಡಿರುವ ಮತ್ತು ಹೊಸ ಸ್ಥಳಗಳನ್ನು ಪಡೆದುಕೊಳ್ಳುವ ಸಂಗತಿಯು ತಿಳಿದುಬರುತ್ತದೆ. ಕೊನೆಯದಾಗಿ ದೊಡ್ಡ ದೊಡ್ಡ ಗಿರಣಿಗಳು ಇಲ್ಲವೆ ಔದ್ಯೋಗಿಕ ಕಾರಖಾನೆಗಳಲ್ಲಿಯೂ ಕನ್ನಡಿಗರು ಕೆಲವು ಪ್ರಮಾಣದಲ್ಲಿ ಸಿಕ್ಕುತ್ತಾರೆ. ಹೆಚ್ಚಾಗಿ ಈ ಸಂಖ್ಯೆಯು ವೈಯಕ್ತಿಕ ಇಲ್ಲವೆ ತಾತ್ಪೂರ್ತಿಕ ಕಾರಣಗಳಿಗಾಗಿ ಅಂತಹ ಸ್ಥಳಗಳಲ್ಲಿ ಕಾಣುತ್ತಿರುವದೇ ಹೊರತು ಸಾರ್ವತ್ರಿಕವಾದ ರೀತಿಯಲ್ಲಿ ಅಲ್ಲ.

ಈ ಪ್ರದೇಶದಲ್ಲಿ ಈಗ ೩–೪ ಕನ್ನಡಿಗರ ಸಂಸ್ಥೆಗಳು ಅಸ್ತಿತ್ವದಲ್ಲಿದ್ದುದು ಎಲ್ಲ ಕನ್ನಡಿಗರಿಗೂ ಒಂದು ಸಂತೋಷದ ಮತ್ತು ಉತ್ಸಾಹದ ಸಮಾಚಾರವೆನಿಸಬಹುದು. ಆದರೆ ಅವೆಲ್ಲ ಸಂಸ್ಥೆಗಳಲ್ಲಿ ಸ್ಥಿರವಾದ ಸದಸ್ಯ ಪ್ರಮಾಣವು ಅಷ್ಟು ದೊಡ್ಡದಾಗಿರುವದಿಲ್ಲ. ತಾತ್ಪೂರ್ತಿಕವಾಗಿ ಒಂದು ಸ್ಥಳದಲ್ಲಿ ಬಂದಿರುವ ಕನ್ನಡಿಗರು, ಆಕಸ್ಮಿಕವಾಗಿ ಸ್ಥಳಾಂತರ ಹೊಂದುವಂತಹ ವಿಭಾಗಗಳಲ್ಲಿ ಕೆಲಸ ಮಾಡುವ ಕನ್ನಡಿಗರು, ಅಲ್ಪಾವಧಿಯ ಮಟ್ಟಿಗೆ ವಾಸವಾಗಿರುವ ವಿದ್ಯಾರ್ಥಿಗಳು ಇವರ ಸಂಖ್ಯೆಯು ಅದರಲ್ಲಿ ಸಾಕಷ್ಟಿರುತ್ತದೆ. ಆದರೂ ಕಾಶೀ ವಿಶ್ವವಿದ್ಯಾಲಯದಲ್ಲಿರುವ ಕಾಶೀ ಕರ್ನಾಟಕ ಸಂಘ ಮತ್ತು ಮೊನ್ನೆಮೊನ್ನೆ ಕಾನಪುರದಲ್ಲಿ ಸ್ಥಾಪಿತವಾದ ಕರ್ನಾಟಕ ಮಿತ್ರಮಂಡಳಿ ಈ ಸಂಸ್ಥೆಗಳ ಭವಿಷ್ಯವು ಉಜ್ವಲವಾಗಿದೆ ಎಂದು ಹೇಳಬಹುದು. ಕಾಶಿಯಲ್ಲಿ ಕನ್ನಡಿಗರ ಸಂಖ್ಯೆಯು ದೊಡ್ಡದಾಗಿದೆ; ಅಲ್ಲಿ ಈಗಾಗಲೆ ಹೊರನಾಡ ಕನ್ನಡಿಗರ ಮೂರನೆಯ ಸಮ್ಮೇಳನವು ೧೯೪೮ರಲ್ಲಿ ಜರುಗಿದುದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು. ಅದರ ಜೊತೆಯಲ್ಲಿ ಅದಕ್ಕೆ ಪ್ರಯಾಗ ಮುಂತಾದ ಸ್ಥಳಗಳಿಂದ ಮಿಕ್ಕ ಕನ್ನಡಿಗರ ಬೆಂಬಲವೂ ಸಿಕ್ಕುವದು ಸಹಜ ಸಾಧ್ಯವಾಗಿದೆ. ಅದರಂತೆಯೆ ಲಖನೋದಲ್ಲಿರುವ ಕನ್ನಡಿಗರ ಸಹಾಯ–ಸಹಕಾರದಿಂದ ಕಾನಪುರವನ್ನಿಂದು ಕನ್ನಡಿಗರ ಸಂಸ್ಕೃತಿಯ ಕೇಂದ್ರವನ್ನಾಗಿ ಪರಿಣಮಿಸುವದು ಸಾಧ್ಯವಾಗಿದೆ.

ಈ ಪ್ರದೇಶದಲ್ಲಿರುವ ಇನ್ನೊಂದು ಪುರಾತನವಾದ ಮತ್ತು ವೈಶಿಷ್ಟ್ಯಪೂರ್ಣವಾದ ಸಂಸ್ಥೆಯ ಮಹತ್ವವು ಕನ್ನಡಿಗರಿಗೆ ಹಿರಿಯದಾಗಿದೆ. ಕಾಶಿಯಲ್ಲಿರುವ ವೀರ–ಶೈವರ ಧರ್ಮಪೀಠವೇ ಈ ಸಂಸ್ಥೆ. ಜಂಗಮವಾಡಿ, ಮಠವು ಕಾಶಿಯಲ್ಲಿ ಸುಪ್ರಸಿದ್ಧವಾದದ್ದು. ಇಡಿಯ ವೀರಶೈವ ಸಮಾಜಕ್ಕೂ, ಕನ್ನಡವಾಡಿಗೂ ಒಂದು ಆದರ್ಶ ಸಂಸ್ಥೆಯಾಗಿದೆ. ಇಲ್ಲಿಯ ಶಿಕ್ಷಣ ಪದ್ಧತಿ, ಇಲ್ಲಿಯ ಜ್ಞಾನಮಂದಿರ, ಜಂಗಮವಾಡಿಯ ಮಠಾಧೀಶ್ವರರಿಗೆ ಕನ್ನಡದ ಮೇಲಿರುವ ಅನ್ಯಾದೃಶವಾದ ಪ್ರೀತಿ–ಅಭಿಮಾನಗಳು, ಇಲ್ಲಿಯ ಅಸಂಖ್ಯ ತಾಳೆಗರಿಯ ಮತ್ತು ಪುರಾತನ ಸಾಹಿತ್ಯದ ಪುಸ್ತಕಗಳಿರುವ ಗ್ರಂಥ

ಭಂಡಾರ ಇವು ಅಪೂರ್ವವಾಗಿವೆ; ಅನುಪಮವೆನಿಸಿವೆ ಈ ಮಠದ ಅಂಗಸಂಸ್ಥೆಯಾಗಿ ದುಡಿಯುತ್ತಿರುವ ವೀರ ಶೈವ ವಿದ್ವತ್ಸಭೆಯು ಅನೇಕ ಉಪಯುಕ್ತವಾದ ಕಾರ್ಯ ಗಳನ್ನು ಕೈಕೊಂಡಿದೆ.

ಕಳೆದ ವಾರ ನಾನು ಕಾನಪುರದಲ್ಲಿ ಜರುಗಿದ ಕರ್ನಾಟಕ ಮಿತ್ರಮಂಡಳಿಯ ಮೊದಲನೆಯ ಸ್ನೇಹ-ಕೂಟಕ್ಕೆ ಹೋಗಿದ್ದೆ. ಕಾನಪುರದಲ್ಲಿ ಕಚೇರಿಯ ಭಾರತೀಯ ವಿಮಾನಪಡೆ ಮತ್ತು ಹಿಂದುಸ್ತಾನ ವಿಮಾನ-ನಿರ್ಮಾಣ ಕಾರ್ಯಾಲಯಗಳಲ್ಲಿ ಕೆಲಸ ಮಾಡುವ ಜನರನ್ನು ಸೇರಿಸಿ ೧೫೦-೨೦೦ ಜನ ಕನ್ನಡಿಗರು ವಾಸಿ ಸುತ್ತಾರೆ. ಅಂದಿನ ಸಭೆಗೆ ಹೆಚ್ಚಾಗಿ ಎಲ್ಲ ಜನರು ಒಂದು ಕುಟುಂಬದ ಸದಸ್ಯರಂತೆ ಬಂದು ಸೇರಿದರು, ಆ ಸಂಭ್ರಮ, ಆ ಪುನರ್ಮಿಲನದ ಉತ್ಸಾಹ, ಕನ್ನಡಿಗರ ಉದಾರ ಹೃದಯದ ಪ್ರತೀಕ ಎನ್ನಿಸಬಹುದು ಆ ಸ್ನೇಹಬಾಂಧವ್ಯಗಳು ಎಂತಹರನ್ನೂ ಮರುಳುಗೊಳಿ ಸುವಂತಹವಾಗಿದ್ದುವು. ಹೊರನಾಡ ಕನ್ನಡಿಗರಲ್ಲಿ ಎದ್ದು ಕಾಣುವ ಮತ್ತು ಈ ದಿನದ ಸಮಾರಂಭದಲ್ಲಿ ಸುಸ್ಪಷ್ಟವಾದ "ಕನ್ನಡಿಗರು ಒಂದೇ" ಎಂಬ ಭಾವ ನೆಯು ಪ್ರತಿಯೊಬ್ಬ ಕನ್ನಡಿಗನನ್ನೂ ಒಂದುಬಗೆಯ ಸಮಾಧಾನದಲ್ಲಿ ತೇಲಿಸಿತ್ತು. ಜಾತಿ, ಮತ, ಪಂಥ, ಪ್ರದೇಶ, ಪಕ್ಷಗಳ ಯಾವ ಸೋಂಕೂ ಅಲ್ಲಿ ಕಾಣು ತ್ತಿರಲಿಲ್ಲ. ನಾವೆಲ್ಲರೂ ಒಂದೇ, ಕನ್ನಡಿಗರು ಒಂದೇ, ಸಿರಿಗನ್ನಡ ವಂದೇ! ಎಂಬ ವಿಚಾರವು ಆ ದಿನ ಕಾರ್ಯಕ್ರಮವನ್ನೆಲ್ಲ ತಾನೇತಾನಾಗಿ ವ್ಯಾಪಿಸಿತ್ತು. ಎಂತಹ ಹರಕುಮುರುಕಾದ ಕನ್ನಡವೇ ಆಗಲಿ, ಕನ್ನಡ ದಲ್ಲಿಯೆ ಮಾತನಾಡುವ ಹಟವಿತ್ತು; ಸುಮಧುರವಾದ ಕರ್ನಾಟಕ ಸಂಗೀತವಿತ್ತು. ತಾವೇ ರಚಿಸಿ ಹಾಡಿದ ಕನ್ನಡ ಕಾವ್ಯವಿತ್ತು. ಕನ್ನಡಿಗರ ಐಕ್ಯ ಮತ್ತು ಸಂಘ ಟನೆಯ ಅರಿವು ಮತ್ತು ನೆನಪು ಇತ್ತು. ಚಿಕ್ಕಮಕ್ಕ ಳನ್ನು ಕನ್ನಡದ ರಸದೂಟದಲ್ಲಿ ತಣಿಸಿಬಿಡುವ ಹಂಬಲ ವಿತ್ತು. ಅಂದಿನ ಸಭೆಯ ಸಕಲ ಕಾರ್ಯಕಲಾಪ ಗಳಲ್ಲಿ! ಇದಕ್ಕೆ ಮೇಲಾಗಿ ವಿಜ್ಞಾನ ಕ್ಷೇತ್ರದಲ್ಲಿ ಕನ್ನಡಿಗರು ಪಡೆಯುತ್ತಿರುವ ಪ್ರತಿಭೆಯ ಆವಿರ್ಭಾವ ವಿತು!

ಡಾ| ದಾಸಣ್ಣಾಚಾರ್ಯ, ಡಾ| ಆರ್. ಕೆ. ಅಸುಂಡಿ, ಡಾ| ರಾನಡೆ, ಡಾ| ಎ. ಆರ್. ರಾವ್, ಗುರುರಾಜದಾಸ, ಡಾ. ತುಂಗಮ್ಮ, ಪ್ರೊ. ನಾಯಕ, ಪ್ರೊ. ಕುಲಕರ್ಣಿ, ಪ್ರೊ. ಅಶ್ವತ್ಥನಾರಾಯಣರಾವ, ಪ್ರೊ. ವ್ಹಿ. ಆರ್. ರಾವ, ಶ್ರೀ ಆರ್. ಟಿ. ರಾಮಚಂದ್ರ, ಶ್ರೀ ಜಿ. ವಿ. ಬದಾಮಿ ಮೊದಲಾದ ವಿದ್ವಾಂಸರು ಮತ್ತು ಮೇಧಾವಿಗಳು ಕಾಶಿ, ಪ್ರಯಾಗ, ಲಖನೋ, ಕಾನಪುರ ಗಳಲ್ಲಿ ಕನ್ನಡಿಗರಾಗಿ, ವಿಜ್ಞಾನಿಗಳಾಗಿ, ವ್ಯಾಸಂಗಿ ಗಳಾಗಿ, ಭಾರತೀಯರಾಗಿ ಹೆಸರುವಾಸಿಯಾಗಿದ್ದಾರೆ. ನಾಡಿಗೂ, ನುಡಿಗೂ, ರಾಷ್ಟ್ರಕ್ಕೂ ಕೀರ್ತಿಯನ್ನು ತಂದು ಕೊಟ್ಟಿರುತ್ತಾರೆ. ಸಾಹಿತ್ಯ, ವೇದಾಂತ, ವೈದ್ಯಕ, ಭೌತಶಾಸ್ತ್ರ, ಸಸ್ಯಶಾಸ್ತ್ರ, ರಸಾಯನ, ಸ್ಥಾಪತ್ಯ ಮೊದಲಾದ ಶಾಸ್ತ್ರಗಳಲ್ಲಿ ನಮ್ಮ ಕನ್ನಡ ಬಾಂಧವರು ಯಾರಿಗೂ ಕಡಿಮೆಯಲ್ಲದಂತಹ ಸೇವೆಯನ್ನು ಸಲ್ಲಿಸಿ ದ್ದಾರೆ; ಸಲ್ಲಿಸುತ್ತಿದ್ದಾರೆ. ಅದರಂತೆಯೆ ಸ್ಥಾನೀಯ ಸಮಸ್ಯೆಗಳು, ನಗರ ಸಭೆಯ ಚಟುವಟಿಕೆಗಳು, ಸ್ಥಳಿಕ ಸಂಸ್ಥೆಗಳ ಕಾರ್ಯಕಲಾಪಗಳು, ರಾಷ್ಟ್ರೀಯ ಆಂದೋ ಲನದ ಕಾಯಕ್ರಮ ಇವುಗಳಲ್ಲಿಯೂ ನಮ್ಮವರು ಸಾಕಷ್ಟು ಶ್ರಮವಹಿಸಿ, ದುಡಿದು ಹೆತ್ತ, ನಾಡಿಗೂ, ಹೊತ್ತನಾಡಿಗೂ ಶ್ರೇಯಸ್ಸನ್ನು ತಂದಿದ್ದಾರೆ.

ಇಂದಿನ ಭಾರತದಲ್ಲಿ ಉತ್ತರ ಪ್ರದೇಶವು ಭಾರ ತದ ಹೃದಯದಂತಿದೆ. ಅಲ್ಲಿಯ ಪವಿತ್ರ ತೀರ್ಥಗಳು, ಅಲ್ಲಿಯ ವಿಶಾಲ ನದಿಗಳು, ಅಲ್ಲಿಯ ಫಲವತ್ತಾದ ಭೂಮಿ, ಅಲ್ಲಿಯ ಪುರಾತನವಾದ ಕಾಲುವೆಗಳು ಇವೆಲ್ಲ ಎಲ್ಲ ಭಾರತೀಯರಿಗೆ ಅಭಿಮಾನವನ್ನು ಹುಟ್ಟಿಸು ವಂತಹ ವಿಷಯಗಳು. ಅದರಂತೆಯೆ ನಮ್ಮ ರಾಜ್ಯ ಘಟನೆಯ ಮೇರೆಗೆ ಹಿಂದೀ ಭಾಷೆಯು ರಾಜಭಾಷೆ ಯಾದ ಕಾರಣ ಈ ಪ್ರದೇಶಕ್ಕೆ ಹೆಚ್ಚಿನ ಮಹತ್ವವು ಈಗ ಪ್ರಾಪ್ತವಾಗಿದೆ. ಹಿಂದೀ ಭಾಷೆಯು ಅಷ್ಟು ಪುರಾತನವಾದುದದುಅಲ್ಲ ಎಂದು ಹೇಳುವವರೂ ಇದ್ದಾರೆ; ಆದರೂ ಇಂದಿನ ಪರಿಸ್ಥಿತಿಯಲ್ಲಿ ಹಿಂದಿ ಯಲ್ಲಿ ಅದ್ಭುತವಾದ ಪ್ರಮೋದಗಳು ಮತ್ತು ಅನೇಕ ದೀರ್ಘ ಪ್ರಯತ್ನಗಳು ಭರದಿಂದ ಸಾಗಿವೆ. ಈ ವಿಷಯವನ್ನು ನಾವು ಕನ್ನಡಿಗರು ಲಕ್ಷ್ಯದಲ್ಲಿ ತಂದು ಕೊಂಡು, ವಿವಿಧತೆಯಿಂದ ತುಂಬಿದ್ದರೂ ಏಕರೂಪತೆ ಯಿಂದ ಹೊಳೆಯುತ್ತಿರುವ ಭಾರತೀಯ ಸಂಸ್ಕೃತಿ ಯನ್ನು ಕನ್ನಡಿಗರು ಆತ್ಮಸೇವೆಯ ಮೂಲಕ ಹೇಗೆ ಬೆಳೆಯಿಸಬಹುದು ಮತ್ತು ಅದರ ಮೂಲಕ ತಮ್ಮ ಜೀವನವನ್ನು ಹೇಗೆ ಬೆಳಗಿಸಿಕೊಳ್ಳಬಹುದು ಎಂಬು ದನ್ನು ಯೋಚಿಸುವುದು ಅಗತ್ಯವಾಗಿದೆ.

ಉತ್ತರ ಪ್ರದೇಶದಲ್ಲಿ ಬಂದು ವಾಸವಾಗಿರುವ ಕನ್ನಡ ಮಹನೀಯರು ಮತ್ತು ಮಹಿಳೆಯರು ಅನಾ

ಯಾಸದಿಂದಲೆ, ಸ್ಥಾನ ಮಹಾತ್ಮ್ಯದ ಪ್ರಭಾವದಿಂದ ಹಿಂದಿಯನ್ನು ಕಲಿತುಕೊಂಡಿದ್ದಾರೆ. ಅಷ್ಟೆ ಏಕೆ? ತುಸು ಹೆಚ್ಚಿನ ಅಭ್ಯಾಸ ಮತ್ತು ಪ್ರಯತ್ನಗಳಿಂದ ಹಿಂದಿಯ ಮೇಲೆ ಸಾಕಷ್ಟು ಪ್ರಭುತ್ವವನ್ನು ಪಡೆದಿರುತ್ತಾರೆ. ಆದರೆ ಇಲ್ಲಿ ಇದೆಲ್ಲ ಭಾರತೀಯ ದೃಷ್ಟಿಯಿಂದ ಸಂತೋಷದ ಸಂಗತಿಯೆ ಆಗಿದ್ದರೂ, ಕನ್ನಡವು ಅದರಿಂದ ಹೇಗೆ ಪ್ರಯೋಜನ ಪಡೆಯಬಹುದು; ಕನ್ನಡಿಗರು ತಮ್ಮ ಪಾಲಿನ ಕರ್ತವ್ಯವನ್ನು ಎಂತಹ ದಕ್ಷತೆಯಿಂದ ನಿರ್ವಹಿಸಬಹುದು ಎಂಬ ಸಮಸ್ಯೆಯು ಬಂದು ನಿಲ್ಲುತ್ತದೆ. ಈ ಪ್ರದೇಶದ ಕನ್ನಡಿಗರು ರಾಜಭಾಷೆಯನ್ನು ಕನ್ನಡದಲ್ಲಿ ಪ್ರತಿಬಿಂಬಿಸಬಹುದು; ಆದರೆ ಕನ್ನಡದ ಕಾಣಿಕೆಯನ್ನು ಭಾರತೀಯ ಸಂಸ್ಕೃತಿಯ ಸಂವರ್ಧನೆಯ ಸಲುವಾಗಿ ಸಲ್ಲಿಸುವದೆಂತು? ದುರ್ದೈವದಿಂದ ಈ ಪ್ರದೇಶದಲ್ಲಿ ಒಂದಾದರೂ ಕನ್ನಡ ಮಕ್ಕಳ ಶಾಲೆಯಾಗಲಿ, ಒಂದು ಕನ್ನಡ ಗ್ರಂಥಾಲಯವಾಗಲಿ ಇರುವದಿಲ್ಲ. ಇಲ್ಲಿ ಹುಟ್ಟಿ, ಬೆಳೆಯುವ ಕನ್ನಡ ಮಕ್ಕಳಿಗೆ ಇಂತು ಕನ್ನಡದ ಸಂಪರ್ಕವೇ ದೊರೆಯದಂತಾಗಿದೆ; ಹಿರಿಯರಿಗೆ ಕನ್ನಡದ ಆಕರ್ಷಣೆಯು ಉಳಿಯುವದಂತೂ ದೂರದ ಮಾತು. ಅಂತೆಯೆ ಈ ಸಮಸ್ಯೆಯನ್ನು ಕನ್ನಡ ನಾಡಿನ ವಿದ್ಯಾವಂತರು, ಅಭಿಮಾನಿಗಳು ಮತ್ತು ಅಧಿಕಾರಿಗಳು ಯೋಚಿಸಬೇಕು. ಈ ವಿಷಯದಲ್ಲಿ ಈ ಪ್ರದೇಶದ ಕನ್ನಡ ಮುಂದಾಳುಗಳ ಮತ್ತು ಸಂಸ್ಥೆಗಳ ಅಭಿಪ್ರಾಯ ಉಪದೇಶಗಳನ್ನು ಪಡೆಯಬೇಕು. ಇಲ್ಲಿಯ ಕನ್ನಡ ಹಿರಿಯರು ಕನ್ನಡವನ್ನು ಉಳಿಸಿಕೊಳ್ಳುವುದು, ಕಿರಿಯರು ಕನ್ನಡವನ್ನು ಕಲಿತುಕೊಳ್ಳುವದು, ಮತ್ತು ಈ ಪ್ರದೇಶದ ಕನ್ನಡಿಗರಿಂದ ಈ ಪ್ರದೇಶದ ಸಂಸ್ಕೃತಿಯ ವೈಶಿಷ್ಟ್ಯದ ಪರಿಚಯವನ್ನು ಕನ್ನಡ ನಾಡಿನವರು ಮಾಡಿಕೊಳ್ಳುವ ಮಾರ್ಗವನ್ನು ಕಂಡುಹಿಡಿಯುವುದು ಈ ತ್ರಿವೇಣೀ ಸಂಗಮವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಕನ್ನಡಿಗರು ಯೋಚಿಸಬೇಕು.

"ಉಪಾಧ್ಯಾಯ ಶಿಕ್ಷಣ ಕೇಂದ್ರಗಳಲ್ಲಿ ಗಮಕ ಕಲೆಯ ಶಿಕ್ಷಣದ ಆವಶ್ಯಕ"

ಶ್ರೀ ಗಮಕಿ ಎಂ. ರಾಘವೇಂದ್ರರಾವ್

ಭರತ ಭೂಮಿಯಲ್ಲಿ ಹೆಸರಾಂತ ಅರುವತ್ತು ನಾಲ್ಕು ಕಲೆಗಳ ಪೈಕಿ ಒಂದೆನಿಸಿ, ಹಿಂದೆ, ಅದರಲ್ಲೂ ನಮ್ಮ ಕನ್ನಡ ನಾಡಿನಲ್ಲಿ ಅತ್ಯಂತ ವೈಭವದಿಂದ ಮೆರೆದು, ಜೈನ ಕವಿಗಳ ಕಾಲದಿಂದ ಮೊದಲಾಗಿ, ವಿಜಯನಗರದರಸರ ಆಳ್ವಿಕೆಯ ಕಡೆಯತನಕ ರಾಜಮನ್ನಣೆಯನ್ನು ಪಡೆದಿದ್ದ, "ಪುಸ್ತಕವಾಚನ" ಅರ್ಥಾತ್ "ಗಮಕ" ಅಥವಾ "ಕಾವ್ಯಗಾಯನ" ಕಲೆಯು ಕಾಲಕ್ರಮದಲ್ಲಿ ಅನೇಕ ಕಾರಣಗಳಿಂದ ಖಿಲವಾಗುತ್ತಾ ಬಂದಿತು. ಅತಿಮುಖ್ಯವಾದ ಕಾರಣವಾದರೂ ನಮ್ಮ ಜನರಿಗೆ ಆಂಗ್ಲಭಾಷೆಯ ಕಡೆಗೆ ಮನಸ್ಸು ತಿರುಗಿದುದೂ, ಹಾಗೆಯೇ ನಮ್ಮ ತಾಯ್ನುಡಿಯ ವಿಚಾರದಲ್ಲಿ ತಿರಸ್ಕಾರ ಭಾವನೆಯು ಮೂಡಿದುದೂ ಆಗಿತ್ತೆಂದರೆ ತಪ್ಪಾಗಲಾರದು. ಭಾಷಾಪ್ರೇಮಿಗಳು ಕಡಿಮೆಯಾಗುತ್ತಿದ್ದಂತೆಯೇ ದೇಶದ ಜನರ ಮಾತೃಭಾಷೆಯ ತಿಳಿವಳಿಕೆಯ ಮಟ್ಟವೂ ಇಳಿಯಲು ಮೊದಲಾಯಿತು. ಒಬ್ಬ ಗಮಕಿಯು ಯಾವುದಾದರೂ ಒಂದು ಪದ್ಯಕಾವ್ಯದ ಒಂದು ಸ್ವಾರಸ್ಯವಾದ ಭಾಗವನ್ನು ರಸವತ್ತಾಗಿ ಎಲ್ಲಿಯಾದರೂ ಓದುತ್ತಿದ್ದರೆ, ನೇರವಾಗಿ ಆ ಕಾವ್ಯ ಭಾಗದ ಕಥಾಮೃತವನ್ನು ಆಸ್ವಾದಿಸಿ ಸಂತೋಷಪಡಬಲ್ಲ ರಸಿಕತೆಯು ಜನರಲ್ಲಿ ಮಾಯವಾಗಿ ಹಲವೆಡೆಗಳಲ್ಲಿ ಸಭಿಕರು ಕಡೆಗೆ, "ಸ್ವಾಮಿ, ತಾವು ಓದುವುದರ ಜೊತೆಗೆ ಸ್ವಲ್ಪ ಹಾಗೆಯೇ ಅರ್ಥವನ್ನೂ ಹೇಳಿಬಿಡಿ" ಎನ್ನುವತನಕ ಬಂದು ಬಿಟ್ಟಿತು ನಮ್ಮ ಗಮಕ ಕಲೆಯ ದುಃಸ್ಥಿತಿ! ಕಾಲಕ್ರಮದಲ್ಲಿ ಈ ಪದ್ಧತಿಯೇ ಬೆಳೆಯುತ್ತಾ ಬಂದು, ಎಲ್ಲಿ ನೋಡಿದರೂ ವ್ಯಾಖ್ಯಾನ ಪ್ರಧಾನವಾದ ಕಾವ್ಯವಾಚನವೇ ನಮಗೆ ಕೇಳಿಸ ತೊಡಗಿತು!! ಶ್ರೋತೃವರ್ಗದಲ್ಲಿ ಬಹುಮಂದಿಗೆ, ಗಮಕಿಗಳು ಎಷ್ಟೋ ಸೊಗಸಾಗಿ ಅರ್ಥ–ರಾಗ–ರಸಗಳು ಕೆಡದಂತೆಯೂ, ಆಬಾಲ ವೃದ್ಧರಾದಿಯಾಗಿ ತಿಳಿಯುವಂತೆಯೂ, ತಾವು ಹೇಳುವ ವಿಧಾನದಲ್ಲಿ ಎಷ್ಟೋ ಭಾವ ಬೋಧಕವಾಗಿ ಪದ್ಯಗಳನ್ನು ಹಾಡಿದರೂ, ಆ ಕಾವ್ಯಾನಂದವನ್ನನುಭವಿಸುವ ಸಾಮರ್ಥ್ಯವು ಸಾಲದೆ ಹೋಯಿತು. ಕೊನೆಗೆ ಅರ್ಥಹೇಳುವ ಅಯ್ಯನವರಿಲ್ಲದಿದ್ದರೆ ಅಥವಾ

ಸಿಕ್ಕದಿದ್ದರೆ, ಗಮಕಿಗಳ ಕಾವ್ಯವಾಚನವೇ ಹಲವೆಡೆಗಳಲ್ಲಿ ನಡೆಯುದಂತಾಯಿತು. ವ್ಯಾಖ್ಯಾನ ಪ್ರಧಾನವಾಗಿರುವ ಕಾವ್ಯವಾಚನವು ನನ್ನ ಅಭಿಪ್ರಾಯದಲ್ಲಿ ಪಕ್ಕವಾದ್ಯಗಳಿಲ್ಲದ ಹರಿಕಥೆ ಅಥವಾ ಕೀರ್ತನೆ ಇದ್ದಂತೆ, ಅಥವಾ ರಸಿಕ ಜನರು ಹೇಳುವಂತೆ "ಅಡೆಹಾಕಿದ ಮಾವಿನ ಕಾಯನ್ನು ಹಣ್ಣುಮಾಡಿ ತಿಂದಂತೆ." ಹೀಗಿದ್ದರೂ ಅನಿವಾರ್ಯವಾಗಿ ನಮ್ಮ ಜನರು ಈ ಪದ್ಧತಿಗೆ ಶರಣಾಗಬೇಕಾಯಿತು. ಪದ್ಯ ಓದುವವರೂ ಸಹ, ಸಹಜವಾಗಿ, ಆ ವಾತಾವರಣದಲ್ಲಿ ಹೆಚ್ಚಿಗೆ ಯಾವ ರೀತಿಯಲ್ಲೂ, ತಮಗೆ ಸ್ವತಂತ್ರವಾಗಿ ಪ್ರೋತ್ಸಾಹ ದೊರಕುತ್ತಿರಲಿಲ್ಲವಾದ ಕಾರಣ, ಆ ಕಲೆಯನ್ನು ಹೆಚ್ಚು ಆದರ ಮತ್ತು ಶ್ರದ್ಧೆಗಳಿಂದ ಅಭ್ಯಾಸ ಮಾಡುವುದನ್ನು ತಡಮಾಡಿದರೆಂದೂ, ಗಮಕಿಗಳ ಸಂಖ್ಯೆ ಹೆಚ್ಚಿದರೂ, ವಾಚನದ ಗುಣಭಾಗ ಹೆಚ್ಚಲಿಲ್ಲವೆಂದೂ, ಎಷ್ಟೋ ಸಂದರ್ಭಗಳಲ್ಲಿ ಪದ್ಯವಾಚಕರು, "ಅರ್ಥ ಹೇಳುವವರಿರುವಾಗ ಪದ್ಯ ಯಾವ ರಾಗದಲ್ಲಾಗಲೀ ಹೇಗೇ ಹೇಳಿದರೂ ಪರವಾಯಿಲ್ಲ"ವೆಂಬ ಸಮಾಧಾನದಿಂದ, ಪೂರ್ವಸಿದ್ಧತೆಯಿಲ್ಲದೆ ಕಾವ್ಯಭಾಗಗಳನ್ನು ವಾಚನ ಮಾಡುತ್ತಿದ್ದರೆಂದೂ, ಹೀಗೆ ಕಲಾವ್ಯಾಸಂಗದಲ್ಲಿ ಒಂದು ಗೊತ್ತಾದ ಮಾರ್ಗ ಮತ್ತು ಅದರ ಗುರಿ ಮುಟ್ಟಲಿಲ್ಲವೆಂದೂ ಅತ್ಯಂತ ವ್ಯಸನದಿಂದ ಹೇಳಬೇಕಾಗಿದೆ.

ಅಂತೂ ಗಮಕ ಕಲೆಯು ಎಷ್ಟೇ ಹೀನಸ್ಥಿತಿಗೆ ಬಂದರೂ, "ಅರ್ಥ ಹೇಳುವವರೊಬ್ಬರೇ ಸಾಕು, ಗಮಕಿಗಳು ನಮಗೆ ಬೇಡ" ಎಂದು ಹೇಳುವ ಸ್ಥಿತಿಗೇನೂ ನಮ್ಮ ಜನರು ಬರಲಿಲ್ಲವೆಂಬುದನ್ನು ನಾವಿಲ್ಲಿ ಸ್ಮರಿಸಿಕೊಂಡು, ನಮ್ಮವರು ಅಷ್ಟಾದರೂ ಈ ಕಲೆಯ ಪ್ರದರ್ಶನಕ್ಕೆ ಅವಕಾಶವಿತ್ತು, ಯಥಾಶಕ್ತಿಯಾಗಿ ಗಮಕಿಗಳನ್ನು ಗೌರವಿಸಿಕೊಂಡು ಬಂದುದಕ್ಕಾಗಿ ಅವರಿಗೆ ನಾಡಿನ ಗಮಕಿಗಳು ಅತ್ಯಂತ ಕೃತಜ್ಞರಾಗಿರಬೇಕಾಗಿದೆ. ಇಂತಹ ಸನ್ನಿವೇಶದಲ್ಲೂ ಅನೇಕ ಗಮಕಿಗಳು ತಮ್ಮ ಕಾವ್ಯವಾಚನದಿಂದಲೇ ಪ್ರಸಿದ್ಧಿಯನ್ನು ಪಡೆದವರಿದ್ದರೆಂಬುದನ್ನೂ ನಾವಿಲ್ಲಿ ಮರೆಯಲಾಗದು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ನಮ್ಮ ನುಡಿ–ನಾಡುಗಳ ಅಭ್ಯುದಯಕ್ಕಾಗಿ ಸಂತತವಾಗಿ ಶ್ರಮಿಸುತ್ತಿರುವ, ಕನ್ನಡ ನಾಡಿನ ಏಕೈಕ ಪ್ರತಿನಿಧಿ ಸಂಸ್ಥೆಯೆನಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ತಾಯಿಯ ವಾತ್ಸಲ್ಯದಿಂದ, ತನ್ನ ಅತ್ಯಂತ ಮುದ್ದಿನ ಮಗುವಾದ ಈ ಗಮಕ ಕಲೆಯ ಪುನರಭ್ಯುದಯಕ್ಕಾಗಿ, ತಾನೇ ಕಲಾವಿದರಿಗೆ ಪ್ರೋತ್ಸಾಹ ಕೊಡಲು ಮನಸ್ಸುಮಾಡಿ, ತನ್ನ ಮೂಲೋದ್ದೇಶಗಳಲ್ಲಿ ಈ ಕಲೆಯ ಮುನ್ನಡೆಯ ಗುರಿಯನ್ನೂ ಒಂದಾಗಿ ಸೇರಿಸಿಕೊಂಡಿತು.

ನಂತರ ೧೯೩೫ರಿಂದ ಮೊದಲು ಮಾಡಿ ಇಂದಿನವರೆಗೆ ಸಂತತವಾಗಿ ತನ್ನ ಆಶ್ರಯದಲ್ಲಿ ಪ್ರತಿ ವರ್ಷವೂ ಗಮಕ ತರಗತಿಗಳನ್ನು ನಡೆಸಿಕೊಂಡು ಬಂದಿರುವುದು. ಪರಿಷತ್ತಿನಲ್ಲೂ ಮತ್ತು ಅದರ ಆಶ್ರಯದಲ್ಲಿ ಮಡಿಕೇರಿ ಮತ್ತು ಇತರ ಕಡೆಗಳಲ್ಲೂ ನಡೆದಿರುವ ಗಮಕ ತರಗತಿಗಳಲ್ಲಿ ಹಲವು ಮಂದಿ ವಿದ್ಯಾರ್ಥಿಗಳು ಈ ಶಿಕ್ಷಣವನ್ನು ಪಡೆದಿರುತ್ತಾರೆ. ಪರಿಷತ್ತಿನಲ್ಲಿಯೇ ೧೯೪೮-೪೯ರ ವರೆಗೆ ೨೮೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಲಾವ್ಯಾಸಂಗವನ್ನು ಮಾಡಿರುವರೆಂದು ಪರಿಷತ್ತಿನ ವರದಿಯಿಂದ ತಿಳಿದುಬರುವುದು. ಈ ಮೇಲ್ಕಂಡ ಸಂಖ್ಯೆಯ ಪೈಕಿ ಕಲಾವ್ಯಾಸಂಗವನ್ನು ಮುಂದುವರಿಸಿಕೊಂಡುಬಂದು ನಾಡಿನಲ್ಲಿ ಕಲಾಸೇವೆಯನ್ನು ಸಲ್ಲಿಸುತ್ತಾ ಜನಮನ್ನಣೆಯನ್ನು ಪಡೆದಿರುವ ಹಲವು ಗಮಕವಿದ್ವಾಂಸರೂ ಸೇರಿರುತ್ತಾರೆ. ಹೀಗೆ ಪ್ರಾಯಶಃ ತಯಾರಾದ ವಿದ್ಯಾರ್ಥಿಗಳ ಪೈಕಿ ೨೮೦ ರಲ್ಲಿ ಒಂದು ಸೊನ್ನೆಯನ್ನು ಕಿತ್ತುಹಾಕಿದರೂ, ೨೮ ಮಂದಿಯಾದರೂ 'ಗಮಕಿಗಳಾಗಿರಬೇಕೆಂಬುದನ್ನು ನಾವು ಧಾರಾಳವಾಗಿ ಹೇಳಬಹುದು. (ಇವರೆಲ್ಲರೂ ಜೀವನೋಪಾಯಕ್ಕಾಗಿ ನಾಡಿನಲ್ಲಿ ಹಂಚಿಹೋಗಿರಬೇಕೆಂದೂ ನನಗೆ ಅನ್ನಿಸುತ್ತದೆ. ಈ ವಿಚಾರ ಇಲ್ಲಿ ಅಪ್ರಕೃತ)– ಅಲ್ಲದೆ, ದೇಶದಲ್ಲಿ ನುಡಿಯ ಅಭಿಮಾನವನ್ನು ಒಡಮೂಡಿಸಿ, ಬೆಳೆಸಿ, ನಮ್ಮ ಹಿಂದಿನ ಸಂಸ್ಕೃತಿಯ ದೀಪವನ್ನು ಮತ್ತೆ ಬೆಳಗುವಂತೆ ಮಾಡಲು, ಈ ಗಮಕ ಕಲೆಯೂ ಸಹ ಅತ್ಯಂತ ಸಮರ್ಥವಾದುದೆಂಬಂಶವನ್ನು ಮನಗಂಡ ಪರಿಷತ್ತು ಕಲಾಪ್ರಚಾರ ಕಾರ್ಯವನ್ನೂ ಗಮಕಿಗಳಿಂದ ೧೯೪೭ರ ವರೆಗೆ ಆಗಾಗ ಮಾಡಿಸುತ್ತಾ ಬಂದಿತು.

ಹೀಗೆ ಗಮಕ ತರಗತಿಗಳನ್ನು ತೆರೆದು ಕಲಾಭ್ಯಾಸವನ್ನು ಅಭಿಮಾನಿಗಳಿಗೆ ಮಾಡಿಸಿ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಉತ್ತೇಜನರೂಪವಾಗಿ, ಪ್ರಶಸ್ತಿ ಪತ್ರಗಳನ್ನು ಕೊಡುವ ಸಮಾರಂಭವನ್ನು ಇಟ್ಟುಕೊಂಡು ನಾಡಿನ ಗಣ್ಯಮಹನೀಯರ ಮತ್ತು ಸರ್ಕಾರದ ಅಧಿಕಾರಿಗಳ ಗಮನವನ್ನು ತಾನು

ಮಾಡುತ್ತಿರುವ ಈ ಪವಿತ್ರ ಕಾರ್ಯದ ಕಡೆಗೆ ಪರಿಷತ್ತು ಸೆಳೆಯುತ್ತಾ ಬಂದಿತು. ಪ್ರಕೃತ—

ಇಂದಿಗೆ ಬಹಳ ಹಿಂದೆಯೇ ಎಂದರೆ ಸುಮಾರು ಹದಿನಾರು ವರ್ಷಗಳ ಹಿಂದೆ, ಶ್ರೀ ಡಿ. ವಿ. ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ, ಆ ವರ್ಷದ ವಿದ್ಯಾರ್ಥಿಗಳಿಗೆ ಗಮಕ ಪ್ರಶಸ್ತಿ ಪತ್ರ ವಿತರಣ ಮಹೋತ್ಸವವನ್ನು ಆಗಿನ ವಿದ್ಯಾ ಇಲಾಖಾ ಡೈರೆಕ್ಟರವರಾಗಿದ್ದ ಕೀರ್ತಿಶೇಷ ಶ್ರೀ ಎನ್. ಎಸ್. ಸುಬ್ಬರಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಅಪ್ಪಣೆ ಕೊಡಿಸಿದ ವಿಷಯವನ್ನು ಇಲ್ಲಿ ತಮ್ಮೆಲ್ಲರ ಗಮನಕ್ಕೆ ತರಲು ಸಂತೋಷಿಸುತ್ತೇನೆ.

"ಕನ್ನಡ ಮುಂದಕ್ಕೆ ಬರಬೇಕು ಅಂತ ನನಗೆ ಬಹಳ ಆಶೆಯಿದೆ. ಈಗ ಸ್ಕೂಲುಗಳಲ್ಲಿ ಹುಡುಗರು ಕನ್ನಡದಲ್ಲಿ ಪಾಸಾಗುವುದಕ್ಕೆ ಎಷ್ಟು ನಂಬರು ಬರಬೇಕೋ ಅಷ್ಟಕ್ಕೆ ಮಾತ್ರ ಪ್ರಯತ್ನ ಮಾಡುತ್ತಾರೆ. ಕನ್ನಡದ ಕಡೆಗೆ ಹೆಚ್ಚು ಗಮನ ಕೊಡುವುದಿಲ್ಲ. ಹಾಗೆ ಮಾಡಬಾರದು. ಹುಡುಗರಿಗೆ ಕನ್ನಡದಲ್ಲಿ ಹೆಚ್ಚು ಆಸಕ್ತಿಯುಂಟಾಗುವಂತೆ ಆಗಬೇಕು. ಗಮಕ ಕಲೆ ಇದಕ್ಕೆ ಹೆಚ್ಚು ಸಹಾಯವನ್ನು ಮಾಡುತ್ತದೆ. ಆದ್ದರಿಂದ ಈ ಕಲೆ ಹೆಚ್ಚಾಗಿ ಬೆಳೆಯಬೇಕು. ಹೆಚ್ಚು ಪ್ರಚಾರವಾಗಬೇಕು. ಹುಡುಗರಿಗೆ ಇದನ್ನು ಮಿಡ್ಲ್ ಸ್ಕೂಲುಗಳಲ್ಲಿ ಕಲಿಸಬೇಕು." "ಗಮಕ ಕಲೆ ಹೀಗೆ ಮುಂದಕ್ಕೆ ಬರಬೇಕಾದರೆ, ಅದು ಸ್ಕೂಲಿನ ಉಪಾಧ್ಯಾಯರಿಗೆಲ್ಲ ಬಂದಿರಬೇಕು. ಇದಕ್ಕಾಗಿ ಟ್ರೈನಿಂಗ್ ಸ್ಕೂಲಿನ ವಿದ್ಯಾರ್ಥಿಗಳೂ ಈ ಗಮಕ ಕಲೆಯನ್ನು ಅಭ್ಯಾಸ ಮಾಡುವುದು ಒಳ್ಳೆಯದೆಂದು ನನಗೆ ತೋರುತ್ತದೆ. ಕಾಲಕ್ರಮದಲ್ಲಿ ಗಮಕ ವಿದ್ಯೆಯನ್ನು ಎಲ್ಲಾ ಪಾಠಶಾಲೆಗಳಲ್ಲಿಯೂ ಹೇಳಿಕೊಡುವುದು ಸಾಧ್ಯವಾಗುವಂತೆ ಉಪಾಧ್ಯಾಯರನ್ನು ತಯಾರು ಮಾಡುವುದಕ್ಕೋಸ್ಕರ ಮೊದಲು ಈಗ ನಾರ್ಮಲ್ ಸ್ಕೂಲುಗಳಲ್ಲಿ ಗಮಕ ಕಲೆಯನ್ನು ಉಪಾಧ್ಯಾಯರಿಗೆ ಹೇಳಿಕೊಡುವ ಏರ್ಪಾಟು ಆವಶ್ಯಕವಾಗಿದೆ. ಈ ವಿಚಾರವನ್ನು ನಾನು ಗಮನದಲ್ಲಿರಿಸಿಕೊಂಡಿದ್ದೇನೆ. ಮತ್ತು ವಿದ್ಯಾಭ್ಯಾಸದ ಇಲಾಖೆಗೆ ಈ ಭಾಗದಲ್ಲಿ ಸಹಾನುಭೂತಿಯುಂಟೆಂದು ಭರವಸೆ ಕೊಡಬಲ್ಲೆ."

ಹೀಗೆ ಆ ಮಹನೀಯರು ಗಮಕ ಕಲೆಯ ವ್ಯಾಪ್ತಿ ಮತ್ತು ಅದನ್ನು ಸದುಪಯೋಗಮಾಡಿಕೊಳ್ಳಬೇಕಾದ ವಿಚಾರದಲ್ಲಿ ಅಂದೇ ಕಲಾವಿದರಿಗೆ ಒಂದು ಅಭಯವನ್ನು ನೀಡಿದರು. ಆದರೆ ಈ ಮಹತ್ಕಾರ್ಯವು ಕಾರ್ಯರೂಪಕ್ಕೆ ಬರಲು, ಯಾವ ಪರಿಷತ್ತು ಈ ಕಲೆಯ ಪುನರುತ್ಥಾನಕ್ಕೆ ಮೂಲಕಾರಣವಾಯಿತೋ, ಅದೇ ಪರಿಷತ್ತೇ ಕಾರ್ಯಕ್ರಮವನ್ನು ಹಿಂದೆಯೇ ಕೈಕೊಂಡಿದ್ದ ಪಕ್ಷದಲ್ಲಿ ಬಹುಶಃ ಇಂದಿನ ದಿನದಲ್ಲಿ ಈ ಲೇಖನವು ಉದಯವಾಗಬೇಕಾಗಿರಲಿಲ್ಲವೆನ್ನಬಹುದು. ಆದರೆ, ಪರಿಷತ್ತು ಈ ವಿಷಯದಲ್ಲಿ ಮುಂದುವರಿದು ಸರ್ಕಾರದ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳೊಡನೆ ವ್ಯವಹಾರವನ್ನು ನಡೆಸಲು ಪ್ರಾಯಶಃ ಹಿಂದೆ, ಸಾಕಾದಷ್ಟು ಗಮಕಿಗಳ ಸಂಖ್ಯೆ ಇರಲಿಲ್ಲವೆಂದೂ ಹೇಳಬೇಕಾಗುವುದು.

ಈಗ ಹಾಗಿರದೆ, ಕಲೆಯ ಪ್ರಚಾರ, ಅಭ್ಯಾಸಗಳು ಪ್ರಗತಿ ಪಥದಲ್ಲಿ ಹದಿನೈದು ವರ್ಷಗಳಿಂದಲೂ ನಡೆಯುತ್ತಾ ಬಂದು ಗಮಕಿಗಳ ಸಂಖ್ಯೆಯು ಬೆಳೆದು ಬರುತ್ತಿದೆ. ಹಲವರು ಆ ಕಲೆಗೆ ಸರ್ಕಾರ-ಸಮಾಜಗಳಲ್ಲಿ ಸರಿಯಾದ ಸ್ಥಾನಮಾನಗಳು ಇದುವರೆಗೆ ಸಿಕ್ಕದಿರುವುದರಿಂದ, ಜೀವನ ನಿರ್ವಹಣೆಗಾಗಿ ಅನ್ಯೋಪಾಯವಿಲ್ಲದೆ, ವಿವಿಧವೃತ್ತಿಗಳನ್ನವಲಂಬಿಸಿ ಕಾಲಕ್ಷೇಪ ಮಾಡುತ್ತಿದ್ದಾರೆ. ಆದಕಾರಣ ಈ ಕಲಾವಿದರೆಲ್ಲರಿಗೂ ಯೋಗ್ಯವಾದ ರೀತಿಯಲ್ಲಿ ಸ್ಥಾನಮಾನಗಳನ್ನು ಕಲ್ಪಿಸಿ ಕಲೆಗೆ ಪ್ರೋತ್ಸಾಹವನ್ನು ಕೊಡುವ ವಿಚಾರದಲ್ಲಿ, ಪರಿಷತ್ತಿನವರು, ಅಂದು ಶ್ರೀ ಎನ್. ಎಸ್. ಸುಬ್ಬರಾಯರು ಹೇಳಿದ ಮಾತುಗಳು ಕಾರ್ಯಕಾರಿಯಾಗುವಂತೆ, ಇಂದಾದರೂ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸಿ, ಶೀಘ್ರವಾಗಿ ಪ್ರಯತ್ನಿಸಬೇಕೆಂದು ಕಲಾವಿದರ ಪರವಾಗಿ ಪರಿಷತ್ತಿನ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮೈಸೂರಿನ ಟ್ರೈನಿಂಗ್ ಕಾಲೇಜು ಮತ್ತು ಮಹಾರಾಣೀ ಟ್ರೈನಿಂಗ್ ಕಾಲೇಜಿನಲ್ಲಿ ನಮ್ಮ ವಿದ್ಯಾ ಇಲಾಖೆಯವರು (Bharata Reading Teacher) ಗಮಕಿಗಳ ಹುದ್ದೆಯನ್ನು ಕಲ್ಪಿಸಿದ್ದುದು ನನಗೆ ಚಿಕ್ಕಂದಿನಿಂದ ಜ್ಞಾಪಕವಿದೆ. ಆ ಹುದ್ದೆಗಳಲ್ಲಿ ಇಂದು ಕೆಲಸ ಮಾಡುತ್ತಿರುವವರು ಇಂದು ಗಮಕ ಶಿಕ್ಷಣವನ್ನು ಕೊಡುತ್ತಿರುವರೇ? ಎಂಬುದು ಸಂದೇಹವಾಗಿದೆ.

ಅಲ್ಲದೆ ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ನಾರ್ಮಲ್ ಸ್ಕೂಲುಗಳಲ್ಲಿಯೂ ಸಂಗೀತದ ಅಲೋಯನ್ಸ್ ಎಂದು ಮಾಹೆಯಾನಾ ಏಳೂವರೆ ರೂ. ಗಳ ಪ್ರಕಾರ ಕೊಟ್ಟು ಉಪಾಧ್ಯಾಯರಿಗೆ ಕಿಂಡರ್‌ಗಾರ್ಟೆನ್ ಪದ್ಧತಿಯ ಹಿಂದಿನ ಕಾಲದ ಹಾಡುಗಳನ್ನು ಹೇಳಿಸಿ

ಕೊಡಲು ವ್ಯವಸ್ಥೆ ಮಾಡಿದ್ದುದು ನನಗೆ ಜ್ಞಾಪಕವಿದೆ ಇದರಿಂದ ಯಾವ ಲಾಭವೂ ಉಭಯ ಉಪಾಧ್ಯಾಯರೂ ಆಗಿರುವಂತೆ ಕಂಡುಬರುವುದಿಲ್ಲ! ಇದಕ್ಕೆ ಬದಲಾಗಿ ಗಮಕಿಗಳನ್ನು ಈ ಸ್ಥಾನಗಳಲ್ಲಿ Full time teachers ಆಗಿ ನೇಮಿಸಿ ಕಡ್ಡಾಯವಾಗಿ ಗಮಕ ಶಿಕ್ಷಣವನ್ನು ಉಪಾಧ್ಯಾಯರಿಗೆ ಪ್ರಾಥಮಿಕ ಎರಡನೇ ತರಗತಿಯಿಂದ ಮೊದಲು ಮಾಡಿ, ಮಾಧ್ಯಮಿಕ ನಾಲ್ಕನೇ ತರಗತಿವರೆಗಿನ ಕನ್ನಡ ಪಠ್ಯ ಪುಸ್ತಕಗಳಲ್ಲಿರುವ ಪದ್ಯಗಳ ವಾಚನ ಕ್ರಮವನ್ನೂ, ಜೊತೆಗೆ ಈಗಿನ ವಿ.ಟಿ.ಸಿ. ತರಗತಿಗೆ ಇಟ್ಟಿರುವ ಪಠ್ಯ ವಿಷಯಗಳಲ್ಲಿನ ಪದ್ಯಭಾಗವನ್ನು ಓದುವ ರೀತಿಯನ್ನೂ ಮತ್ತು ಗಮಕಕಲೆಗೆ ಸಂಬಂಧಿಸಿದ ಶಾಸ್ತ್ರ ವಿಷಯಗಳನ್ನೂ ಬೋಧಿಸಬಹುದಾಗಿದೆ. ಗಮಕಿಗಳನ್ನು ಕನಿಷ್ಠಪಕ್ಷ ಅರುವತ್ತು ರೂಪಾಯಿಗಳ ಮಾಹೆಯಾನಾ ವೇತನದಿಂದ ಪ್ರಾರಂಭಿಸಿ ೬೦—೫—೧೦೦ ರೂ. ಗಳ ಅಂತಸ್ತಿನಲ್ಲಿ ನೇಮಿಸಿಕೊಳ್ಳಬಹುದೆಂದು ಸೂಚಿಸಬಯಸುತ್ತೇನೆ. ಹೀಗೆ ಮಾಡುವುದರಿಂದ ಗಮಕ ಕಲೆಗೆ ಒಂದು ಸ್ಥಾನವೂ ಕಲಾವಿದನಿಗೆ ಒಂದು ಮಾನ್ಯತೆಯೂ ದೊರಕಿದಂತಾಗುವುದು. ಹೀಗೆ ಉತ್ತೇಜನವನ್ನು ಕೊಟ್ಟಲ್ಲಿ ಕಲೆಯು ಇನ್ನೂ ಮುಂದುವರಿದು ನಾಡಿನಲ್ಲಿ ಗಮಕಿಗಳು ಅಧಿಕ ಸಂಖ್ಯೆಯಲ್ಲಿ ದೊರಕಿ ಕಾಲಕ್ರಮದಲ್ಲಿ ಎಲ್ಲಾ ದರ್ಜೆಯ ಪಾಠಶಾಲೆಗಳಲ್ಲಿಯೂ ಈ ಕಲೆಗೆ ಒಂದು ಸ್ಥಾನವನ್ನು (ಸಂಗೀತಕ್ಕಿರುವಂತೆಯೇ) ಕಲ್ಪಿಸಿಕೊಡಲು ನೆರವಾಗುವುದು.

ಹಿಂದಿನ ಗಮಕ ಗೋಷ್ಠಿಯಲ್ಲಿ, ಭಾರತವಾಚನ ಪ್ರವೀಣ ಶ್ರೀ. ಸಂ. ಗೋ. ಬಿಂದೂರಾಯರು, ತಮ್ಮ ಅಧ್ಯಕ್ಷ ಭಾಷಣದಲ್ಲಿ ಮೇಲ್ಕಂಡ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, "ನಮ್ಮ ನಾಡಿನ ಸಣ್ಣ ಮಕ್ಕಳು, ಸಣ್ಣಪುಟ್ಟ ಪದ್ಯಗಳನ್ನು ಮಧುರವಾಗಿ ಹಾಡುವುದರಿಂದ ಮೊದಲು ಮಾಡಿ, ಕಾವ್ಯಗಾಯನ ಮಾಡುವವರೆಗೆ ಅವರಲ್ಲಿ ಅಭಿರುಚಿ ಹುಟ್ಟುವಂತೆ ಮಾಡಬೇಕಾದುದು ನಮ್ಮ ಸರ್ಕಾರದವರ ಕರ್ತವ್ಯವಾಗಿದೆ" ಎಂದು ತಿಳಿಸಿದ್ದಾರೆ.

ಇಂದು ನಮ್ಮ ಪಾಠಶಾಲೆಗಳಲ್ಲಿ ನಡೆಯುತ್ತಿರುವ ಪದ್ಯಪಾಠವು ಬಹಳ ಸಪ್ಪೆಯಾಗಿದೆಯೆಂದು ಹೇಳಿದರೆ ಯಾರೂ ತಪ್ಪು ತಿಳಿಯಬಾರದು. ಆದರಲ್ಲಿಯೂ ಪಠ್ಯ ಪುಸ್ತಕದ ಪದ್ಯಗಳನ್ನು ಹೇಳಿಕೊಡಲು ಉಪಾಧ್ಯಾಯರು ಒಂದು ನಿರ್ದಿಷ್ಟ ಮಾರ್ಗವನ್ನನುಸರಿಸುತ್ತಿಲ್ಲ. ಅವರವರಿಗೆ ತೋರಿದ ರೀತಿ ರಾಗ ಅಥವಾ ಸರಾಗ-ಗಳಲ್ಲಿ ಮಕ್ಕಳಿಗೆ ಪದ್ಯಗಳನ್ನು ಹೇಳಿಕೊಡುತ್ತಿರುವುದಾಗಿದೆ. ಪದ್ಯಗಳನ್ನು ಕಂಠಪಾಠ ಮಾಡಿಸಿ ಚೆನ್ನಾಗಿ ಹೇಳಿಸುವ ರೂಢಿಯಂತೂ ಕನ್ನಡದಲ್ಲಿ ತಪ್ಪಿಯೇಹೋಗಿದೆಯೆನ್ನಬೇಕಾಗಿದೆ. ಹೀಗೆ ಗಮಕ ಶಿಕ್ಷಣವು ದೊರೆಯದ ಕಾರಣ ಉಪಾಧ್ಯಾಯರು ಸಹಸ್ರ ಮಾರ್ಗಗಳಲ್ಲಿ ಪದ್ಯಗಳನ್ನು ಬಾಲಕರಿಗೆ ಹೇಳಿಕೊಡುವಂತಾಗಿದೆ. ಇವುಗಳೇ ಅಲ್ಲದೆ ಇನ್ನೂ ಅನೇಕ ಸಾಮಾನ್ಯ ಕಾರಣಗಳಿಂದ ಇಂದು ಮೇಲ್ಕಂಡ ಲೋಪವನ್ನು ಸರಿಪಡಿಸಲು ಗಮಕ ಶಿಕ್ಷಣವನ್ನು ಪ್ರಾರಂಭದಲ್ಲಿ ಈಗ ಇರುವ ಎಲ್ಲಾ ಉಪಾಧ್ಯಾಯ ಶಿಕ್ಷಣ ಕೇಂದ್ರದಲ್ಲಿಯೂ ಕಡ್ಡಾಯವಾಗಿ ಆಚರಣೆಗೆ ತರುವಂತೆ, ಸರ್ಕಾರದವರನ್ನು ನಮ್ಮ ಪರಿಷತ್ತು ಒತ್ತಾಯಪಡಿಸಿ, ಗಮಕ ಕಲೆಯ ಈ ಒಂದು ಕಾರ್ಯವನ್ನು ಸಾಧಿಸಿ, ಗಮಕಿಗಳಿಗೆ ಬೆಂಬಲವನ್ನು ನೀಡಬೇಕಾಗಿದೆ.

ಇಂದು ನಮ್ಮೆಲ್ಲರ ಸುದೈವದಿಂದ ಪರಿಷತ್ತಿನ ಅಧ್ಯಕ್ಷಸ್ಥಾನದಲ್ಲಿರುವ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ಸ್ವತಃ ವಿದ್ಯಾ ಇಲಾಖೆಯಲ್ಲಿ ಹಲವು ವಿಧದಲ್ಲಿ ಸೇವೆಯನ್ನು ಸಲ್ಲಿಸಿರುವ ಮಹನೀಯರಾಗಿದ್ದಾರೆ. ಅಲ್ಲದೆ ಉಪಾಧ್ಯಾಯ ಶಿಕ್ಷಣ ಕೇಂದ್ರದ ಮುಖ್ಯಾಧಿಕಾರಿಗಳಾಗಿದ್ದು ಮಕ್ಕಳ ಶಿಕ್ಷಣದ ವಿಚಾರದಲ್ಲಿ ಅಪಾರ ಅನುಭವಗಳನ್ನು ಪಡೆದವರಾಗಿದ್ದಾರೆ. ಮೇಲಾಗಿ ಗಮಕ ಕಲೆಯಲ್ಲಿ ಇವರಿಗೆ ಅತ್ಯಂತ ಅಭಿಮಾನ ಆಸಕ್ತಿಗಳಿವೆ. ಉಪಾಧ್ಯಾಯರಿಗೆ ಈ ಗಮಕ ಕಲೆಯ ಶಿಕ್ಷಣವು ಎಷ್ಟು ಅಗತ್ಯವಿದೆಯೆಂಬುದರ ವಿಷಯವನ್ನು ಇವರು ನಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಮನಗಂಡಿರುತ್ತಾರೆ.

ಆದಕಾರಣ ಈ ಮಹನೀಯರ ದೆಸೆಯಿಂದಲೇ ಈ ಮಹತ್ಕಾರ್ಯವು ಸಾಧಿಸಲ್ಪಟ್ಟು ಗಮಕ ಕಲೆಗೆ ಹೆಚ್ಚು ಪ್ರೋತ್ಸಾಹ ಸಿಕ್ಕುವಂತಾಗಲೆಂದು ನಾನು ಹಾರೈಸುತ್ತೇನೆ.*

---

* ಬೇಲೂರಿನಲ್ಲಿ ನಡೆದ ೩೫ನೆಯ ಸಾಹಿತ್ಯ ಸಮ್ಮೇಳನದ ಗಮಕ ಗೋಷ್ಠಿಯಲ್ಲಿ ಓದಿದ ಲೇಖನ.

ವಿಮರ್ಶೆ ಮತ್ತು ಸ್ವೀಕಾರ

ಕುಟ್ಟಿದೊಣ್ಣೆ : (ಕಥಾಸಂಕಲನ) ಲೇಖಕರು. ಶ್ರೀ ಎಮ್. ಸುಬ್ರಾಯನ್, ಪ್ರಕಾಶಕರು, ವಿವೇಕ ಸಾಹಿತ್ಯಮಾಲೆ, ಡಿ. ನಂಬ್ರ ೬-೪೧, ಮಣ್ಣಗುಡ್ಡೆ, ಮಂಗಳೂರು-೩. ಕ್ರೌನ್ ಅ. ಪು. ೬೬. ಬೆಲೆ ೧—೦—೦.

ಈ ಪುಸ್ತಕದಲ್ಲಿ ಹನ್ನೊಂದು ಕಿರುಗತೆಗಳಿವೆ. ಒಂದೆರಡು ಕತೆಗಳನ್ನು ಬಿಟ್ಟು ಉಳಿದವೆಲ್ಲವೂ ಮಂಗಳೂರಿನ 'ಪ್ರಭಾತ' ಮತ್ತು 'ನವಭಾರತ' ಮುಂತಾದ ಪತ್ರಿಕೆಗಳಲ್ಲಿ ಹಲವಾರು ವರ್ಷಗಳ ಹಿಂದೆಯೇ ಬೆಳಕು ಕಂಡಿವೆ. ಅವುಗಳನ್ನೆಲ್ಲಾ ಒಟ್ಟಿಗೆ ಸಂಗ್ರಹಿಸಿ ಈಗ ಗ್ರಂಥರೂಪದಲ್ಲಿ ಪ್ರಕಟಿಸಲಾಗಿದೆ.

'ಹಲವುಬಗೆಯ ಸಾಮಾಜಿಕ ಚಿತ್ರಗಳನ್ನು ಈ ಹೊತ್ತಗೆಯಲ್ಲಿ ಕಾಣಬಹುದು. ಮಾನವ ಜೀವನದ ಕೆಲವು ಸಮಸ್ಯೆಗಳನ್ನು ಈ ಕತೆಗಳಲ್ಲಿ ಕಥಾವಸ್ತುವಾಗಿರಿಸಿ ವಿವೇಕದ ಬೆಳಕನ್ನು ನೀಡುವುದಕ್ಕೆ ಯತ್ನಿಸಲಾಗಿದೆ, ಎಂಬುದಾಗಿ ಸಂಪಾದಕರು ತಮ್ಮ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಸಂಪಾದಕರ ಈ ಮಾತುಗಳು ಉತ್ಪ್ರೇಕ್ಷೆಯಿಂದ ಕೂಡಿವೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಗ್ರಂಥಾವಲೋಕನ ಮಾಡುವ ಯಾರಿಗೇ ಆಗಲಿ, ಸಂಪಾದಕರು ಹೇಳಿಕೊಂಡಿರುವಂತಹ, 'ಮಾನವ ಸಮಸ್ಯೆಗಳ' ಅರಿವಾಗಲಿ, 'ವಿವೇಕದ ಬೆಳಕಾಗಲಿ' ದೊರೆಯಲಾರದು.

ಕಥಾವಸ್ತು, ರಚನಾಸಂವಿಧಾನ, ಮತ್ತು ಪಾತ್ರಸೃಷ್ಟಿ, ಈ ಯಾವ ದೃಷ್ಟಿಯಿಂದ ವಿವೇಚಿಸಿದರೂ ಈ ಈ ಪುಸ್ತಕದಲ್ಲಿರುವ ಬರೆಹಗಳನ್ನು "ಕತೆಗಳು" ಎಂಬ ಶೀರ್ಷಿಕೆಯ ಕೆಳಗೆ ಬರಲು ಸಾಧ್ಯವೇ ಇಲ್ಲ. ಯಾವ ಬರೆಹದಲ್ಲೂ ನಿರ್ದಿಷ್ಟವಾದ ಕಥಾವಸ್ತುವಾಗಲಿ, ಸಂವಿಧಾನ ಕೌಶಲವಾಗಲಿ, ಪಾತ್ರಪೋಷಣೆಯಾಗಲಿ ಕಂಡುಬರುವುದಿಲ್ಲ. ಈ ಬರಹಗಳು ಲೇಖಕರ ಪ್ರಥಮಪ್ರಯತ್ನವೆಂದು ಸುಲಭವಾಗಿ ಊಹಿಸಬಹುದು. ಇಂತಹ ಅಪಕ್ವ ಕೃತಿಗಳನ್ನು ಪ್ರಕಟಿಸಲು ಹಾತೊರೆಯುವುದನ್ನು ಬಿಟ್ಟು ಅವರು ತಮ್ಮ ಬರವಣಿಗೆಯ ಅಭ್ಯಾಸ, ಜೀವನಾನುಭವ ಇವುಗಳನ್ನು ಬೆಳೆಸಿಕೊಂಡು ಕಥಾರಚನೆಗೆ ಕೈ ಹಚ್ಚಬೇಕೆಂದು ಸೂಚಿಸಬಯಸುತ್ತೇವೆ.

ದೇಶವೇ ಅವರ ತಾಯಿ: ಲೇಖಕರು: ಶ್ರೀ ಹೊಯಿಸಳ, ಪ್ರಕಾಶಕರು: ಕಾವ್ಯಾಲಯ, ಮೈಸೂರು. ಕ್ರೌನ್ ಅ. ಪು. ೧೦೦ ಬೆಲೆ ೧—೪—೦.

ಶಿಶುಗೀತೆಗಳ ಮತ್ತು ಪುಟಾಣಿ ಕತೆಗಳ ಅನೇಕ ಸಂಕಲನಗಳನ್ನು ಪ್ರಕಟಿಸಿ ಶಿಸುಸಾಹಿತ್ಯಕ್ಕೆ ಅಮೂಲ್ಯವಾದ ಸೇವೆ ಸಲ್ಲಿಸುತ್ತಿರುವ ಶ್ರೀ ಹೊಯಿಸಳರು ಕನ್ನಡನಾಡಿನ ಮಕ್ಕಳಿಗೆ ಮತ್ತೊಂದು ಹೊಸ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಈ ಕಥಾಸಂಕಲನದಲ್ಲಿ ೩೦ ಪುಟಾಣಿ ಕತೆಗಳಿವೆ. ಕತೆಗಳಲ್ಲಿ ವಸ್ತು ವೈವಿಧ್ಯವಿದೆ. ಎಲ್ಲ ಕತೆಗಳೂ ಮನೋರಂಜಕವಾಗಿಯೂ ನೀತಿಬೋಧಕವಾಗಿಯೂ ರಚಿಸಲ್ಪಟ್ಟಿವೆ. ಸಣ್ಣಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಸರಳವಾದ ಶೈಲಿಯನ್ನು ಲೇಖಕರು ಬಳಸಿದ್ದಾರೆ. ಕನ್ನಡನಾಡಿನ ಬಾಲಕರೆಲ್ಲರೂ ಓದಬೇಕಾದ ಮತ್ತು ಎಲ್ಲಾ ಪ್ರೈಮರೀ ಶಾಲೆಗಳ ಪುಸ್ತಕಾಲಯಗಳಲ್ಲೂ ಅಗತ್ಯವಾಗಿ ಇರಬೇಕಾದ ಪುಸ್ತಕ.

ಸ್ವರ್ಗಬಂಧು: ಲೇಖಕರು: ಶ್ರೀ ಎಸ್. ಎಮ್. ಚಿನ್ನಪ್ಪ, ಉಪಾಧ್ಯಾಯರು, ಗಾ॥ ಮಿಡ್ಲ್‌ಸ್ಕೂಲ್, ಯಶವಂತಪುರ, ಬೆಲೆ ೦—೨—೦.

ತಮ್ಮ ಪಾಠಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪ್ರಾರ್ಥನಾ ಪದ್ಯಗಳನ್ನು ರಚಿಸಬೇಕೆಂಬ ಆಶೆ ಅಂಕುರವಾಗಿ 'ದೇವಾದಿದೇವನೆ' 'ಜ್ಞಾನಾದಿದೇವಿಯೆ' ಎಂಬ ಗೀತೆಗಳನ್ನು ರಚಿಸಿ ಅವುಗಳನ್ನು ಶಾಲಾ ಬಾಲಕರಿಂದ ಹಾಡಿಸಿ ಕೇಳಿ ಆನಂದಿಸಿರುವುದಾಗಿ ಲೇಖಕರು ತಮ್ಮ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಮೇಲೆ ಹೇಳಿದ ಪ್ರಾರ್ಥನಾ ಪದ್ಯಗಳಲ್ಲದೆ 'ಬಾಪೂಜಿ' ಅಥವಾ 'ಸ್ವರ್ಗಬಂಧು' ಮತ್ತು 'ಧೀರ ಸರದಾರ್' ಮುಂತಾದ ರಾಷ್ಟ್ರನಾಯಕರನ್ನು ಕುರಿತು ರಚಿಸಲ್ಪಟ್ಟ ಕವನಗಳೂ ಈ ಸಂಗ್ರಹದಲ್ಲಿವೆ.

ಸುಖವಿಪ್ಲವ:— (ಕಾದಂಬರಿ) ಲೇಖಕರು: ಶ್ರೀ ರಾ. ಸು. ಮಣಿ, ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು. ಕ್ರೌನ್ ಅ. ಪ್ರ. ೬೩೪. ಬೆಲೆ: ರೂ. ೧-೮-೦

ಕೃಷ್ಣಾಪುರದ ಜಮೀನ್ದಾರ ವೈದ್ಯನಾಥ ಕೇವಲ ಜಮೀನ್ದಾರನಷ್ಟೇ ಅಲ್ಲ. ವಿದ್ಯಾವಂತನೂ ಹೌದು.

'ಸಾಹಿತ್ಯವಿಶಾರ'ದ ಬೇರೆ. ಮೈಸೂರಿನ ಕಾಲೇಜಿನಲ್ಲಿ ಉಪಾಧ್ಯಾಯ. ವೇದವತಿ ಈತನ ತಾಯಿ. ವಿಧಿವಶೆ. ವೈದ್ಯನಾಥನ ದುರದೃಷ್ಟ ಅವನ ಅಚ್ಚುಮೆಚ್ಚಿನ ಮಡದಿ ವಾಸಂತಿ ಎನೀಮಿಯ ಕಾಯಿಲೆಯಿಂದ ನರಳಿ ಅಕಾಲ ಮರಣಕ್ಕೆ ಈಡಾಗುವಳು. ಪ್ರಿಯ ಮಡದಿಯ ವಿಯೋಗದಿಂದ ವೈದ್ಯನಾಥನ ಬಾಳು ನೈರಾಶ್ಯಮಯವಾಯಿತು. ವಾಸಂತಿ ತನ್ನ ಕುರುಹಾಗಿ ಜಾನಕಿ, ರಂಗಮಣಿ, ಎಂಬ ಇಬ್ಬರು ಹೆಣ್ಣು ಮಕ್ಕಳನ್ನು ಬಿಟ್ಟು ಹೋಗಿದ್ದಳು. ಅವರಿಬ್ಬರೂ ವಿವಾಹವಾಗಿ ತಮ್ಮತಮ್ಮ ಪತಿಗೃಹಗಳಲ್ಲಿ ಸುಖವಾಗಿ ಸಂಸಾರ ನಡೆಸುತ್ತಿದ್ದರು.

ವಿಧುರನಾದ ವೈದ್ಯನಾಥನಿಗೆ ಜೀವನದಲ್ಲಿ ನೆಮ್ಮದಿಯಿರಲಿಲ್ಲ. ವಾಸಂತಿಯ ಅಕಾಲಮರಣದಿಂದ ಅವನ ದಾಂಪತ್ಯ ಜೀವನದ ಹಸಿವು ಸಂಪೂರ್ಣವಾಗಿ ಆರಿಲ್ಲ. ಎಂತಲೇ ದ್ವಿತೀಯ ವಿವಾಹದ ಸನ್ನಾಹದಲ್ಲಿ ತೊಡಗುವನು. ಮಗನ ಈ ಗುಪ್ತ ಬಯಕೆಗೆ ಪುಟಗೊಟ್ಟು ಅವನ ಪುನರ್ವಿವಾಹಕ್ಕೆ ಒತ್ತಾಸೆಯನ್ನೀಯುವಳು ತಾಯಿ ವೇದವತಿ. ತಂದೆಯ ಈ ದ್ವಿತೀಯ ವಿವಾಹ ಜಾನಕಿ ರಂಗಮಣಿಯರಲ್ಲಿ ಅಸಮಾಧಾನದ ಕಿಚ್ಚನ್ನು ಹೊತ್ತಿಸಿದುದು ಮಾತ್ರವಲ್ಲದೆ ತಂದೆಯ ಬಗ್ಗೆ ಅವರಲ್ಲಿ ತಿರಸ್ಕಾರವನ್ನೂ ಹುಟ್ಟಿಸಿತು. ಇದೇ ಕಾರಣದಿಂದ ತಂದೆ ಮಕ್ಕಳು ದೂರವಾಗುತ್ತ ಬಂದರು. ಹಳ್ಳಿಯ ಮುಗ್ಧಕನ್ಯೆ ಪುಷ್ಪ ವೈದ್ಯನಾಥನ ಮಡದಿಯಾದಳು. ವೈದ್ಯನಾಥ ವಿದ್ಯಾವಂತ. ರಸಿಕ. ಪುಷ್ಪ ತನಗೆ ತಕ್ಕ ಮಡದಿಯಾಗಬೇಕೆಂಬ ಉತ್ಕಟೇಚ್ಛೆಯಿಂದ ನಿರಕ್ಷರ ಕುಕ್ಷಿಯಾದ ಪುಷ್ಪಳ ಸುಧಾರಣೆಗೆ ತೊಡಗಿದ. ಹಲವಾರು ತಿಂಗಳಲ್ಲೇ ಅವಳನ್ನು ಅವಳೆ ಗಂಡನ ಹತ್ತಿರ ಹೇಳಿಕೊಳ್ಳುವಂತೆ, "ನಾನು ಈ ಪ್ರಪಂಚದ ಕಾಡಿನ ಒಂದು ಶುಷ್ಕಲತೆಯಲ್ಲಿ ಹುಟ್ಟಿ, ಕರತು ಉದುರಿ ಹೋಗುತ್ತಿದ್ದ ಒಂದು ಹೂ. ನನ್ನ ಭಾಗಕ್ಕೆ ನೀವು ದೇವರ ಹಾಗೆ ಬಂದು ನನ್ನ ಪ್ರೇಮದ ಅಂಜಲಿಯನ್ನು ಸ್ವೀಕರಿಸಿ, ಅಮೃತ ಹಾಕಿ, ಅದನ್ನು ಪ್ರಫುಲ್ಲ ಮಾಡಿದಿರಿ. ಎಲ್ಲ ಸ್ವರ್ಣರೇಖೆಗಳಿಂದಲೂ ಶೃಂಗರಿಸಿದಿರಿ. ಅತ್ಯುತ್ತಮ ಸ್ತ್ರೀಯನ್ನಾಗಿ ಮಾಡಿದಿರಿ" ಒಬ್ಬ ಸುಸಂಸ್ಕೃತ ಸ್ತ್ರೀಯಳನ್ನಾಗಿ ಪರಿವರ್ತಿಸಿ, ವಿದ್ಯಾವಂತಳನ್ನಾಗಿ ಮಾಡಿ, ಕಲಾವಿದೆಯನ್ನಾಗಿಸಿದಿರಿ. ಪುಷ್ಪಳ ಜೀವನದಲ್ಲುಂಟಾದ ಈ ಸುಧಾರಣೆಯಿಂದ ವೈದ್ಯನಾಥನ ಜೀವನದಲ್ಲಿ ಸಂತೋಷ ಸಂತೃಪ್ತಿಗಳು ತಾಂಡವಾಡತೊಡಗಿದವು. ಆದರೆ ಜೀವನದ ಹಾದಿ ಕೇವಲಮುಳ್ಳಿನ ಹಾಸಿಗೆಯಲ್ಲವಲ್ಲ! ಪುಷ್ಪ ಗರ್ಭವತಿಯಾದಳು. ವಂಶೋದ್ಧಾರಕನಾದ ಪುತ್ರನಿಗೆ ಜನ್ಮವಿತ್ತಳು. ಪುತ್ರಸಂತಾನದ ವಾರ್ತೆಯನ್ನು ಕೇಳಿ ಉಂಟಾದ ಆನಂದಾತಿರೇಕದಲ್ಲಿ ಹೃದಯಕ್ರಿಯೆ ನಿಂತು ಪ್ರಾಣನೀಗಿದ ವೈದ್ಯನಾಥ. ಅನಿರೀಕ್ಷಿತವಾದ ಪತಿಯ ಮರಣದ ದಾರುಣದುಃಖವನ್ನು ಸಹಿಸಲಾರದೆ ತನ್ನ ಬಾಳನ್ನು ಕೊನೆಗಾಣಿಸುವಳು. ಇದಿಷ್ಟು ಈ ಕಾದಂಬರಿಯ ಕಥಾವಸ್ತು.

ಕಾದಂಬರಿಯ ಕಥಾವಸ್ತುವಿನಲ್ಲಿ ಮೊದಲಿಂದ ಕೊನೆಯುವರೆವಿಗೂ ಕೃತಕತೆ ಎದ್ದು ಕಾಣುತ್ತದೆ. ಕತೆಯಲ್ಲಿನ ಘಟನೆಗಳಾಗಲಿ, ಸನ್ನಿವೇಶಗಳಾಗಲಿ, ಸಹಜವಾಗಿ ಚಿತ್ರಿಸಲ್ಪಟ್ಟಿಲ್ಲ. ಮಗ ಹುಟ್ಟಿದ ಸಂತೋಷ ವಾರ್ತೆಯನ್ನು ಕೇಳಿ ತಂದೆಯಾದವನು ಎದೆಯೊಡೆದು ಸಾಯುವ ಸನ್ನಿವೇಶವಂತೂ ಕೇವಲ ನಾಟಕೀಯವಾಗಿದೆ. ಲೇಖಕರ ಶೈಲಿ ತಡೆತಡೆದು ಸಾಗುತ್ತದೆ. ಕಾದಂಬರಿಗೆ ಬೇಕಾದ ಹರಿತವಾದ ಹಾಗೂ ನಿರರ್ಗಳವಾದ ಸರಳಶೈಲಿ ಈ ಲೇಖಕರಿಗೆ ಇನ್ನೂ ಕರಗತವಾಗಿಲ್ಲ. ಅವರು ಬಳಸಿರುವುದು ಗ್ರಂಥಸ್ಥವಾದ ಭಾಷೆ. ಕತೆಯನ್ನೋದುತ್ತಿರುವಾಗ ಇದು ಯಾವುದಾದರೂ ಬಂಗಾಳೀ ಅಥವಾ ಹಿಂದೀ ಕಾದಂಬರಿಯ ಭಾಷಾಂತರವೇನೊ ಎಂಬಂತೆ ಭಾಸವಾಗುತ್ತದೆ.

ವೈದ್ಯನಾಥನ ವ್ಯಕ್ತಿತ್ವವಾಗಲಿ ಪುಷ್ಪಳ ವ್ಯಕ್ತಿತ್ವವಾಗಲೀ ಸಾಕಷ್ಟು ಪರಿಣಾಮಕಾರಿಯಾಗಿ ಚಿತ್ರಿತವಾಗಿಲ್ಲ. ಕಾದಂಬರಿಯಲ್ಲಿನ ಯಾವ ಪಾತ್ರವೂ ಓದುಗರ ಮನಸ್ಸಿನಲ್ಲಿ ಚಿರಕಾಲ ನಿಲ್ಲುವ ಹಾಗೆ ಸತ್ವಪೂರ್ಣವಾಗಿ ಚಿತ್ರಿಸಲ್ಪಟ್ಟಿಲ್ಲ. ಈ ಲೇಖಕರು ಇನ್ನೂ ಹೆಚ್ಚಿನ ಪರಿಶ್ರಮವನ್ನು ಪಡೆದುಕೊಂಡು ಉತ್ತಮ ಕೃತಿಗಳನ್ನು ನೀಡಲೆಂದು ಹಾರೈಸುತ್ತೇವೆ.

ಹತೀವರ್ ತಾಯರ್ (ಉಜ್ವಲ ತ್ಯಾಗ) (ಏಕಾಂಕ ನಾಟಕ.) ಲೇಖಕರು: ಶ್ರೀ ಬಿ. ಎಸ್. ರಾಮಸ್ವಾಮಿ ಐಯಂಗಾರ್, ಬಿ.ಎ., ಪ್ರಕಾಶಕರು: ನವಚೇತನ ಪ್ರಕಟನಾಲಯ, ಬಸವನಗುಡಿ, ಬೆಂಗಳೂರು ೪. ಫುಲ್ಸ್‌ಸ್ಕೇಪ್ ಅಷ್ಟದಳದ ೨೦ ಪುಟಗಳು. ಬೆಲೆ ೦—೪—೬.

ಇದೊಂದು ಪುಟ್ಟ ಏಕಾಂಕ ನಾಟಕ. ಈಗಾಗಲೇ 'ಲೋಭಿ' 'ವಿಧಿ' 'ಗ್ರಹಚಾರ' 'ವ್ಯಾಮೋಹ' ಮುಂತಾದ ಸಾಮಾಜಿಕ ನಾಟಕಗಳನ್ನು ರಚಿಸಿರುವ ಶ್ರೀ ಬಿ. ಎಸ್. ರಾಮಸ್ವಾಮಿ ಐಯ್ಯಂಗಾರ್ಯರು ಇದರ

ಲೇಖಕರು. ದಕ್ಷಿಣ ಅರೇಬಿಯದಲ್ಲಿ ಏಮಾನ್ ಎಂಬ ಒಂದು ಪಂಗಡದ ಅಧಿಪತಿ ಹತೀಮ್. ಅತಿಥಿ ಸತ್ಕಾರಕ್ಕೂ, ದಾನಧರ್ಮಗಳಿಗೂ ಹೆಸರಾದ ವ್ಯಕ್ತಿ ಹತೀಮ್. ತನ್ನ ಪ್ರಚಂಡ ಬಲಿದಾನಗಳಿಗೆ ಇಡೀ ಅರೇಬಿಯದಲ್ಲೆಲ್ಲಾ ಪ್ರಖ್ಯಾತಿ ಪಡೆದಿದ್ದ. ರೊಮ್ ದೇಶದ ಸುಲ್ತಾನನು ಹತೀಮನ ಸತ್ವಪರೀಕ್ಷೆ ಮಾಡುವ ಉದ್ದೇಶದಿಂದ, ಅವನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ಅವನ ದಿವ್ಯಾಶ್ವವನ್ನು ತನಗೆ ಕೊಟ್ಟುಬಿಡಬೇಕೆಂದು ತನ್ನ ರಾಯಭಾರಿಯ ಮೂಲಕ ಹತೀಮನಿಗೆ ಹೇಳಿಕಳಿಸುವನು. ಹತೀಮ್ ಅತಿಥಿ ಸತ್ಕಾರ ಮಾಡಿ ಅವರನ್ನು ಸಂತೃಪ್ತಿಗೊಳಿಸುವನು. ನಡೆದ ಕತೆಯೆಲ್ಲವನ್ನೂ ಹತೀಮನೇ ರಾಯಭಾರಿಗೆ ತಿಳಿಸುವನು. ರಾಯಭಾರಿ ಹತೀಮನನ್ನು ಅವನ ಉಜ್ವಲ ತ್ಯಾಗಕ್ಕಾಗಿ ಬಾಯಿತುಂಬ ಹೊಗಳಿ ತನ್ನ ರಾಜಧಾನಿಗೆ ಹಿಂದಿರುಗುವನು.

ಇದಿಷ್ಟು ಈ ಏಕಾಂಕ ನಾಟಕದ ಕತೆ. ಈ ನಾಟಕ ಶಾಲಾಬಾಲಕರ ಅಭಿನಯಕ್ಕಾಗಿ ರಚಿಸಲ್ಪಟ್ಟಿದೆ. ನಾಟಕ ಸರಳಪ್ರದವಾಗಿಯೂ ರಚಿಸಲ್ಪಟ್ಟಿದೆ. ಆದರೆ ಸ್ವಗತಭಾಷಣಗಳು ಸಣ್ಣ ಬಾಲಕರ ಮಟ್ಟಕ್ಕೆ ಮೀರಿ ಬಹಳ ಉದ್ದವಾಗಿವೆ. ಅವು ಆದಷ್ಟು ಚಿಕ್ಕದಾಗಿರಬೇಕು. ಬಾಲಕರು ಬಾಯಿಪಾಠ ಮಾಡಲು ಸುಲಭವಾಗಿರಬೇಕು. ಲೇಖಕರು ತಮ್ಮ ಮುಂದಿನ ನಾಟಕಗಳಲ್ಲಿ ಈ ಅಂಶದಕಡೆ ಹೆಚ್ಚು ಗಮನ ಕೊಟ್ಟರೆ ಒಳ್ಳೆಯದು ತ್ತೇವೆ ಅವರು ಇದೇರೀತಿ ನೀತಿ ಪ್ರಧಾನವಾಗಿರತಕ್ಕ ಸಣ್ಣಸಣ್ಣ ಏಕಾಂಕಗಳನ್ನು ಪ್ರಕಟಿಸಿ, ಬಾಲಸಾಹಿತ್ಯದ ಸಂಪತ್ತನ್ನು ಹೆಚ್ಚಿಸಲೆಂದು ಹಾರೈಸುತ್ತೇವೆ.

—ತ್ರಿವಿಕ್ರಮ.

ಸ್ವೀಕಾರ

ಭಾರತ ದರ್ಶನ:— (ಚರಿತ್ರೆ) (ಸಂಪೂರ್ಣ ಪ್ರತಿ) ಬರೆದವರು: ಶ್ರೀ ಜವಹರಲಾಲ್ ನೆಹರು ಅವರು; ಅನುವಾದಕರು: ಶ್ರೀ ಸಂ. ವಾ. ಕೃಷ್ಣಮೂರ್ತಿರಾವ್ ಅವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು. ರಾಯಲ್ ೧/೮ರ ಆಕಾರ; ಪುಟ: ೫೧೫. ಬೆಲೆ: ರೂ. ೧೧-೦-೦

ಕುಣಿಗಲ್ ರಾಮಾಶಾಸ್ತ್ರಿಗಳ ಚರಿತ್ರೆ:— (ಜೀವನ ಚರಿತ್ರೆ) ಬರೆದವರು: ಶ್ರೀ ಎಂ. ಎಸ್. ಪುಟ್ಟಣ್ಣ ಅವರು; ಪ್ರಕಾಶಕರು: ಕಾವ್ಯಾಲಯ ಪ್ರಕಾಶಕರು ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ: ೧೪೧. ಬೆಲೆ: ರೂ. ೨-೪-೦

ಯಾಜುಷೀ ಗೃಹ್ಯ ಬೋಧಿನೀ:— ಸಂಪಾದಕರು: ಶ್ರೀ ಮ. ಗಂಗಾಧರಮೂರ್ತಿನಾ ಅವರು; ಪ್ರಕಾಶಕರು: ವೇದಶಾಸ್ತ್ರೋಜ್ಜೀವಿನೀ ಸಭಾಯಾಃ ಪ್ರಕಟನಾಲಯ; ಡೆಮ್ಮಿ ಎಂಟರ ಆಕಾರ; ಪುಟ: xxvii + ೧೪ + ೪೯೬. ಬೆಲೆ: ರೂ. ೧೦-೦-೦

ಪ್ರತಿಷ್ಠಾವಿಧಿ:— (ಕಾಶ್ಯಪ ಶಿಲ್ಪೋಕ್ತಃ) ಸಂಪಾದಕರು: ಶ್ರೀ ಮ. ಗಂಗಾಧರಮೂರ್ತಿ; ಪ್ರಕಾಶಕರು: ವೇದಶಾಸ್ತ್ರೋಜ್ಜೀವಿನೀ ಸಭಾಯಾಃ ಪ್ರಕಟನಾಲಯ; ಡೆಮ್ಮಿ ಎಂಟರ ಆಕಾರ; ಪುಟ: ೪೮. ಬೆಲೆ: ರೂ. ೧-೦-೦

ಶ್ರಾದ್ಧತರ್ಪಣವಿಧಿ:— (ವೇದಸ್ವರ ಚಿಹ್ನಾಂಕಿತಃ) ಸಂಪಾದಕರು: ಶ್ರೀ ಮ. ಗಂಗಾಧರ ಮೂರ್ತಿಗಳು; ಪ್ರಕಾಶಕರು: ಶ್ರೀ ವೇದಶಾಸ್ತ್ರೋಜ್ಜೀವಿನೀ ಸಭಾ, ಮೈಸೂರು. ಡೆಮ್ಮಿ ಎಂಟರ ಆಕಾರ; ಪುಟ: ೮೮. ಬೆಲೆ: ರೂ. ೧-೮-೦

ಬಾಳುವೆಯ ಮಡಿಲಲ್ಲಿ:— (ಕಾದಂಬರಿ) ಬರೆದವರು: ಶ್ರೀ ಕೆ. ರಾಮಚಂದ್ರಾಚಾರ್ ಅವರು; ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ: ೨೭೩. ಬೆಲೆ: ರೂ. ೩-೪-೦

ಮಿಶ್ರ ಸ್ತೋತ್ರದ ವಚನ:— ಸಂಪಾದಕರು: ಹೊಸಹಳ್ಳಿಯ ಸಂಸ್ಥಾನದ ಮಠದ ಶ್ರೀ ಪ್ರಭುಸ್ವಾಮಿಗಳು; ಪ್ರಕಾಶಕರು: ಸಂಪಾದಕರೇ; ಕಿರೀಟಾಕಾರದ ಅಷ್ಟಪತ್ರ; ಪುಟ: ೬೪. ಬೆಲೆ: ಹನ್ನೆರಡಾಣೆ.

ಶ್ರೀ ಸಾನೆ ಗುರೂಜಿ ಹಾಗೂ ಅವರ ಕೃತಿಗಳು:— ಸಂಪಾದಕರು: ಶ್ರೀ ಬುರ್ಲಿಬಿಂದು ಮಾಧವ ಅವರು; ಪ್ರಕಾಶಕರು: ಮಿಂಚಿನಬಳ್ಳಿ ಚಾವಡಿ, ಧಾರವಾಡ; ಕಿರೀಟಾಕಾರದ ಅಷ್ಟಪತ್ರ ಪುಟ: ೫೩೩. ರೂ. ೬-೮-೦

ಭೂಮಿ ತಾಯಿ:— (ಏಕಾಂಕ ರೂಪಕ) ಬರೆದವರು: ಶ್ರೀ ಲಿಂಗಸುಗೂರು ವಿಠಲರಾಯರು; ಪ್ರಕಾಶಕರು: ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದರಾಬಾದು; ಕಿರೀಟಾಕಾರದ ಅಷ್ಟಪತ್ರ; ಪುಟ: ೧೦೨. ಬೆಲೆ: ರೂ. ೧-೦-೦

ಜಯಗೀತ:— (ಕವನ ಸಂಗ್ರಹ) ಬರೆದವರು: ಶ್ರೀ ಜಯದೇವಿತಾಯಿ ಲಿಗಾಡೆ ಅವರು; ಪ್ರಕಾಶಕರು: ಚ. ಮ. ವಾರದ, ವಾರದವಾಡೆ, ಸೊಲ್ಲಾಪುರ; ಕಿರೀಟಾಕಾರದ ಅಷ್ಟಪತ್ರ; ಪುಟ: ೪೮. ಬೆಲೆ; ರೂ. ೧-೮-೦

ಶಿಲಾವಲ್ಕಗಳು:— (ಕಲ್ಲು ಹೂ) ಬರೆದವರು: ಶ್ರೀ ಎಂ. ಎಸ್. ಎಸ್. ರಾವ್, ಅವರು; ಪ್ರಕಾಶಕರು: ಕೃಷ್ಣಪಬ್ಲಿಷಿಂಗ್ ಹೌಸ್, ಸುಲ್ತಾನ್‌ಪೇಟೆ, ಬೆಂಗಳೂರು; ಫೂಲ್ಸ್‌ಕೇಪ್ ಎಂಟರ ಆಕಾರ; ಪುಟ: ೨೮. ಬೆಲೆ: ೮ ಆಣೆ.

ಅಲ್ಲಯ್ಯನ ಬೆಳಕು:— ಬರೆದವರು: ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯರು; ಪ್ರಕಾಶಕರು: ಪ್ರಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ೨. ಕಿರೀಟಾಕಾರದ ಅಷ್ಟಪತ್ರ; ಪುಟ: ೧೪೪. ಬೆಲೆ: ರೂ. ೧-೮-೦

Early Gangas's of Talakad:— ಬರೆದವರು: ಶ್ರೀ ಎಸ್. ಶ್ರೀಕಂಠಶಾಸ್ತ್ರಿಗಳು; ಪ್ರಕಾಶಕರು: ಲೇಖಕರೇ. ಡೆಮ್ಮಿ ಎಂಟರ ಆಕಾರ ಪುಟ: ೫೬. ಬೆಲೆ; ರೂ. ೨-೮-೦.

ಪರಿಷತ್ತಿನ ಸುದ್ದಿಗಳು

ಸಾಹಿತ್ಯ ಪರೀಕ್ಷೆಗಳು

೧೯೫೨ನೆಯ ಇಸವಿಯ "ಜಾಣ" ಪರೀಕ್ಷೆಯ "**ಪದ್ಯ ಮತ್ತು ನಾಟಕ**" ವಿಭಾಗಕ್ಕೆ ಗೊತ್ತುಮಾಡಿರುವ "ನಾಗಾನಂದ" ಎಂಬ ಪುಸ್ತಕದ ಪ್ರತಿಗಳು ದೊರೆಯುವುದಿಲ್ಲವೆಂದು ತಿಳಿದುಬಂದಿರುವುದರಿಂದ ಆ ಪುಸ್ತಕಕ್ಕೆ ಪ್ರತಿಯಾಗಿ ಆಸ್ಥಾನವಿದ್ವಾನ್ ಶ್ರೀ ವೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರಿಗಳವರ 'ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ' (ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು-೧— ಇವರ ಪ್ರಕಟನೆ) ಎಂಬ ಪುಸ್ತಕವನ್ನು ಗೊತ್ತುಮಾಡಲಾಗಿದೆ.

ಈಗಾಗಲೆ 'ನಾಗಾನಂದ'ದಿಂದ ಪಾಠಗಳನ್ನು ಪ್ರಾರಂಭಿಸಿರುವರು ಅದನ್ನು ಮುಂದುವರಿಸಬಹುದು. ಪ್ರಶ್ನ ಪತ್ರಿಕೆಯಲ್ಲಿ ಎರಡು ಪುಸ್ತಕಗಳಿಂದಲೂ ಪ್ರಶ್ನೆಗಳಿರುತ್ತವೆ.

೧೯೫೨ನೆಯ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಪರೀಕ್ಷೆಗಳಿಗೆ ಕೊಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಸಲುವಾಗಿ ಸಾಹಿತ್ಯ ತರಗತಿಗಳನ್ನು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ನಡಸಲು ಅನುಮತಿ ಕೊಟ್ಟಿದೆ ಮತ್ತು ಆ ಸ್ಥಳಗಳನ್ನು ಕೇಂದ್ರಗಳನ್ನಾಗಿ ಅಂಗೀಕರಿಸಿದೆ.

(೧) ಬೆಂಗಳೂರು; (೨) ಉಡುಪಿ, (ದ. ಕ.); (೩) ಬಂಡಿ, (ತಾಲ್ಲೂಕು: ಕುಷ್ಟಗಿ); (೪) ಮನ್ನಳ್ಳಿ, (ಜಿಲ್ಲೆ: ಬಿದರ್); (೫) ಕಲ್ಯಾಣಿ (ಜಿಲ್ಲೆ: ಬಿದರ್); (೬) ಮೊರಬ; (೭) ಕರಡಕಲ್; (೮) ಹನುಮಸಾಗರ; (೯) ಕಿರೇಸೂರ, (ಪೋಸ್ಟ್: ಹೆಬಸೂರು, ತಾಲ್ಲೂಕು: ಹುಬ್ಬಳ್ಳಿ) (೧೦) ಕುಮಟ, (ಉ. ಕ.); (೧೧) ಗೋಕರ್ಣ, (ಉ. ಕ.); (೧೨) ಬಿಜಾಪುರ; (೧೩) ಶಹಪುರ, (ಡಿ. ಗುಲ್ಬರ್ಗ; (೧೪) ರಂಗಂಪೇಟೆ, (ಸುರಪುರ); (೧೫) ಹಾಸನ; (೧೬) ಸಿದ್ದಾಪುರ (ಉ. ಕ.); (೧೭) ಮುಧೋಳ; (೧೮) ಸಂಕೇಶ್ವರ; (೧೯) ಗುಲ್ಬರ್ಗ; (೨೦) ಗಂಗಾವತಿ; (೨೧) ಗುರುಮಠಕಲ್; (೨೨) ಯಾದಗಿರಿ; (೨೩) ರಾಯಚೂರು.

ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳು ಸಮೀಪವಿರುವ ಆಯಾ ಶಿಕ್ಷಣ ಕೇಂದ್ರದ ವ್ಯವಸ್ಥಾಪಕರೊಡನೆ ಪತ್ರವ್ಯವಹಾರ ನಡಸಬಹುದು. ವ್ಯವಸ್ಥಾಪಕರ ಪೂರ್ಣ ವಿಳಾಸವನ್ನು ಪರಿಷತ್ತಿನ ಕಚೇರಿಯಿಂದ ಪಡೆಯಬಹುದು. ಸ್ವಂತ ವ್ಯಾಸಂಗದ ವಿದ್ಯಾರ್ಥಿಗಳು ಸಮೀಪವಿರುವ ಕೇಂದ್ರದ ಹೆಸರನ್ನು ನಮೂದಿಸಿ ಅಪೇಕ್ಷಾಪತ್ರಗಳನ್ನು ಅರ್ಹತೆ ಪತ್ರ ಮತ್ತು ಪರೀಕ್ಷಾ ಶುಲ್ಕಗಳೊಡನೆ ೧೯೫೨ನೆಯ ಆಗಸ್ಟ್ ಅಂತ್ಯದೊಳಗಾಗಿ ಪರಿಷತ್ತಿಗೆ ಕಳಿಸಿಕೊಡಬೇಕಾಗಿ ಕೋರಿದೆ.

ಇನ್ನೂ ಇತರ ಸ್ಥಳಗಳಲ್ಲಿ ಪರೀಕ್ಷಾ ಕೇಂದ್ರ ತೆರೆಯುವ ಉದ್ದೇಶವಿದೆ. ಹಾಗೆ ಹೊಸದಾಗಿ ಕೊಡುವ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟಿಸಲಾಗುವುದು. ಕನಿಷ್ಠಪಕ್ಷ ೧೫ ಜನ ವಿದ್ಯಾರ್ಥಿಗಳು ಕೂಡುವ ಸ್ಥಳಕ್ಕೆ ಮಾತ್ರ ಕೇಂದ್ರ ಕೊಡಲಾಗುವುದು.

ಬೆಂಗಳೂರು
ತಾ|| ೧೬-೭-೧೯೫೨

ಸಿ. ಕೆ. ನಾಗರಾಜರಾವ್
ಗೌ|| ಕಾರ್ಯದರ್ಶಿಗಳು

ಕಂಬನಿ

ಪರಿಷತ್ತಿನ ಆಜೀವ ಸದಸ್ಯರೂ ನಿವೃತ್ತ ಡಿಸ್ಟ್ರಿಕ್ಟ್ ಜಡ್ಜ್‌ರವರೂ ಆಗಿದ್ದ ಶ್ರೀ ಎಚ್. ನಂಜುಂಡಯ್ಯನವರು ತಾ|| ೨೦-೬-೧೯೫೨ ರಂದು ನಿಧನರಾದರೆಂಬುದನ್ನು ತಿಳಿದು ಬಹಳ ವಿಷಾದಿಸುತ್ತೇವೆ. ದಿವಂಗತರ ಬಂಧುವರ್ಗಕ್ಕೆ ಈ ದುಃಖವನ್ನು ಸಹಿಸಲು ಶಕ್ತಿಯನ್ನೂ, ಮೃತರ ಆತ್ಮಕ್ಕೆ ಸದ್ಗತಿಯನ್ನೂ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಕೆಲವೇ ಪ್ರತಿಗಳನ್ನು ಮಾರಾಟಕ್ಕಿಟ್ಟಿದೆ.

೧. "ಹರಿದಾಸ ಸಾಹಿತ್ಯ"

ಶ್ರೀ ಆರ್. ಎಸ್. ಪಂಚಮುಖಿ, ಎಂ.ಎ.
ಡೈರೆಕ್ಟರ್, ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್, ಧಾರವಾಡ
ಇವರಿಂದ ರಚಿತವಾದುದು.

ಇಂಗ್ಲಿಷ್ ಉಪೋದ್ಘಾತದೊಡನೆ ಬೆಲೆ: ರೂ. ೧೦-೦-೦

ಇಂಗ್ಲಿಷ್ ಉಪೋದ್ಘಾತ ಇಲ್ಲದ ಪ್ರತಿ ರೂ. ೮-೦-೦

(ಅಂಚೆ ವೆಚ್ಚ ಪ್ರತ್ಯೇಕ)

★

೨. ಶ್ರೀ "ಶಿವಶರಣರ ಕೃತಿಗಳು"

ಶ್ರೀ ಸರ್ಪಭೂಷಣ ಶಿವಯೋಗಿ, ಶ್ರೀ ನಿಜಗುಣ ಶಿವಯೋಗಿ, ಶ್ರೀ ಮುಪ್ಪಿನ ಷಡಕ್ಷರಿ,
ಶ್ರೀ ಘನಮಠ ಶಿವಯೋಗಿ, ಶ್ರೀ ಮೈಲಾರ ಬಸವಲಿಂಗ ಶರಣರ
೫೦ ಸುಂದರ ಕೃತಿಗಳ ಸಂಕಲನ.

ಗಾನವಿಶಾರದ
ವೈಣಿಕ ವಿದ್ವಾನ್ ಮೈಸೂರು ಎಲ್. ರಾಜಾರಾವ್
ಅವರ ಸ್ವರಸಂಯೋಜನೆ ಸಹಿತ.

ಬೆಲೆ: ರೂ. ೨-೦-೦
(ಅಂಚೆ ವೆಚ್ಚ ಪ್ರತ್ಯೇಕ)

★

ಪ್ರಕಟನಕಾರರು:
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ ಬೆಂಗಳೂರು-೨.

ಶ್ರೀಕಂಠಯ್ಯ ಅಚ್ಚುಕೂಟ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

Reg. No. M. 3975

Licenced to Post without Prepayment. License No. 6

ಕನ್ನಡ ಸಾಹಿತ್ಯ ಪರಿಷತ್ತು

ಪರಿಷತ್ತಿನ ಪ್ರಕಟನೆಗಳು

೧.	ಕನ್ನಡ ಬಾವುಟ (ಮೂರನೆಯ ಮುದ್ರಣ)	೨	೦	೦
೨.	ಪಂಪ ಭಾರತದ ಕಥೆ (ವಚನ)	೧	೪	೦
೩.	ಪಂಪ ಭಾರತದ ನಿಘಂಟು	೧	೦	೦
೪.	ಪಂಪ ರಾಮಾಯಣದ ಕಥೆ (ವಚನ)	೦	೧೨	೦
೫.	*ಪಂಪ ರಾಮಾಯಣ (೪ನೆಯ ಆಶ್ವಾಸ)	೦	೮	೦
೬.	ಪಂಪ ರಾಮಾಯಣದ ನಿಘಂಟು	೦	೮	೦
೭.	*ತೊರವೆಯ ರಾಮಾಯಣ (ಬಾಲಕಾಂಡ ಸಂಧಿ ೧೩-೧೬)	೦	೩	೯
೮.	ಸೀತಾಪರಿತ್ಯಾಗ (ಜೈಮಿನಿ ಭಾರತದಿಂದ)	೦	೧೨	೬
೯.	ಜೇಮ್ಸ್ ಏಬ್ರಾಮ್ ಗಾರ್‌ಫೀಲ್ಡನ ಚರಿತ್ರೆ : ಕ್ಯಾಲಿಕೊ ಪ್ರತಿ	೧	೮	೦
	ಸಾದಾ ಪ್ರತಿ	೧	೦	೦
೧೦.	ಜ್ಯೋತಿರ್ವಿನೋದಿನಿ	೨	೦	೦
೧೧.	ಹರಿದಾಸರ ಕೃತಿಗಳು (ಸ್ವರಪ್ರಸ್ತಾರ ಸಹಿತ)	೦	೧೫	೦
೧೨.	ಹೂಮಾಲೆ	೦	೧೦	೦
೧೩.	ಕನ್ನಡ ನಾಡಿನ ಚರಿತ್ರೆ: ಭಾಗ ೧ (೨ನೆಯ ಮುದ್ರಣ)	೧	೮	೦
	ಭಾಗ ೨	೧	೧೪	೦
	ಭಾಗ ೩	೧	೦	೦
೧೪.	ವಡ್ಡಾರಾಧನೆ	೨	೮	೦
೧೫.	ಜೈಮಿನಿ ಭಾರತದ ಕನ್ನಡ ಗದ್ಯಾನುವಾದ (ಅಶ್ವಮೇಧಿಕ ಪರ್ವ)	೨	೪	೦
೧೬.	ಹರಿಶ್ಚಂದ್ರನ ರಾಜ್ಯಸಮರ್ಪಣ	೦	೪	೦
೧೭.	ಸರ್ವೋದಯ	೦	೫	೦
೧೮.	ಸೋಮೇಶ್ವರ ಶತಕ	೧	೪	೦
೧೯.	ಸಂಕಲನ	೦	೧೦	೦
೨೦.	ಕುಮಾರವ್ಯಾಸದರ್ಶನ	೦	೨	೦
೨೧.	ಕನ್ನಡದಲ್ಲಿ ಸುಧಾರಣೆಗಳು	೦	೬	೦
೨೨.	ಅರುಂಧತಿ	೦	೪	೦
೨೩.	ಚಂದ್ರಹಾಸೋಪಾಖ್ಯಾನ	೦	೧೨	೦
೨೪	ದೂತವಾಕ್ಯ	೦	೪	೦
೨೫	ಶಿವಶರಣರ ಕೃತಿಗಳು	೨	೦	೦
೨೬.	ಹರಿದಾಸ ಸಾಹಿತ್ಯ– ಇಂಗ್ಲಿಷ್ ಉಪೋದ್ಘಾತದೊಡನೆ	೧೦	೦	೦
	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ....	೮	೦	೦

* ಪ್ರತಿಗಳು ಮುಗಿದಿವೆ.

ಪುಸ್ತಕಗಳನ್ನು ಕೊಳ್ಳುವವರಿಗೆ ಕೆಳಗೆ ಕಂಡಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

ರೂ. ೧೫/ ಮತ್ತು ಮೇಲ್ಪಟ್ಟ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಸೇ. ೧೦ ರಂತೆ,
ರೂ. ೫೦/ ಮತ್ತು ಮೇಲ್ಪಟ್ಟ ಕೊಳ್ಳುವವರಿಗೆ ಸೇ. ೧೫ ರಂತೆ,
ರೂ. ೧೦೦/ ಮತ್ತು ಮೇಲ್ಪಟ್ಟ ಕೊಳ್ಳುವವರಿಗೆ ಸೇ. ೨೦ ರಂತೆ.

ಶ್ರೀಕಂಠಯ್ಯ ಅಚ್ಚುಕೂಟ—ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨. ೧,೧೦೦